ಚಿಂತನ ಬಯಲು

ತ್ರೈಮಾಸಿಕ
ISSN 2278-2192

ಸಂಪುಟ : 11, ಸಂಚಿಕೆ : 2 ಅಕ್ಟೋಬರ್ – ಡಿಸೆಂಬರ್ 2022
Volume : 11, Issue : 2 October - December 2022

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 11, Issue 2, October - December 2022

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size : Dy 1/8

Paper Used : 70 GSM

Pages : 64

Price : Rs. 50

ಮುಖಪುಟ ಛಾಯಚಿತ್ರಗ್ರಹಣ : **Atheetha Brahma**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2972002

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. **ಗೋಪಾಲಕೃಷ್ಣ ಅಡಿಗರ "ಶ್ರೀರಾಮನವಮಿಯ ದಿವಸ" ನಾನು ಕಾಣುವ ಹಾಗೆ**
❖ ರಫು ಸೊಫೀನಾ / 5

2. **ಬುಖನನ್ ವರದಿಯಲ್ಲಿ ದಾಖಲಾದ ಟಿಪ್ಪು**
❖ ಡಾ. ಅಜಕ್ಕಳ ಗಿರೀಶ ಭಟ್ / 17

3. **ಯಳಂದೂರು ತಾಲ್ಲೂಕಿನ ಮಾಂಬಳ್ಳಿಯ ಶಾಸನೋಕ್ತ ಅಧ್ಯಯನ**
❖ ಸತ್ಯಶೀಲ ಜಿ. ಎಂ. / 30

4. **ಎಂ. ಗೋಪಾಲಕೃಷ್ಣ ಅಡಿಗರ ಕಾವ್ಯದಲ್ಲಿ ಸಮಾಜ ಚಿಂತನೆ**
❖ ಡಾ. ಎಚ್.ಕೆ. ವೆಂಕಟೇಶ / 37

5. **ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಉನ್ನತ ಶಿಕ್ಷಣ**
❖ ಡಾ. ಸಂತೋಷಕುಮಾರ್ ಪಿ.ಕೆ.
ಶ್ರೀ ಅಭಿಷೇಕ್ ಹೆಚ್. ಈ / 42

6. **ಧರ್ಮಪಾಲರ ಬ್ಯೂಟಿಫುಲ್ ಟ್ರೀ : ವಸಾಹತುಪೂರ್ವ ಭಾರತೀಯ ಶಿಕ್ಷಣ**
❖ ಎ. ಷಣ್ಮುಖ / 50

ಸಂಪಾದಕೀಯ

ಟಿಪ್ಪು ಸುಲ್ತಾನನು ಅನೇಕ ಜನಪರ ಕಾರ್ಯಗಳನ್ನು ಮಾಡಿದ್ದು, ಅವನನ್ನು ಹಾಡಿ ಹೊಗಳುವ ಲಾವಣಿಗಳಿವೆ ಎಂದು ಅನೇಕ ಇತಿಹಾಸಕಾರರು ಹೇಳುತ್ತಾರೆ. ಟಿಪ್ಪುವಿನ ಮರಣದ ನಂತರದ ದಿನಗಳಲ್ಲಿ ಬುಖಿನನ್ ಎಂಬ ವೈದ್ಯ ಆಗಿನ ಗವರ್ನರ್ ಜನರಲ್ ವೆಲ್ಲೆಸ್ಲಿಯ ಸೂಚನೆಯಂತೆ ಮದರಾಸ್, ಮಲಬಾರ್ ಮತ್ತು ಟಿಪ್ಪುವಿನ ಸ್ವಾಧೀನದಲ್ಲಿದ್ದ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ವರದಿ ಸಲ್ಲಿಸಿದ್ದಾನೆ. ಆದರೆ ಎಲ್ಲೂ ಟಿಪ್ಪುವಿನ ಬಗ್ಗೆ ಒಳ್ಳೆಯ ಅಭಿಪ್ರಾಯ ಅವನಿಗೆ ಸಿಗಲಿಲ್ಲ! ಬುಖಿನನ್ ವರದಿಯನ್ನು ಆಧರಿಸಿದ ಒಂದು ಮುಖ್ಯ ಲೇಖನ ಈ ಸಂಚಿಕೆಯಲ್ಲಿ ಇದೆ. ಪ್ರಸಿದ್ಧ ಸಂಶೋಧಕರಾಗಿದ್ದ ಧರ್ಮಪಾಲ್ ಅವರು ಬ್ಯೂಟಿಫುಲ್ ಟ್ರೀ ಎಂಬ ರೂಪಕವನ್ನು ಇಟ್ಟುಕೊಂಡು, ಭಾರತದಲ್ಲಿ ಬ್ರಿಟಿಷರ ಕಾಲದಲ್ಲಿ ಇದ್ದ ಶಿಕ್ಷಣದ ಬಗ್ಗೆ ಬರೆದಿದ್ದರು. ಅದರ ಮಹತ್ತ್ವವನ್ನು ವಿವರಿಸುವ ಲೇಖನವನ್ನು ಎ. ಷಣ್ಮುಖ ಬರೆದಿದ್ದಾರೆ. ಇತರ ಲೇಖನಗಳು ಕೂಡ ಓದುಗರಿಗೆ ಹೊಸ ಒಳನೋಟಗಳನ್ನು ನೀಡಬಹುದೆಂಬ ವಿಶ್ವಾಸ ನಮ್ಮದು.

– ಸಂ.

ಗೋಪಾಲಕೃಷ್ಣ ಅಡಿಗರ "ಶ್ರೀರಾಮನವಮಿಯ ದಿವಸ" ನಾನು ಕಾಣುವ ಹಾಗೆ

ರಘು ಸೊಫೀನಾ

ಸಿ–203, ಸಿದ್ಧಿವಿನಾಯಕ, ವಿಮಲ್ ರೆಸಿಡೆನ್ಸಿಯ ಹಿಂದೆ, ಯಶವಂತ ಗೌರವ ಏರಿಯಾ, ನಿರೆಮೊನ ಗೋನ್, ನಲ್ಲಸೊಪರ(ವೆಸ್ಟ್), ಪಾಲ್ಘಾರ್ ಜಿಲ್ಲೆ, ಮಹಾರಾಷ್ಟ್ರ – 401203

(ಹಿಂದಿನ ಸಂಚಿಕೆಯಿಂದ...)

ಈಗ ಈ ಚಿತ್ರದ ಸಂಕೇತಗಳನ್ನು ಅರ್ಥಮಾಡಿಕೊಳ್ಳೋಣ. ಹಂಸವನ್ನು ಅದರ ಅಚ್ಚ ಬಿಳಿ ಬಣ್ಣಕ್ಕಾಗಿ ಆತ್ಮದ ಪ್ರತೀಕವಾಗಿ ಬಳಸಲಾಗುತ್ತದೆಯಂತೆ. ಹಾಲ್ಗಡಲು (ಕ್ಷೀರಸಾಗರ) ಎಂದರೆ ಪ್ರಜ್ಞಾಸಾಗರ; ಅದು ಇಡೀ ವಿಶ್ವದ ಪ್ರಜ್ಞೆ ಅಥವಾ ಚೈತನ್ಯವನ್ನು (universal consciousness / super consciousness) ಸಂಕೇತಿಸುತ್ತದೆ. ಕುಂಡಲಿನಿ ಎಂಬುದು ಶಕ್ತಿಯ ಚಲಿತ (kinetic) ಹಾಗೂ ಸ್ತ್ರೀ ರೂಪವನ್ನು ಬಿಂಬಿಸಿದರೆ, ಪರಮಶಿವ ಆ ಶಕ್ತಿಯ ಸ್ಥಿರ (static) ಹಾಗೂ ಪುರುಷ ರೂಪವನ್ನು ಬಿಂಬಿಸುತ್ತಾನೆ. ಇವೆರಡೂ ಕೂಡಿದಾಗ ಪರಿಪೂರ್ಣಸ್ಥಿತಿ ಉಂಟಾಗುತ್ತದೆ, ಅದು ಆತ್ಮದರ್ಶನದ ಗಳಿಗೆ ಅಥವಾ ಜ್ಞಾನೋದಯದ ಸ್ಥಿತಿ. ಇಲ್ಲಿ ಜ್ಞಾನೋದಯದ ಕಾಲದ ಬೆಳಕಿನ ವಿಸ್ಫೋಟದಿಂದ ಹೊರಹೊಮ್ಮುವ ಕಣ್ಣುಕುಕ್ಕುವ ಬಿಳಿ ಬೆಳಕನ್ನು "ಬೆಳ್ಳಂಬೆಳಕಿನಲಿ" ಎಂದು ವರ್ಣಿಸಲಾಗಿದೆ. ನನಗೆ ಗೊತ್ತಿರುವ ಪ್ರಕಾರ, ಮೂಲ ಸಹಸ್ರಾರದ ವರ್ಣನೆಯ ಹಾಲ್ಗಡಲಿನಲ್ಲಿ ಎಲ್ಲಿಯೂ ಹಲವಾರು ಹಾಯಿ ದೋಣಿಗಳು ಅಥವಾ ಹಡಗುಗಳು ಸಂಚರಿಸುತ್ತಿರುವುದರ ಪ್ರಸ್ತಾಪವಿಲ್ಲ. ವಿಶಾಲ ಕಡಲಿನ ಚಿತ್ರವನ್ನು ನಮ್ಮ ಕಣ್ಮುಂದೆ ತಂದು ನಿಲ್ಲಿಸುವ ಸಲುವಾಗಿ, ಅಡಿಗರು "ಬಿಳಿಹಾಯಿಗಳ ಪರದಾಟ" ಎಂಬ ವರ್ಣನೆಯನ್ನು ಮೂಲಕ್ಕೆ ಹೆಚ್ಚುವರಿಯಾಗಿ ಜೋಡಿಸಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ "ಬಿಳಿಹಾಯಿಗಳ ಪರದಾಟ" ಎಂಬ ವರ್ಣನೆ (ಸಮುದ್ರದ ಮೇಲೆ ಜೋರಾಗಿ ಬೀಸುವ ಗಾಳಿಗೆ ಹಾಯಿಗಳು ಪಟಪಟ ಹೊಡೆದುಕೊಳ್ಳುವುದು ಪರದಾಟದಂತೆ ಕಾಣಿಸುತ್ತದೆ!) ಅಡಿಗರ ವಿಶಿಷ್ಟಛಾಪು ತೋರಿಸುವ ವರ್ಣನೆ ಕೂಡ. ಯಾಕೆಂದರೆ ಅಡಿಗರ ಕಲ್ಪನೆಯ ಕಡಲಿನಲ್ಲಿ ಯಾವಾಗಲೂ ಹಾಯಿದೋಣಿಗಳು ತಿರುಗಾಡುತ್ತಿರುತ್ತವೆ. ಉದಾಹರಣೆಗೆ:

(ಅ) "ಅಳುವ ಕಡಲೊಳೂ ತೇಲಿ ಬರುತಲಿದೆ
ನಗೆಯ ಹಾಯಿದೋಣಿ....."
("ಇದು ಬಾಳು!" ಭಾವತರಂಗ ಸಂಕಲನ)

(ಆ) "ನೀನೆಲ್ಲಿ ಈಗ : ಹೆಗಲಿಗೆ ಹೆಗಲು ಕೊಟ್ಟವನು
ಹಾಯಿಯನ್ನುರುಟುರುಟು ಊದಿದವನು...."
("ಕೂಪಮಂಡೂಕ" ವರ್ಧಮಾನ ಸಂಕಲನ)

ಈಗ ಸರ್ಚ್‌ಲೈಟ್‌ನ ಚಿತ್ರವನ್ನು ಅರ್ಥಮಾಡಿಕೊಳ್ಳೋಣ: ಸಾಮಾನ್ಯವಾಗಿ ಕತ್ತಲಿನಲ್ಲಿ ನುಸುಳಿ ಬರುವ ಶತ್ರುಗಳನ್ನು ಪತ್ತೆ ಹಚ್ಚುವುದಕ್ಕಾಗಿ ಸರ್ಚ್‌ಲೈಟನ್ನು

ಬಳಸಲಾಗುತ್ತದೆ. ಪ್ರಮುಖ ಮಿಲಿಟರಿ ಇನ್‌ಸ್ಟಲೇಶನ್‌ಗಳಿರುವ ಜಾಗಗಳಲ್ಲಿ ರಾತ್ರಿಯ ಹೊತ್ತು ಒಂದು ಎತ್ತರದ ಕಂಬದ ಮೇಲೆ ಸರ್ಚ್‌ಲೈಟ್ ವೃತ್ತಾಕಾರವಾಗಿ ಸುತ್ತುತ್ತಿರುವುದನ್ನು ಕಾಣಬಹುದು. ಈ ಲೈಟ್‌ನ ವೈಶಿಷ್ಟ್ಯವೆಂದರೆ, ಇದನ್ನು ಆನ್ ಮಾಡಿದಾಗ ಕತ್ತಲನ್ನು ಸೀಳಿಕೊಂಡು ಹೋಗುವ ಅಚ್ಚ ಬಿಳಿ ಬಣ್ಣದ ಬೆಳಕಿನ ರಸ್ತೆ ಅಥವಾ ಉದ್ದನೆಯ ಬೆಳಕಿನ ಪಟ್ಟೆ ಏರ್ಪಡುತ್ತದೆ. ಜ್ಞಾನೋದಯದ ಗಳಿಗೆಯಲ್ಲಿ ಸಂಭವಿಸುವ ಬೆಳಕಿನ ವಿಸ್ಫೋಟವನ್ನು ಇಲ್ಲಿ ಉದ್ದಕ್ಕೆ ಹಾಸಿಕೊಳ್ಳುವ ಸರ್ಚ್‌ಲೈಟ್‌ನ ಕ್ರಿಯೆಗೆ ಹೋಲಿಸಲಾಗಿದೆ. ಇಲ್ಲಿನ ಕಲ್ಪನೆಯ ಪ್ರಕಾರ, ಅಂತರಂಗವೆಂಬುದು ಒಂದು ಬೆಳಕಿನ ಗಟ್ಟಿ. ಜ್ಞಾನೋದಯದ ಕಾಲದಲ್ಲಿ ಅದು ಸುರುಳಿಸುರುಳಿಯಾಗಿ ಬೆಳಕಿನ ಹೆದ್ದಾರಿಯಂತೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ; ಅದೇ ಹೊತ್ತಿನಲ್ಲಿ ಒಂದು ವಿಶಿಷ್ಟ ಹೊಳಹಿನ (flash) ರೂಪದಲ್ಲಿ ರಾಮಾಯಣದ ಕತೆಯೂ ಅದರಲ್ಲಿ ಸುರುಳಿಸುರುಳಿಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಈ ಎರಡು ಕ್ರಿಯೆಗಳೂ ಏಕಕಾಲದಲ್ಲಿ ಅಭಿನ್ನವೆಂಬಂತೆ ನಡೆಯುತ್ತವೆ. ಅಂತರಂಗ ಸುರುಳಿಸುರುಳಿಯಾಗಿ ಬಿಚ್ಚಿಕೊಳ್ಳುವುದೇ ಬೆಳಕಿನ ವಿಸ್ಫೋಟ, ಅದೇ ಅಂತರಂಗದ ಸ್ಕ್ಯಾನ್ ಅಥವಾ ಆತ್ಮಾವಲೋಕನ. (ಸರ್ಚ್‌ಲೈಟನ್ನು ಆನ್ ಮಾಡಿದಾಗ ಬಹಿರಂಗದ [ಸುತ್ತಲಿನ ಜಾಗದ] ಸ್ಕ್ಯಾನ್ ನಡೆಯುತ್ತದೆ; ಆದರೆ, ಜ್ಞಾನೋದಯವಾದಾಗ ಅಂತರಂಗದ ಸ್ಕ್ಯಾನ್ ನಡೆಯುತ್ತದೆ. ಸರ್ಚ್‌ಲೈಟ್ ಎಂಬ ಇಂಗ್ಲಿಷ್ ಶಬ್ದದ ಅಕ್ಷರಶಃ ಅರ್ಥ ಇಲ್ಲಿ ಅಡಕವಾಗಿದೆ.) ಅಂದರೆ, ಜ್ಞಾನೋದಯದ ಗಳಿಗೆಯಲ್ಲಿ ಅಥವಾ ಆತ್ಮಾವಲೋಕನದ ಕಾಲದಲ್ಲಿ ಇಡೀ ರಾಮಾಯಣದ ಕತೆ ವಾಲ್ಮೀಕಿಯ ಕಣ್ಣೆದುರು ಒಂದು ಕಾಣ್ಕೆ (vision) ಅಥವಾ ಹೊಳಹಿನ ರೂಪದಲ್ಲಿ ಪ್ರಕಟಗೊಳ್ಳುತ್ತದೆ ಮತ್ತು ಹೆದ್ದಾರಿಯಂತೆ ಸ್ಪಷ್ಟವಾಗಿ ಕಾಣಿಸುತ್ತದೆ ಎಂಬುದು ಇದರ ಸ್ಪಷ್ಟ ನೇರ ಅರ್ಥ. ಇಲ್ಲಿನ ವಿಶೇಷವೆಂದರೆ, ಸರ್ಚ್‌ಲೈಟ್, ಆತ್ಮಾವಲೋಕನ ಮತ್ತು ರಾಮಾಯಣ, ಈ ಮೂರೂ ಸಂಗತಿಗಳನ್ನು ಒಂದೇ ಎಳೆಯಲ್ಲಿ ನೇಯ್ದು ಸಂಕೀರ್ಣತೆಯನ್ನು ಸಾಧಿಸಲಾಗಿದೆ.

ಈಗ ಒಂದು ಕುತೂಹಲದ ಸಂಗತಿಯನ್ನು ಹೇಳುತ್ತೇನೆ: ಅಡಿಗರು ಇಲ್ಲಿ ಹೆದ್ದಾರಿಯಂತೆ ಹಾಸಿಕೊಂಡ ರಾಮಚರಿತದ ಬಗ್ಗೆ ಹೇಳುತ್ತಾರೆ, ಅಲ್ಲವೇ? ಕಾಕತಾಳೀಯವೋ ಅಥವಾ ಉದ್ದೇಶಪೂರ್ವಕವೋ, ಇದು ರಾಮಾಯಣ ಎಂಬ ಶಬ್ದದ ಅರ್ಥವನ್ನೇ ಚಿತ್ರರೂಪದಲ್ಲಿ ಕೊಡುತ್ತದೆ. ಯಾಕೆಂದರೆ, ರಾಮಾಯಣ ಎಂದರೇನೇ (ರಾಮ + ಅಯನ) ರಾಮನ ದಾರಿಅಥವಾ ರಾಮ ಪ್ರಯಾಣ ಮಾಡಿದ ದಾರಿಎಂದರ್ಥ. ಇದು ನಮಗೆ ಹೊಳೆದಾಗ ಮೊದಲು ಆಶ್ಚರ್ಯವಾಗುತ್ತದೆ, ನಂತರ ಯಾವುದೋ ದೊಡ್ಡ ಗುಟ್ಟನ್ನು ಪತ್ತೆ ಮಾಡಿದಷ್ಟು ಖುಷಿಯಾಗುತ್ತದೆ.

ಇಲ್ಲಿ ರಾಮಾಯಣದ ಕತೆ ವಾಲ್ಮೀಕಿಗೆ ಒಂದು ಹೊಳಹಿನಂತೆ (flash) ದೊರೆಯುತ್ತದೆ, ಸರಿಯಷ್ಟೆ. ಇಂತಹ ಆಂತರಿಕ ಕ್ರಿಯೆಯನ್ನು ಅಡಿಗರು "ಅಂತರಂಗದ ಸ್ಫುರಣ" ಅಥವಾ "ಅಂತರ್ನಿರ್ದೇಶನ" ಎಂದು ಕರೆಯುತ್ತಾರೆ. ಅವರು ಕಾವ್ಯ ಅಂತರಂಗದ ಪ್ರಪಂಚಕ್ಕೆ ಸೇರಿದ್ದು, ಅದು ಅಂತರಂಗದ ಅತ್ಯಂತ ಪ್ರಮುಖ ಅಭಿವ್ಯಕ್ತಿ ಎಂದು ಭಾವಿಸುತ್ತಾರೆ. ಅಡಿಗರ ಈ ಹೇಳಿಕೆಗಳನ್ನು ನೋಡಿ:

"ಕಾರ್ಯಕಾರಣಗಳ ತರ್ಕ ಪ್ರಪಂಚದಾಚೆಗಿನ, ಪ್ರಾಕೃತಿಕ ಶಕ್ತಿಯಂಥ ಯಾವುದೋ ಅಂತಃಸ್ಫುರಣ, ಸಾರ್ಥಕ ಕಾವ್ಯರಚನೆಯಲ್ಲಿ ಮಾನವಾತೀತ ಎನ್ನುವ

ಹಾಗೆ ಕೆಲಸ ಮಾಡುತ್ತದೆಂಬುದನ್ನೂ ನಾವು ಮರೆಯಬಾರದು. ಒಳ್ಳೆಯ ಕಾವ್ಯ ಬರೆದ ಎಲ್ಲರಿಗೂ ಕೆಲವು ಸಲವಾದರೂ ಅನ್ನಿಸಿರುತ್ತದೆ: 'ವೀರನಾರಾಯಣನೆ ಕವಿ, ಲಿಪಿಕಾರ ಕುವರ ವ್ಯಾಸ' ಎಂದು. ಆ ಅಂತರ್ನಿರ್ದೇಶನವೊಂದಕ್ಕೆ ಮಾತ್ರವೇ ಕವಿ ಬದ್ಧ. ಇನ್ನು ಯಾವುದಕ್ಕೂ ಅಲ್ಲ."[7] (ನೋಡಿ:"ಮೂಲಕ ಮಹಾಶಯರು" ಸಂಕಲನಕ್ಕೆ ಅಡಿಗರ ಸ್ವಂತದ ಮುನ್ನುಡಿ.)

"ಕಾವ್ಯ ನಿಜವಾಗಿಯೂ ನಮ್ಮ ಅಂತರಂಗ ಪ್ರಪಂಚಕ್ಕೆ ಸೇರಿದ್ದು; ಕೊನೆಗೊಳ್ಳುವ ಬದುಕಿಗಲ್ಲ . ಬಹುಶಃ ನಮ್ಮಲ್ಲಿ ಇರಬಹುದಾದ ಅಮರತ್ವದ ಅಂಶಕ್ಕೂ ಅದಕ್ಕೂ ಸಂಬಂಧವಿರಬೇಕು..." (ನೋಡಿ: "ಸಮಗ್ರ ಕಾವ್ಯ"ಕ್ಕೆ ಅಡಿಗರ ಸ್ವಂತದ ಮುನ್ನುಡಿ.)

ಒಟ್ಟಾಗಿ ಜ್ಞಾನೋದಯವನ್ನು ವರ್ಣಿಸುವ ಈ ಪದ್ಯದಲ್ಲಿ (stanza) ಎರಡು ಮುಖ್ಯ ಚಿತ್ರಗಳಿವೆ: (ಅ) ಹಾಲ್ಗಡಲಿನ ಚಿತ್ರ ಮತ್ತು (ಆ) ಸರ್ಚ್‌ಲೈಟ್‌ನ ಚಿತ್ರ.

ಮೊದಲ ಚಿತ್ರದಲ್ಲಿರುವ ಹಾಲ್ಗಡಲು, ರಾಜಹಂಸ ಮತ್ತು ದೋಣಿಯ ಹಾಯಿ, ಎಲ್ಲವೂ ಬಿಳಿಯ ಬಣ್ಣದವೇ; ಮೇಲಾಗಿ ಬೆಳ್ಳಂಬೆಳಕು ಇವೆಲ್ಲವನ್ನೂ ಆವರಿಸಿದೆ. ಇಂತಹ ಒಂದು ಚಿತ್ರವನ್ನು ವಾಸ್ತವದಲ್ಲಿ ಸೃಷ್ಟಿಸುವುದು ಒಬ್ಬ ಪೆಯಿಂಟರ್‌ಗೆ ಅಥವಾ ಫೋಟೋಗ್ರಾಫರ್‌ಗೆ ಮಹಾಪ್ರಯಾಸದ ಕೆಲಸವಾಗಬಹುದು. ಪೆಯಿಂಟರ್‌ಒಂದುವೇಳೆ ಸಫಲನಾದರೂ ಫೋಟೋಗ್ರಾಫರ್ ಸಫಲನಾಗದೆ ಇರಬಹುದು. ಯಾಕೆಂದರೆ ಇಲ್ಲಿ ಒಟ್ಟಾಗಿ ಇದು ಬಿಳಿ ಬಣ್ಣವನ್ನು ಹೇಳುವ ಚಿತ್ರವಾದರೂ, ಇಲ್ಲಿನ ವಿವರಗಳಲ್ಲಿರುವ ಬಿಳಿಯ ಬೇರೆಬೇರೆ ಶೇಡ್‌ಗಳನ್ನು, ಅಂದರೆ ಹಾಲು, ಹಂಸ, ಹಾಯಿಯ ಬಿಳಿ ಬಣ್ಣಗಳ ನಡುವಿನ ಸೂಕ್ಷ್ಮ ವ್ಯತ್ಯಾಸಗಳನ್ನು ಸೆರೆ ಹಿಡಿಯುವುದು ಕ್ಯಾಮರಾ ಲೆನ್ಸ್‌ಗೆ ಸಾಧ್ಯವಾಗದೆ ಇರಬಹುದು. (ಮನುಷ್ಯನ ಕಣ್ಣಿನ ಸೂಕ್ಷ್ಮತೆಗೆ ಹೋಲಿಸಿದರೆ ಲೆನ್ಸ್‌ನ ಸೂಕ್ಷ್ಮತೆ ತುಂಬಾ ಸೀಮಿತವಾದದ್ದು.)[8,9]

ಎರಡನೆಯ ಚಿತ್ರದಲ್ಲಿ ನಮ್ಮನ್ನು ಚಕಿತಗೊಳಿಸುವುದು ಅಡಿಗರ ಮೌಲಿಕ (radical) ಚಿಂತನಾಕ್ರಮ. ಜ್ಞಾನೋದಯ ಎನ್ನುವುದು ವ್ಯಕ್ತಿನಿಷ್ಠ ಘಟನೆ, ಅದು ವಸ್ತುನಿಷ್ಠವಲ್ಲ. ಅಂದರೆ ಸಂಬಂಧಿತ ವ್ಯಕ್ತಿಗೆ ಅದು ಗೊತ್ತಾಗುತ್ತದೆಯೇ ಹೊರತು ಹೊರಗಿನವರಿಗಲ್ಲ. ಆಧ್ಯಾತ್ಮಿಕ ಅನುಭವವಾದ ಈ ಜ್ಞಾನೋದಯವನ್ನು ಮಿಲಿಟರಿ ಭದ್ರತೆಯ ಸರ್ಚ್‌ಲೈಟ್‌ನ ಕ್ರಿಯೆಗೆ ಹೋಲಿಸಿ, ಕಣ್ಣಿಗೆ ಕಾಣದ ಜ್ಞಾನೋದಯಕ್ಕೆ ಕಣ್ಣಿಗೆ ಕಾಣುವ ಮೂರ್ತಚಿತ್ರದ ರೂಪ ಕೊಟ್ಟು ಓದುಗನಿಗೆ ಅದು ಒಂದು ದೃಶ್ಯ ಅನುಭವವಾಗಿ ದೊರೆಯುವಂತೆ ಮಾಡುತ್ತಾರೆ.

"ಅಂತರಂಗದ ಸುರಳಿ ಬಿಚ್ಚಿ ಸರ್ಚ್‌ಲೈಟಲ್ಲಿ" ಎಂಬ ಸಾಲಿನಲ್ಲಿ ಒಂದಕ್ಕೊಂದು ಹೆಣೆದುಕೊಂಡು ಅನುರಣನಗೊಳ್ಳುತ್ತಾ ಹೋಗುವ ಶಬ್ದಗಳು ಸುರುಳಿಸುರುಳಿಯಾಗಿ ಅಂತರಂಗ ಬಿಚ್ಚಿಕೊಳ್ಳುತ್ತಾ ಹೋಗುವ ಕ್ರಿಯೆಯನ್ನು ಲಯದಲ್ಲಿ ಸೃಷ್ಟಿಸಿದರೆ, "ಹೆದ್ದಾರಿ ಹಾಸಿದ್ದ ರಾಮಚರಿತ" ಎಂಬ ಸಾಲಿನಲ್ಲಿ ಒಂದರ ನಂತರ ಒಂದರಂತೆ ಬರುವ ದೀರ್ಘಗಳುಬೆಳಕು ಸಪಾಟಾಗಿ ಸುಗಮವಾಗಿ ಹೆದ್ದಾರಿಯಂತೆ ಹಾಸಿಕೊಳ್ಳುವ ಕ್ರಿಯೆಯನ್ನು ಲಯದಲ್ಲಿ ಸೃಷ್ಟಿಸುತ್ತವೆ.

ಇದೇ ಸಂದರ್ಭದಲ್ಲಿ ಒಂದು ಕುತೂಹಲದ ಸಂಗತಿಯನ್ನು ಹೇಳಲು ಇಷ್ಟಪಡುತ್ತೇನೆ: ಸಂಸ್ಕೃತದಲ್ಲಿ ಅಥವಾ ಕನ್ನಡದಲ್ಲಿ ನಾವು ಬಳಸುವ "ಜ್ಞಾನೋದಯ" ಎಂಬ ಶಬ್ದ ಮನುಷ್ಯನ ಆಂತರಿಕ ಕ್ರಿಯೆಯೊಂದನ್ನು ಅಮೂರ್ತ ರೂಪದಲ್ಲಿ ವರದಿ

ಮಾಡುವ ಮಾಹಿತಿ ಶಬ್ದ ಮಾತ್ರ. ಆದರೆ, ಇದನ್ನೇ ಹೇಳುವ illumination ಮತ್ತು enlightenment ಎಂಬ ಇಂಗ್ಲಿಷ್ ಶಬ್ದಗಳು ನಮ್ಮ ಕಣ್ಮುಂದೆ ಥಟ್ಟನೆ ಮೂರ್ತರೂಪದ ಬೆಳಕಿನ ಚಿತ್ರವನ್ನು ತಂದು ನಿಲ್ಲಿಸುತ್ತವೆ!!

ಸಂಕಲ್ಪಬಲದ ಜಾಗರಣೆ; ಕತ್ತಲಿನೆಡೆಗೆ
ಕಣೆ, ದಂಡಕಾರಣ್ಯಕ್ಕೆ ಹಗಲದೊಣ್ಣೆ ;
ಮಣ್ಣಿನಣುಗಿಯ ಸೆಳವಿನಲ್ಲಿ ಲಂಕೆಗೆ ಬೆಂಕಿ;
ಸುಟ್ಟಲ್ಲದೇ ಮುಟ್ಟಿನೆಂಬುಡಾಫೆ.

ಹಿಂದಿನ ಪದ್ಯದಲ್ಲಿ, ವಾಲ್ಮೀಕಿಗೆ ರಾಮಾಯಣದ 'ಕತೆ ಹೊಳೆದ'ಪ್ರಸ್ತಾಪವಿತ್ತು. ಈ ಪದ್ಯ ಆ ಕತೆಯ ಸ್ಥೂಲ ಆಕಾರ ಅಥವಾ ರೂಪರೇಖೆಯನ್ನು ನೀಡುತ್ತದೆ.

'ಸಂಕಲ್ಪಬಲ' ಅಂದರೆ ಮನಸ್ಸಿನ ನಿರ್ಧಾರ ಶಕ್ತಿ ಅಥವಾ ಇಚ್ಛಾಶಕ್ತಿ (will power). ಎಲ್ಲಾ ಮನುಷ್ಯರಲ್ಲಿಯೂ ಇರುವ ಶಕ್ತಿ ಇದು. ರಾಮನಲ್ಲಿಯೂ ಈ ಶಕ್ತಿಯಿದೆ. ಆದರೆ, ಈ ಸಂದರ್ಭದಲ್ಲಿ, ಈ ಶಬ್ದಗುಚ್ಛಕ್ಕೆ ಹೆಚ್ಚು ಸೂಕ್ತವಾದ ಇನ್ನೊಂದು ಅರ್ಥವಿದೆ: ಒಂದು ಮುಖ್ಯ ಕೆಲಸ ಮಾಡುವ ಮೊದಲು ನಾನು ಇಂತಹದನ್ನು ಖಂಡಿತ ಸಾಧಿಸುತ್ತೇನೆ ಎಂದು ದೃಢ ನಿರ್ಧಾರ ಮಾಡುವ ಒಂದು ಕ್ರಿಯಾವಿಧಿ 'ಸಂಕಲ್ಪ' (vow). ರಾಮ ಎಲ್ಲರಂತಹ ಒಬ್ಬ ಮನುಷ್ಯನೇ ಆದರೂ ಆತ ಮನುಷ್ಯರೂಪದಲ್ಲಿರುವ ಅವತಾರಪುರುಷ. ಎಲ್ಲಾ ಅವತಾರಗಳ ಹಿಂದೆಯೂ ಒಂದು ಸಂಕಲ್ಪವಿರುತ್ತದೆ : ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಮತ್ತು ಧರ್ಮಸಂಸ್ಥಾಪನೆ (ಈ ಮೊದಲೇ ಇದನ್ನು ಸ್ಪಷ್ಟಪಡಿಸಲಾಗಿದೆ). ಇಲ್ಲಿ ಋಷಿಗಳ ದೂರು ನಿಮಿತ್ತ ಮಾತ್ರ. ಅದು ಮಣ್ಣಿನ ರಾಮನಲ್ಲಿ ಹುದುಗಿ ಕುಳಿತಿರುವ ಅವತಾರಪುರುಷನನ್ನು ಬಡಿದೆಬ್ಬಿಸುವ ('ಸಂಕಲ್ಪಬಲದ ಜಾಗರಣೆ') ಸಾಧನವಾಗಿ ಬರುತ್ತದೆ ಮತ್ತು ಆತನನ್ನು ತನ್ನ ಮೂಲ ಉದ್ದೇಶದ ಕಡೆಗೆ ಕಾರ್ಯಪ್ರವೃತ್ತನಾಗುವಂತೆ ಮಾಡುತ್ತದೆ.

ಇಲ್ಲಿನ 'ಕತ್ತಲಿನೆಡೆಗೆ ಕಣೆ' ಮತ್ತು 'ಹಗಲ ದೊಣ್ಣೆ' ಎಂಬ ಚಿತ್ರಗಳು ರಾಮನನ್ನು ಬಣ್ಣಿಸಲು ಈ ಹಿಂದೆಯೇ ಬಂದಿರುವ "ಗರಿಷ್ಠ ತೇಜದ ಮೊನೆ" ಎಂಬ ಚಿತ್ರದ ನೇರ ಮುಂದುವರಿಕೆಗಳು. ರಾಮ ಕತ್ತಲನ್ನು (ರಾಕ್ಷಸರನ್ನು) ಭೇದಿಸುವ ಬೆಳಕಿನ ಬಾಣವಾಗಿ (ಕಣೆಯಾಗಿ) ಬರುತ್ತಾನೆ. ರಾಕ್ಷಸರಿಂದ ತುಂಬಿಕೊಂಡ ದಂಡಕಾರಣ್ಯ ಕತ್ತಲ ಕಾಡಿನಂತೆ; ಪ್ರಖರ ಬೆಳಕಿನಂತಹ ರಾಮ ಆ ಕತ್ತಲನ್ನು ಹೊಡೆದಟ್ಟುವ ಹಗಲ ದೊಣ್ಣೆಯಂತೆ. ಅಂದರೆ, ರಾಮ ದಂಡಕಾರಣ್ಯದ ರಾಕ್ಷಸರನ್ನು ನಾಶಪಡಿಸಿ, ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣದ ತನ್ನ ಉದ್ದೇಶವನ್ನು ಸಾಧಿಸುತ್ತಾನೆ ಎಂದು ಹೇಳುವುದು ಈ ಚಿತ್ರಗಳ ಉದ್ದೇಶ.

'ಕತ್ತಲಿನೆಡೆಗೆ ಕಣೆ' ಮತ್ತು 'ಹಗಲ ದೊಣ್ಣೆ' ಎಂಬ ಚಿತ್ರಗಳು ರಾಮನನ್ನು ಬಣ್ಣಿಸಲು ಈ ಹಿಂದೆಯೇ ಬಂದಿರುವ "ಗರಿಷ್ಠ ತೇಜದ ಮೊನೆ" ಎಂಬ ಚಿತ್ರದ ನೇರ ಮುಂದುವರಿಕೆಗಳು. ಇಲ್ಲಿನ ಕಲ್ಪನೆಯ ಪ್ರಕಾರ, ರಾಮ ಬೆಳಕು ಮತ್ತು ರಾಕ್ಷಸರು ಕತ್ತಲು. ಬೆಳಕು ಬರುತ್ತಲೇ ಕತ್ತಲೆ ಮಾಯವಾಗುತ್ತದೆ, ಅಲ್ಲವೇ? ಆದ್ದರಿಂದ, ರಾಮ ಕತ್ತಲನ್ನು (ರಾಕ್ಷಸರನ್ನು) ಭೇದಿಸುವ ಬೆಳಕಿನ ಕಣೆ ಅಥವಾ ಬಾಣವಾಗುತ್ತಾನೆ. ರಾಕ್ಷಸರಿಂದ ತುಂಬಿಕೊಂಡಿರುವ ದಂಡಕಾರಣ್ಯ ಕತ್ತಲ ಕಾಡಿನಂತೆ. ಆ ರಾಕ್ಷಸರನ್ನು ಸದೆಬಡಿಯುವ ರಾಮ ಹಗಲು ಬೆಳಕಿನ ಅಥವಾ ಪ್ರಖರ ಬೆಳಕಿನ ದೊಣ್ಣೆಯಂತೆ.

ಒಟ್ಟಿನಲ್ಲಿ, ರಾಮ ದಂಡಕಾರಣ್ಯದ ರಾಕ್ಷಸರನ್ನು ನಾಶಪಡಿಸಿ, ದುಷ್ಟ ಶಿಕ್ಷಣ ಮತ್ತು ಶಿಷ್ಟ ರಕ್ಷಣದ ತನ್ನ ಸಂಕಲ್ಪವನ್ನು ಪೂರೈಸುತ್ತಾನೆ ಎಂದು ಹೇಳುವುದು ಈ ಚಿತ್ರಗಳ ಉದ್ದೇಶ.

ಈ 'ಸಂಕಲ್ಪಬಲದ ಜಾಗರಣೆ' ಎಂಬ ಮಾತನ್ನು ಸರಳವಾಗಿ ರಾಮನ ಇಚ್ಛಾಶಕ್ತಿಯ ಜಾಗರಣೆ ಎಂದೂ ಅರ್ಥೈಸಬಹುದು. ರಾಮ ವನವಾಸಕ್ಕೆ ಹೊರಟಾಗ ತಾನು ಹೇಗಾದರೂ ಮಾಡಿ ಹದಿನಾಲ್ಕು ವರ್ಷ ಕಾಡಿನಲ್ಲಿ ಕಳೆಯಬೇಕು ಎನ್ನುವುದನ್ನು ಬಿಟ್ಟರೆ, ಆತನ ಬದುಕಿಗೆ ಯಾವುದೇ ನಿರ್ದಿಷ್ಟ ಗೊತ್ತು–ಗುರಿ ಇರಲಿಲ್ಲ. ಒಟ್ಟು ದಿನ ಕಳೆಯುವುದಷ್ಟೇ ಬದುಕಿನ ಗುರಿಯಾಗಿತ್ತು. ಒಂದರ್ಥದಲ್ಲಿ ಆತನ ಇಚ್ಛಾಶಕ್ತಿಯೇ ಮಾಯವಾಗಿ ಹೋಗಿತ್ತು ಎನ್ನಬಹುದು. ರಾಮ ಕ್ಷತ್ರಿಯ, ರಾಜನ ಮಗ; ಋಷಿಗಳು ಆತನ ಹತ್ತಿರ ದೂರು ತಂದಾಗ, ಮಾಯವಾಗಿ ಹೋಗಿದ್ದ ಆತನ ಇಚ್ಛಾಶಕ್ತಿ ಪುನಃ ಜಾಗೃತಗೊಳ್ಳುತ್ತದೆ. ಜನಹಿತದ ಕಾರ್ಯ ಆತನ ಗುರಿಯಾಗುತ್ತದೆ. ಅದರ ಪರಿಣಾಮವಾಗಿ ಬೆಳಕು ಕತ್ತಲನ್ನು ನಾಶಪಡಿಸುವ ಹಾಗೆ ರಾಮ ರಾಕ್ಷಸರನ್ನು ಹತ್ತಿಕ್ಕುತ್ತಾನೆ. ...'ಸಂಕಲ್ಪಬಲದ' ಈ ಎರಡನೆಯ ಅರ್ಥವನ್ನು ಮಾತ್ರವೇ ನಾವು ಪರಿಭಾವಿಸಿದರೆ, ಗರಿಷ್ಠ ತೇಜದ ಮೊನೆ ಎಂಬ ರಾಮನ ವರ್ಣನೆಗೂ, ಕತ್ತಲಿನೆಡೆಗೆ ಕಣೆ ಮತ್ತು ಹಗಲದೊಣ್ಣೆ ಎಂಬ ಆತನ ಕ್ರಿಯೆಗಳಿಗೂ ಇರುವ ನೇರ ಸಂಬಂಧವನ್ನು ನಾವು ಕಡೆಗಣಿಸಿದಂತಾಗುತ್ತದೆ. ಅದರಿಂದ ಚಿತ್ರಗಳ ಅರ್ಥ–ಶ್ರೀಮಂತಿಕೆಗೆ ಕುಂದು ಬರುತ್ತದೆ. ಆದ್ದರಿಂದ 'ಸಂಕಲ್ಪಬಲದ' ಎರಡು ಅರ್ಥಗಳನ್ನೂ ಗಣನೆಗೆ ತೆಗೆದುಕೊಳ್ಳುವುದು ಯುಕ್ತವಾದದ್ದು ಎಂದು ನಾನು ಭಾವಿಸುತ್ತೇನೆ.

"ಮಣ್ಣಿನಣುಗಿಯ ಸೆಳವಿನಲ್ಲಿ" ಎಂಬುದು ಮೇಲುನೋಟಕ್ಕೇ ಆಕರ್ಷಕವಾಗಿ ಕಾಣುವ ಪ್ರಯೋಗ. 'ಅಣುಗಿ' ಅಂದರೆ ಮಗಳು ಅಥವಾ ಕೂಸು ಎಂದರ್ಥ. ಹೆಚ್ಚಾಗಿ ಯಕ್ಷಗಾನದ ಪದಗಳಲ್ಲಿ (ಹಾಡುಗಳಲ್ಲಿ) ಬಳಸಲ್ಪಡುವ ಶಬ್ದ ಇದು. ಇಲ್ಲಿನ 'ಮಣ್ಣು' ಎಂಬ ಶಬ್ದಕ್ಕೆ ಬೇರೆಬೇರೆ ಅರ್ಥಗಳಿವೆ ಎಂದು ನಾನು ಭಾವಿಸಿದ್ದೇನೆ.

ಮಣ್ಣು 1 : ರಾಮ ಆಕಾಶದಿಂದ ಇಳಿದು ಬಂದ 'ಗರಿಷ್ಠ ತೇಜವೇ' ಆದರೂ, 'ಮಣ್ಣುಟ್ಟು' ಮೈತಾಳಿದವನು ಅವನು. ಆದ್ದರಿಂದ ಮಣ್ಣೇ ಆತನ ಕರ್ಮಭೂಮಿ. ಅದಕ್ಕನುಗುಣವಾಗಿ, ಆತನಿಗೆ ಜೀವನಸಂಗಾತಿಯಾಗಿ ಸಿಗುವವಳು 'ಮಣ್ಣಿನಣುಗಿ' ಸೀತೆ. ಗದ್ದೆಯನ್ನು ಉಳುವಾಗ ನೇಗಿಲ ಅಡಿಯಲ್ಲಿ ಸಿಕ್ಕ, ಮಣ್ಣಿನ ಬದುಕಿನ ಸಕಲ ಗುಣಗಳನ್ನೂ ಮೈಗೂಡಿಸಿಕೊಂಡ 'ಮಣ್ಣಿನ ಕೂಸು' ಇವಳು. ('ಸೀತಾ' ಎಂಬ ಹೆಸರು ಕೂಡ ಮಣ್ಣಿನಿಂದ ಬಂದ ಹೆಸರೇ!! ಉಳುವಾಗ ನೇಗಿಲಸಾಲು ಮಾಡುವ ತೆಳ್ಳನೆಯ ತೋಡನ್ನು ಅಥವಾ ಸೀಳುಗೆರೆಯನ್ನು [furrow] ಸಂಸ್ಕೃತದಲ್ಲಿ 'ಸೀತಾ' ಎನ್ನುತ್ತಾರೆ.) ಮೇಲಾಗಿ, ಭೂದೇವಿಯ ಮಗಳು ಇವಳಾದ್ದರಿಂದ ರಾಮನಂತೆ ಈಕೆಯೂ ದೈವಾಂಶ ಸಂಭೂತೆ.

ಮಣ್ಣು 2 : ಅಡಿಗರ ಕಾವ್ಯಭಾಷೆಯಲ್ಲಿ 'ಮಣ್ಣು' ಎಂಬ ಶಬ್ದಕ್ಕೆ ಇನ್ನೂ ಒಂದು ಅರ್ಥವಿದೆ. ಅವರ ಪ್ರಸಿದ್ಧ "ಮೋಹನ ಮುರಲಿ" ('ಕಟ್ಟುವೆವು ನಾವು' ಸಂಕಲನ) ಕವನದಲ್ಲಿ ಮೊದಲ ಬಾರಿಗೆ ಸಾಕಷ್ಟುಸ್ಪಷ್ಟವಾಗಿ ಈ ಅರ್ಥ ರೂಪುಗೊಳ್ಳುತ್ತಿರುವುದು ಕಂಡುಬರುತ್ತದೆ. "ಒಲಿದ ಮಿದುವೆದೆ, ರಕ್ತಮಾಂಸದ ಬಿಸಿದುಸೋಂಕಿನ ಪಂಜರ"– ಇಷ್ಟೇ ಸಾಕು ಎಂದುಕೊಂಡಿದ್ದ ನಾಯಕನ "ಮಣ್ಣಿನ ಕಣ್ಣನ್ನು" ಯಾವುದೋ "ದಿವ್ಯದ ಯಾಚನೆ" ಕಾಡತೊಡಗುತ್ತದೆ! ಅಂದರೆ, ಇಲ್ಲಿ 'ಮಣ್ಣು' ಕಾಮ–ಪ್ರೇಮದ

ಅಥವಾ ಭೋಗದ ಸಂಕೇತವಾಗಿ ಕೆಲಸ ಮಾಡುತ್ತದೆ ಮತ್ತು 'ದಿವ್ಯ' ಮಣ್ಣಿಗೆ ವಿರುದ್ಧದ ವಸ್ತುವಾಗಿ, ಆಧ್ಯಾತ್ಮಿಕದ ಕರೆಯಾಗಿ ಕೆಲಸ ಮಾಡುತ್ತದೆ. (ಮಣ್ಣು ದಿವ್ಯಕ್ಕೆ ವಿರುದ್ಧವಾದದ್ದು; ಆದ್ದರಿಂದಲೇ ಅದು ದಿವ್ಯಕ್ಕೆ ಪೂರಕವಾದದ್ದು ಕೂಡ. ಅಡಿಗರ ಕಾವ್ಯದಲ್ಲಿ ಮಣ್ಣಿಗೆ ಸದಾ ದಿವ್ಯದ ಹಂಬಲ ಈ ಕಾರಣಕ್ಕಾಗಿಯೇ!)

ಮೇಲಿನ ಎರಡು ಅರ್ಥಗಳೂ ಸೀತೆಗೆ ಅನ್ವಯಿಸುತ್ತವೆ. ಈ ಮಣ್ಣಿನ ಬದುಕಿನಲ್ಲಿ ಸೀತೆ ರಾಮನ ಧರ್ಮಪತ್ನಿ. ಆದ್ದರಿಂದ ಆಕೆಯನ್ನು ಹುಡುಕಿ ತರುವುದು ರಾಮನ ಆದ್ಯ ಕರ್ತವ್ಯ (ಮಣ್ಣು 1); ಆ ಕರ್ತವ್ಯಕ್ಕೆ ತೀವ್ರತೆಯನ್ನೂ ತುರ್ತನ್ನೂ ತಂದುಕೊಡುವುದು ಆಕೆಯ ಕಾಮ–ಪ್ರೇಮದ ಸೆಳವು (ಮಣ್ಣು 2).

ಮೊದಲು ರಾಕ್ಷಸರ ಕಾಟ ಕೇವಲ ಋಷಿಗಳ ಸಮಸ್ಯೆಯಾಗಿತ್ತು. ಆದರೆ, ಸೀತೆಯ ಅಪಹರಣದ ನಂತರ ಅದು ರಾಮನ ಸ್ವಂತದ ಸಮಸ್ಯೆಯಾಗುತ್ತದೆ. ತನ್ನ ಪ್ರೀತಿಯ ಪತ್ನಿಯನ್ನು ಕಳೆದುಕೊಂಡ ರಾಮ ಪ್ರಕ್ಷುಬ್ಧನಾಗುತ್ತಾನೆ. ಈ ತನಕ ಆತ ಕೇವಲ ಕರ್ತವ್ಯವಾಗಿ ಮಾಡುತ್ತಿದ್ದ ಜನಹಿತದ ಕಾರ್ಯಕ್ಕೆ ಈಗ ತನ್ನದೇ ಹಿತದ ವೈಯಕ್ತಿಕ ತುರ್ತು ತೀವ್ರತೆ ಸೇರಿಕೊಳ್ಳುತ್ತವೆ. ಅಂದರೆ, ಅವತಾರಪುರುಷ ರಾಮ ಮತ್ತು ಎಲ್ಲರಂತೆಯೇ ತನ್ನ ಹೆಂಡತಿಯನ್ನು ಪ್ರೀತಿಸುವ ಗಂಡ ರಾಮ – ಒಂದೇ ವ್ಯಕ್ತಿಯ ಎರಡು ಭಿನ್ನ ಮುಖಗಳು – ಈ ರಾಮನಲ್ಲಿ ಪರಸ್ಪರ ಬೆಸೆದುಕೊಂಡು ಕೆಲಸ ಮಾಡತೊಡಗುತ್ತವೆ ಎಂಬುದನ್ನು ನಾವು ಗಮನಿಸಬೇಕು.

'ಲಂಕೆಗೆ ಬೆಂಕಿ' ಮತ್ತು 'ಸುಟ್ಟಲ್ಲದೆ ಮುಟ್ಟೆ' ಇವೆರಡೂ ಬೆಂಕಿಯ ಪ್ರಸಂಗಗಳು. ಒಂದು ಇನ್ನೊಂದರ ಮುಂದಿನ ಘಟ್ಟ ಅನ್ನುವಂತೆ ಇವೆರಡನ್ನೂ ಜೊತೆಯಲ್ಲಿ ಇಡಲಾಗಿದೆ. ಆದರೆ, ಇದು ನಮ್ಮನ್ನು ಪೆದ್ದು ಬೀಳಿಸುವ ಕಾವ್ಯಕಲೆಯ ಸೊಗಸು ಮಾತ್ರ. ವಾಸ್ತವದಲ್ಲಿ ಇವು ಸಂಪೂರ್ಣ ಬೇರೆ ಬೇರೆ ಸಂದರ್ಭಗಳಿಗೆ ಸಲ್ಲುತ್ತವೆ. 'ಲಂಕೆಗೆ ಬೆಂಕಿ' ಸಲ್ಲುವುದು ಹನುಮಂತನಿಗೆ ಮತ್ತು 'ಸುಟ್ಟಲ್ಲದೆ ಮುಟ್ಟೆ' ಸಲ್ಲುವುದು ರಾಮನಿಗೆ.

ಅಶೋಕವನದಲ್ಲಿರುವ ಸೀತೆಯನ್ನು ಪತ್ತೆ ಹಚ್ಚಿದ ನಂತರ ಹನುಮಂತ ರಾವಣನ ಹತ್ತಿರ ಹೋಗಿ ಆಕೆಯನ್ನು ರಾಮನಿಗೆ ಮರಳಿಸುವಂತೆ ಹೇಳುತ್ತಾನೆ. ಅದರಿಂದ ಕುಪಿತರಾದ ರಾವಣನ ಅನುಚರರು ಹನುಮಂತನ ಬಾಲಕ್ಕೆ ಬೆಂಕಿ ಹಚ್ಚುತ್ತಾರೆ. ಅವರಿಗೆ ಬುದ್ಧಿ ಕಲಿಸುವುದಕ್ಕಾಗಿ ಹನುಮಂತ ಮನೆಯಿಂದ ಮನೆಗೆ ಹಾರಿ ಇಡೀ ಲಂಕೆಗೆ ಬೆಂಕಿ ಹಚ್ಚುತ್ತಾನೆ. ಇದು 'ಲಂಕೆಗೆ ಬೆಂಕಿ'.

ರಾವಣನ ವಧೆಯ ನಂತರ ಸೀತೆ ರಾಮನ ಬಳಿ ಬರುತ್ತಾಳೆ. ಆಕೆ ಅಗ್ನಿಪರೀಕ್ಷೆಯ ಮೂಲಕ ತನ್ನ ಪಾವಿತ್ರ್ಯವನ್ನು ಸಿದ್ಧಪಡಿಸಿದ ವಿನಹ ತಾನು ಆಕೆಯನ್ನು ಪುನಃ ಪರಿಗ್ರಹಿಸುವುದಿಲ್ಲ ಎಂದು ರಾಮ ಹೇಳುತ್ತಾನೆ. ಇದು 'ಸುಟ್ಟಲ್ಲದೆ ಮುಟ್ಟೆ' ಎಂಬ ಮಾತಿನ ಅರ್ಥ. ಆದರೆ, ಇದು ಯಾಕೆ 'ಉಡಾಫೆ'ಯ ಮಾತು?

(1) ಸೀತೆ ಪವಿತ್ರಳು ಎಂಬುದು ಗೊತ್ತಿದ್ದೂ ಮತ್ತೊಬ್ಬನ ವಶದಲ್ಲಿದ್ದ ತನ್ನ ಹೆಂಡತಿಯನ್ನು ಮರಳಿ ತಂದಿಟ್ಟುಕೊಂಡರೆ ಜನ ಏನೆಂದುಕೊಳ್ಳುತ್ತಾರೋ ಎಂಬ ಭಯದಿಂದ ರಾಮ ಆಕೆಯನ್ನು ಪರಿಗ್ರಹಿಸಲು ನಿರಾಕರಿಸುತ್ತಾನೆ. ಆದರೆ ಈ ನಿಜವಾದ ಕಾರಣವನ್ನು ಮುಚ್ಚಿಟ್ಟು ಆಕೆ ತಪ್ಪಿತಸ್ಥಳು ಅನ್ನುವಂತೆ ನಾಟಕವಾಡಿ ಬಹಿರಂಗವಾಗಿ ಆಕೆಯ ಪಾವಿತ್ರ್ಯವನ್ನು ಪ್ರಶ್ನಿಸುತ್ತಾನೆ. ಇದು ಉಡಾಫೆ.

(2) ರಾಕ್ಷಸನೊಬ್ಬನ ಕಪಟಕ್ಕೆ ಬಲಿಯಾಗಿ ಈ ತನಕ ಒಂಟಿಯಾಗಿ ಬಂಧನದಲ್ಲಿದ್ದವಳು ಸೀತೆ. ತನ್ನ ಪ್ರೀತಿಯ ಗಂಡನನ್ನು ತಾನು ಎಂದು ಸೇರಿಕೊಂಡೇನು, ಆತನಲ್ಲಿ ತನ್ನ ಅಳಲನ್ನು ಯಾವಾಗ ಹೇಳಿಕೊಂಡೇನು ಎಂದು ಪರಿತಪಿಸುತ್ತಿರುವವಳು ಅವಳು. ಅಂತಹ ಮನಃಸ್ಥಿತಿಯಲ್ಲಿರುವ ಹೆಂಡತಿ ಕೊನೆಗೂ ಸಿಕ್ಕಾಗ, ಗಂಡನಾದವನ ಪ್ರತಿಕ್ರಿಯೆ ಏನಾಗಬೇಕು? ಆಕೆಗೆ ಸಮಾಧಾನ ಮಾಡಿ ಆಕೆಯ ಅಂತರಂಗದ ಗಾಯಗಳನ್ನು ಮಾಯಿಸುವುದೇ ಅಥವಾ ಕಾಡುಪ್ರಾಣಿಯ ಹಾಗೆ ತನ್ನ ಮತ್ತು ತನ್ನ ವಂಶದ ದೊಡ್ಡಸ್ತಿಕೆಯ ಬಗ್ಗೆ ಕೊಚ್ಚಿಕೊಳ್ಳುತ್ತಾ, ನಿನ್ನ ಚಾರಿತ್ರ್ಯದ ಬಗ್ಗೆ ನನಗೆ ಸಂದೇಹವಿದೆ ಎಂದು ಹೇಳುತ್ತಾ ದರ್ಪ ತೋರಿಸುವುದೇ? ರಾಮನ ಈ ಅಹಂಕಾರದ ವರ್ತನೆ ಹೃದಯಹೀನತೆ ಮತ್ತು ಉಡಾಫೆ.

ಕವನದ ಸಂದರ್ಭಕ್ಕೆ ತಕ್ಕಂತೆ 'ಸುಟ್ಟಲ್ಲದೆ ಮುಟ್ಟೆ' ಎಂಬುದು ಯಾಕೆ ಉಡಾಫೆಯ ಮಾತು ಎಂಬ ಬಗ್ಗೆ ಈ ಚರ್ಚೆಯಾಯಿತು. ಆದರೆ, ಈ ಮಾತಿನ ಬಗ್ಗೆಯೇ ನನಗೆ ಸಂಪೂರ್ಣ ವಿರೋಧವಿದೆ. ಯಾಕೆಂದರೆ, ಈ ಕವನಕ್ಕೆ ಆಧಾರವಾಗಿರುವುದು ವಾಲ್ಮೀಕಿ ಮತ್ತು ಆತನ ರಾಮಾಯಣ. ಅದರಲ್ಲಿ ಈ ಸಂದರ್ಭದಲ್ಲಿ ರಾಮ 'ಸುಟ್ಟಲ್ಲದೆ ಮುಟ್ಟೆ' ಎಂಬ ಅರ್ಥದ ಮಾತನ್ನು ಅಪ್ಪಿತಪ್ಪಿಯೂ ಆಡುವುದಿಲ್ಲ. ಅದು ಅಪ್ಪಟ ಸುಳ್ಳು. ಅದು ಹೇಗೋ ಜನರ ಮನಸ್ಸಿನಲ್ಲಿ 'ಸೀತೆ ಅಗ್ನಿಪರೀಕ್ಷೆಯ ಮೂಲಕ ತನ್ನ ಪಾವಿತ್ರ್ಯವನ್ನು ಸಿದ್ಧಪಡಿಸಬೇಕು' ಎಂದು ರಾಮ ಹೇಳುತ್ತಾನೆ ಎಂಬ ತಪ್ಪು ಕಲ್ಪನೆ ಬೆಳೆದುಬಂದಿದೆ. ಸಾವಿರಾರು ವರ್ಷಗಳಿಂದ ಜನಜನಿತವಾಗಿರುವ ಒಂದು ತಪ್ಪು ಕಲ್ಪನೆ ಹೇಗೆ ನಿಜಸ್ಥಿತಿಯನ್ನೇ ಮರೆಮಾಚಬಲ್ಲದು ಎಂಬುದಕ್ಕೆ ಇದು ಒಂದು ಜ್ವಲಂತ ಉದಾಹರಣೆ! ...ಹಾಗಿದ್ದರೆ, ಮೂಲ ರಾಮಾಯಣ ಏನು ಹೇಳುತ್ತದೆ?

ರಾವಣನ ವಧೆಯ ನಂತರ ರಾಮನ ಕೋರಿಕೆಯಂತೆ ಸೀತೆ ಶೃಂಗರಿಸಿಕೊಂಡು ಬರುತ್ತಾಳೆ. ಆದರೆ, ಆತ ಕಣ್ಣೆತ್ತಿಯೂ ಆಕೆಯನ್ನು ನೋಡುವುದಿಲ್ಲ. ಬದಲಿಗೆ, "ನಿನ್ನನ್ನು ರಾಕ್ಷಸನ ಕೈಯಿಂದ ಪಾರು ಮಾಡುವುದು ನನ್ನ ಕರ್ತವ್ಯವಾಗಿತ್ತು. ಅದನ್ನು ನಾನು ಮಾಡಿದ್ದೇನೆ. ಈಗ ನೀನು ಬೇರೆ ಯಾರನ್ನಾದರೂ ಮದುವೆಯಾಗು, ಎಲ್ಲಿಗಾದರೂ ಹೋಗು. ನನಗೆ ನೀನು ಬೇಡ. ಮತ್ತೊಬ್ಬನ ವಶದಲ್ಲಿದ್ದ ತನ್ನ ಹೆಂಡತಿಯನ್ನು ಯಾವ ಸತ್ಕುಲ ಪ್ರಸೂತನು ಪುನಃ ಪರಿಗ್ರಹಿಸುತ್ತಾನೆ?" ಎಂದು ಹೇಳಿ ಆಕೆಯ ಚಾರಿತ್ರ್ಯವನ್ನು ಪ್ರಶ್ನಿಸುತ್ತಾನೆ. ಗಂಡನ ಈ ಅನಿರೀಕ್ಷಿತ ವರ್ತನೆ ಮತ್ತು ಅವಮಾನದಿಂದ ಶೋಕತಪ್ತಳಾದ ಸೀತೆ ಆತ್ಮಹತ್ಯೆ ಮಾಡಿಕೊಳ್ಳುವ ಸಲುವಾಗಿ ಲಕ್ಷ್ಮಣನ ಹತ್ತಿರ ಚಿತೆಯನ್ನು ತಯಾರಿಸಿ ಕೊಡಲು ಹೇಳುತ್ತಾಳೆ, ಆತ ಚಿತೆಯನ್ನು ತಯಾರಿಸಿದಾಗ ಅದರೊಳಗೆ ಧುಮುಕುತ್ತಾಳೆ. ಆದರೆ ಬೆಂಕಿ ಆಕೆಯನ್ನು ಸುಡುವುದಿಲ್ಲ. ಅಗ್ನಿದೇವನೇ ಸ್ವತಃ ಆಕೆಯನ್ನು ಕೈಯಲ್ಲಿ ಎತ್ತಿಕೊಂಡು ಬಂದು "ಈಕೆ ಪವಿತ್ರಳು, ಈಕೆಯನ್ನು ಸ್ವೀಕರಿಸು!" ಎಂದು ರಾಮನಿಗೆ ಹೇಳುತ್ತಾನೆ. ಸೀತೆ ಪವಿತ್ರಳು ಎಂಬುದು ಗೊತ್ತಿದ್ದೂ ಜನಾಪವಾದಕ್ಕೆ ಹೆದರಿ ತಾನು ಆಕೆಯನ್ನು ತಿರಸ್ಕರಿಸಬೇಕಾಯಿತು, ಸೂರ್ಯ ಮತ್ತು ಆತನ ಪ್ರಭೆ ಹೇಗೆ ಬೇರೆಬೇರೆಯಲ್ಲವೋ ಹಾಗೆಯೇ ತಾನು ಮತ್ತು ಸೀತೆ ಬೇರೆಬೇರೆಯಲ್ಲ ಎಂದು ಹೇಳಿ ರಾಮ ಆಕೆಯನ್ನು ಪರಿಗ್ರಹಿಸುತ್ತಾನೆ.

ಅಂದಮೇಲೆ, ಅಗ್ನಿಪರೀಕ್ಷೆಯ ಮೂಲಕ ನೀನು ನಿನ್ನ ಪಾವಿತ್ರ್ಯವನ್ನು ಸಿದ್ಧಪಡಿಸು ಎಂದು ರಾಮ ಹೇಳುತ್ತಾನೆ ಅನ್ನುವುದು ಬೇರೆ ಮತ್ತು ಸೀತೆಯ ಆತ್ಮಹತ್ಯೆಯ ಯತ್ನ

ಅಗ್ನಿಪರೀಕ್ಷೆಯಾಗಿ ಮಾರ್ಪಡುತ್ತದೆ ಅನ್ನುವುದು ಬೇರೆ, ಅಲ್ಲವೇ? (ವಾಲ್ಮೀಕಿಯ ಮೂಲ ಮಾತುಗಳನ್ನು ಟಿಪ್ಪಣಿ 10ರಲ್ಲಿ ಸಂಕ್ಷೇಪದಲ್ಲಿ ಕೊಟ್ಟಿದ್ದೇನೆ. ಆಸಕ್ತರು ಅದನ್ನು ಓದಿನೋಡಬಹುದು.)[10]

ನಿಜಸ್ಥಿತಿ ಗೊತ್ತಿದ್ದೂ ಅಡಿಗರು ಯಾಕೆ ಈ ಮಾತನ್ನು ಬಳಸಿರಬಹುದು? (1) 'ಸುಟ್ಟಲ್ಲದೆ ಮುಟ್ಟೆ' ಎಂಬುದು ಬೆಂಕಿಯ ಪ್ರಸಂಗವಾಗಿ 'ಲಂಕೆಗೆ ಬೆಂಕಿ' ಎಂಬ ಮಾತಿನ ಸಹಜ ಮುಂದುವರಿಕೆಯಾಗಿ 'ಕಂಡುಬಂದು' ನಮ್ಮನ್ನು ಪೆಗ್ಗು ಬೀಳಿಸಬಲ್ಲದು. ಇದು ನಿಜವಾದರೂ, ಇದು ಕಲಾಚಾತುರ್ಯದ ಪ್ರಶ್ನೆ ಮಾತ್ರ. ಆದರೆ, ಇದಕ್ಕಿಂತ ಹೆಚ್ಚು ಮುಖ್ಯವಾದ, ಅಡಿಗರಿಗೆ ವಿಶಿಷ್ಟವಾದ ಇನ್ನೊಂದು ಕಾರಣವಿದೆ. ಅದೆಂದರೆ, (2) ಅಡಿಗರು ಶಬ್ದಕ್ಕೆ ಮತ್ತು ಶಬ್ದಸಂಗೀತಕ್ಕೆ ಸುಲಭವಾಗಿ ಮಾರುಹೋಗುವ ಶಬ್ದಸೂಕ್ಷ್ಮ ಕವಿ. ಅಡಿಗರಂತೆ ಶಬ್ದಸಂಗೀತದ ಆಧಾರದ ಮೇಲೆ ಶಬ್ದಗಳನ್ನು ನೇಯ್ದು ವಿವಿಧ ಪ್ರಕಾರದ ಲಯಗಳನ್ನು ಹುಟ್ಟುಹಾಕಿದ ಕವಿಗಳು ಕನ್ನಡದಲ್ಲಿ ಅತ್ಯಂತ ಅಪರೂಪ. ಇಲ್ಲಿನ 'ಸುಟ್ಟಲ್ಲದೆ ಮುಟ್ಟೆ' ಎಂಬ ಮಾತಿನ ಗತ್ತೇ ಉಡಾಫೆಯದು. ಅದರ ಒರಟು ಭಾಷೆ ಮತ್ತು ಶಬ್ದಗಳ ಗಡಸು ದನಿ ಈ ಶಬ್ದಗುಚ್ಛಕ್ಕೆ ವಿಶಿಷ್ಟ ಮೋಹಕತೆಯನ್ನು ತಂದುಕೊಡುತ್ತವೆ. ಈ ಅಂಶಗಳಿಗೆ ಮರುಳಾಗಿ ಅಡಿಗರು ಈ ಮಾತನ್ನು ಬಳಸಿರಬಹುದು ಎಂದು ನಾನು ಭಾವಿಸುತ್ತೇನೆ. ಆದರೆ, ಶ್ರೇಷ್ಠ ಕವಿಯಾಗಿರುವುದರ ಜೊತೆಗೆ ಸಂಸ್ಕೃತದ ವಿದ್ವಾಂಸರೂ ಆಗಿದ್ದ ಅಡಿಗರಿಗೆ ಮೂಲ ವಾಲ್ಮೀಕಿ ರಾಮಾಯಣ ಗೊತ್ತಿದ್ದಿರಲೇಬೇಕು. ಹಾಗಿದ್ದೂ, ಅವರು ಶಬ್ದಚಾಪಲ್ಯದಿಂದಾಗಿ ಜನಪ್ರಿಯ ತಪ್ಪು ಕಲ್ಪನೆಗೆ ಕುಮ್ಮಕ್ಕು ಕೊಟ್ಟು, ಮೂಲ ರಾಮಾಯಣಕ್ಕೆ ಅಪಚಾರ ಮಾಡಿದ್ದು ಸರಿಯೇ? ಇದು ಒಣ ನೈತಿಕತೆಯ ಪ್ರಶ್ನೆಯಲ್ಲ; ನಮ್ಮ ಒಲವು ಮತ್ತು ನಮ್ಮ ತೆವಲಿಗೆ ತಕ್ಕಂತೆ ಒಂದು ಕೃತಿಯ ಮೂಲ ಪಠ್ಯವನ್ನೇ ತಿರಿಚುವುದು, ಅದನ್ನು ವಿಕೃತಗೊಳಿಸುವುದು ಸರಿಯೇ ಎಂಬ ಪ್ರಶ್ನೆ.

ವಿಜೃಂಭಿಸಿತು ರಾಮಬಾಣ; ನಿಜ. ಕತ್ತಲಿಗೆ
ಹತ್ತೆ ತಲೆ? ನೂರಾರೆ? ಅದು ಅಸಂಖ್ಯ;
ಕತ್ತರಿಸಿದರೆ ಬೆಳೆವ, ಬೆಳೆದು ಕತ್ತಿಗೆ ಬರುವ
ಅನಾದಿ; ಕೋದಂಡ ದಂಡವೂ ಹೀಗೆ ದಂಡ;
ಅಥವಾ ಚಕ್ರಾರ ಪಂಕ್ತಿ.....

'ವಿಜೃಂಭಿಸಿತು' ಅಂದರೆ ಅಬ್ಬರದಲ್ಲಿ ಮೆರೆದಾಡಿತು, ತನ್ನ ಶಕ್ತಿಪ್ರದರ್ಶನ ಮಾಡಿತು ಎಂದರ್ಥ. ಇಲ್ಲಿವಿಜೃಂಭಿಸಿತು ಶಬ್ದದ ಮೊಳಗುವ ದನಿಯೇ ಅದರ ಅರ್ಥವನ್ನು ವ್ಯಂಜಿಸುತ್ತದೆ. "ಕತ್ತರಿಸಿದರೆ ಬೆಳೆವ, ಬೆಳೆದು ಕತ್ತಿಗೆ ಬರುವ" ಒಂದು ತಲೆಯನ್ನು ಕತ್ತರಿಸಿ ಹಾಕಿದರೆ, ಆ ಮುಂಡು ಕುತ್ತಿಗೆಯ ಮೇಲೆ ಇನ್ನೊಂದು ತಲೆ ಹುಟ್ಟಿಬರುತ್ತದೆ. (ಇಲ್ಲಿನ 'ಕತ್ತಿಗೆ ಬರುವ' ಎಂಬ ಮಾತನ್ನು ನಾವು 'ಖಡ್ಗಕ್ಕೆ ಬರುವ' ಎಂದು ಅರ್ಥೈಸಬಾರದು; ಯಾಕೆಂದರೆ ರಾಮ ರಾವಣನ ತಲೆಯನ್ನು ಕತ್ತರಿಸಿದ್ದು ಬಾಣದಿಂದ.) "ಕತ್ತಲಿಗೆ ಹತ್ತೆ ತಲೆ? ನೂರಾರೆ? ಅದು ಅಸಂಖ್ಯ" ಎಂಬ ಸಾಲು ದೇವ ದಾನವ ಸಂಘರ್ಷ, ಒಳ್ಳಿತು ಕೆಡಕಿನ ಸಂಘರ್ಷವನ್ನು ಹೇಳುವ ಹಿಂದಿನ ಪದ್ಯದ ಕತ್ತಲು ಬೆಳಕಿನ ಸಂಘರ್ಷದ ಚಿತ್ರವನ್ನೇ ಮುಂದುವರಿಸುತ್ತದೆ. ರಾವಣನಿಗಿರುವುದು ಹತ್ತು ತಲೆಯಲ್ಲ, ನೂರಲ್ಲ, ಅದು ಅಸಂಖ್ಯ ಎನ್ನುವುದು ಕತ್ತಲು ಅಥವಾ ಕೆಡುಕಿನ

ವ್ಯಾಪಕತೆಯನ್ನು, ಅದರ ವಿವಿಧ ರೂಪಗಳನ್ನು, ಅದಕ್ಕೆ ಕೊನೆಯೇ ಇಲ್ಲ ಎಂಬುದನ್ನು ಹೇಳುತ್ತದೆ. ಈ ಮಾತಿಗೆ ಹೊಂದುವಂತೆಯೇ ಮುಂದೆ ಕತ್ತಲನ್ನು 'ಅನಾದಿ' ಎಂದೂ ಕರೆಯಲಾಗಿದೆ. ಅಂದರೆ, ಕತ್ತಲು ಅಥವಾ ಕೆಡುಕು ಆರಂಭವಾದದ್ದು ಎಲ್ಲಿ ಎಂಬುದು ಯಾರಿಗೂ ಗೊತ್ತಿಲ್ಲ; ಹೇಗಿದ್ದರೂ ಅದಕ್ಕೆ ಕೊನೆಯೆಂಬುದಂತೂ ಇಲ್ಲವೇ ಇಲ್ಲ. ಆದ್ದರಿಂದ ಅದು ಅನಾದಿ ಮತ್ತು ಅನಂತ, ಎರಡೂ ಹೌದು! ಈ ಪ್ರಕ್ರಿಯೆಯನ್ನು ಆಧರಿಸಿ ಕವಿರಾಕ್ಷಸರ ಅಥವಾ ಕತ್ತಲಿನ ಅಥವಾ ಕೆಡುಕಿನ ಮೂಲಸ್ವರೂಪದ ಮೇಲೆ ಬೆಳಕು ಚೆಲ್ಲುತ್ತಾನೆ, ತನ್ನದೇ ಫಿಲಾಸಫಿಯನ್ನು ಸೃಷ್ಟಿಸುತ್ತಾನೆ: "ಕೋದಂಡ ದಂಡವೂ ಹೀಗೆ ದಂಡ; ಅಥವಾ ಚಕ್ರಾರ ಪಂಕ್ತಿ?" ಎಂದು ಕೇಳುತ್ತಾನೆ. ಅಂದರೆ, 'ರಾವಣನ ತಲೆಗಳನ್ನು ಕತ್ತರಿಸಿದಂತೆಲ್ಲಾ ಹೊಸಹೊಸ ತಲೆಗಳು ಹುಟ್ಟಿಬರುತ್ತವೆಯಲ್ಲ; ಆದ್ದರಿಂದ, ರಾಮನ ಬಾಣವೂ (ಕೋದಂಡ ದಂಡವೂ) ಹೀಗೆ ವ್ಯರ್ಥ (ದಂಡ) ಎಂದು ನಾವು ಭಾವಿಸಬೇಕೇ ಅಥವಾ ಇದನ್ನು ಚಕ್ರಾರಪಂಕ್ತಿಯ ಒಂದು ಹಂತ ಎಂದು ಭಾವಿಸಬೇಕೇ?' ಎಂದು ಪ್ರಶ್ನಿಸುತ್ತಾನೆ. ಆದರೆ, ಆತನ ಪ್ರಶ್ನೆಯಲ್ಲೇ ಆತನ ಉತ್ತರವೂ ಇದೆ.

'ಚಕ್ರಾರಪಂಕ್ತಿ' ಅಂದರೆ ಚಕ್ರದ ಕವೆಗಳ (ಆರೆಕಂಬಿಗಳು, spokes) ಸಾಲು. ನಮ್ಮ ಎದುರಿನಲ್ಲಿ ಲಂಬವಾಗಿರುವ (vertical) ಒಂದು ಚಕ್ರವಿದೆ, ಅದು ಸುತ್ತುತ್ತಿದೆ ಮತ್ತು ನಾವು ಎಳ್ಳಷ್ಟೂ ದೃಷ್ಟಿ ಕದಲಿಸದೆ ನೆಟ್ಟ ನೋಟದಿಂದ ಅದನ್ನೇ ನೋಡುತ್ತಿದ್ದೇವೆ ಎಂದು ಭಾವಿಸಿಕೊಳ್ಳೋಣ. ನಮ್ಮ ಕಣ್ಣೆದುರು ಆ ಚಕ್ರದ ಕವೆಗಳು ಒಂದೊಂದಾಗಿ ಹಾಯ್ದುಹೋಗುತ್ತಿವೆ. ನಮ್ಮ ನೇರ ದೃಷ್ಟಿಯಲ್ಲಿರುವ ಕವೆ ರಾವಣನಾದರೆ, ಅದರ ನಂತರ ಬರುವ ಕವೆ ರಾಮ; ಅದರ ನಂತರದ ಕವೆ ದಾನವನಾದರೆ, ಅದರ ನಂತರದ ಕವೆ ದೇವ; ಆ ನಂತರದ ಕವೆ ಕತ್ತಲಾದರೆ, ಆ ನಂತರದ ಕವೆ ಬೆಳಕು; ...ಅಂದರೆ, ನಕಾರ–ಸಕಾರದ ಕವೆಗಳು ಒಂದರ ನಂತರ ಒಂದರಂತೆ ಬರುತ್ತಿರುತ್ತವೆ. ಈ ರಾವಣನನ್ನು ಕೊಲ್ಲಲು ಈ ರಾಮ ಹುಟ್ಟಿದ್ದಾನೆ. ಇವರಿಬ್ಬರೂ ಹೋದಮೇಲೆ ಇನ್ನೊಬ್ಬ ರಾವಣ ಹುಟ್ಟಿಬರುತ್ತಾನೆ; ಅವನನ್ನು ಕೊಲ್ಲಲು ಮತ್ತೊಬ್ಬ ರಾಮ ಹುಟ್ಟಿಬರುತ್ತಾನೆ. ಒಂದು ಕವೆಯ ನಂತರ ಇನ್ನೊಂದು ಕವೆ! ಇದು ಹೀಗೆಯೇ ಮುಂದುವರಿಯುತ್ತಾ ಹೋಗುತ್ತದೆ. ಅಂದರೆ, ಕತ್ತಲು–ಬೆಳಕಿನ, ಒಳ್ಳಿತು–ಕೆಡುಕಿನ ಸಂಘರ್ಷ ನಿರಂತರವಾದದ್ದು; ಕೆಡುಕಿಗೆ ಹೇಗೆ ಕೊನೆಯೇ ಇಲ್ಲವೋ ಹಾಗೆಯೇ ಒಳ್ಳಿತಿಗೂ ಕೊನೆಯಿಲ್ಲ. ಇವು ಚಕ್ರದ ಕವೆಗಳು ಮಾತ್ರ; ಸದಾ ಸುತ್ತುತ್ತಿರುತ್ತವೆ, ಅಷ್ಟೆ!

ಟಿಪ್ಪಣಿ : 7

ಪ್ರಾಸಂಗಿಕವಾಗಿ ಈ ಮಾತು: ಪುರಾತನ ಋಷಿಗಳು ನಮಗೆ ನೀಡಿರುವ ಹಲವಾರು ಮಂತ್ರಗಳು ಸತತ ತಪಸ್ಸಿನ ಕಾರಣವಾಗಿ ಅವರಿಗೆ ಅಂತಃಸ್ಫುರಣದಿಂದ ಲಭ್ಯವಾದವುಗಳು ಎಂದು ಹೇಳಲಾಗುತ್ತದೆ. ಉದಾಹರಣೆಗೆ, ಋಷಿ ವಿಶ್ವಾಮಿತ್ರ ಮೂಲತಃ ಒಬ್ಬ ಕ್ಷತ್ರಿಯ ರಾಜನಾಗಿದ್ದ. ಮುಂದೆ ಆತ ಸತತ ತಪಸ್ಸು ಮಾಡಿ ಬ್ರಹ್ಮರ್ಷಿಯಾದ. ಒಂದು ದಿನ ಆತ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಅಂತಃಸ್ಫುರಣದ ಮೂಲಕ ಸುಪ್ರಸಿದ್ಧ ಗಾಯತ್ರಿ ಮಂತ್ರ ಆತನಿಗೆ ತಾನಾಗಿ ಪ್ರಾಪ್ತವಾಯಿತಂತೆ!

ಟಿಪ್ಪಣಿ : 8

ಇಲ್ಲಿನ ಜ್ಞಾನೋದಯ ಮತ್ತು ಅಂತಃಸ್ಫುರಣದ ಚಿತ್ರದ ಸಂದರ್ಭದಲ್ಲಿ ಈ ಪ್ರಸ್ತಾಪ: ಋಷಿಮುನಿಗಳ ಬರಹಗಳಲ್ಲಿ ಜ್ಞಾನ, ಬೆಳಕು ಮತ್ತು ಬಿಳಿ ಬಣ್ಣಗಳ ನಡುವೆ ಅವಿನಾ ಸಂಬಂಧವಿರುವುದು ಕಂಡುಬರುತ್ತದೆ. ಅಗಸ್ತ್ಯ ಋಷಿ ರಚಿಸಿದ ಮಹಾಪ್ರಸಿದ್ಧ ಸರಸ್ವತಿ ಸ್ತೋತ್ರದಲ್ಲಿ ಜ್ಞಾನದೇವತೆ ಸರಸ್ವತಿಯನ್ನು ಹೀಗೆ ವರ್ಣಿಸಲಾಗಿದೆ:

ಯಾ ಕುಂದೇಂದುತುಷಾರಹಾರ ಧವಲಾ ಯಾ ಶುಭ್ರ ವಸ್ತ್ರಾನ್ವಿತಾ
ಯಾ ವೀಣಾ ವರದಂಡಮಂಡಿತಕರಾ ಯಾ ಶ್ವೇತ ಪದ್ಮಾಸನಾ
ಯಾ ಬ್ರಹ್ಮಾಚ್ಯುತಶಂಕರಪ್ರಭೃತಿಭಿರ್ದೇವೈಃ ಸದಾ ಪೂಜಿತಾ
ಸಾ ಮಾಂ ಪಾತು ಸರಸ್ವತಿ ಭಗವತೀ ನಿಃಶೇಷಜಾಡ್ಯಾಪಹಾ॥

(ಬಿಳಿ ಮಲ್ಲಿಗೆಯಂತೆ ಇವಳು, ಚಂದ್ರಮನಂತೆ ಇವಳು, ಬೆಳಕಿಗೆ ಹೊಳೆವ ಬಿಳಿಮುತ್ತಿನಂತಹ ಇಬ್ಬನಿಯ ಹಾರ ತೊಟ್ಟವಳು ಇವಳು, ಬಿಳಿ ವಸ್ತ್ರ ತೊಟ್ಟವಳು ಇವಳು, ಕೈಯಲ್ಲಿ ವೀಣೆ ಮತ್ತು ವರದಂಡ ಹಿಡಿದುಕೊಂಡವಳು ಇವಳು, ಬಿಳಿ ಕಮಲದ ಮೇಲೆ ಕುಳಿತಿರುವವಳು ಇವಳು, ಬ್ರಹ್ಮ ವಿಷ್ಣು ಮಹೇಶ್ವರ ಮತ್ತಿತರ ದೇವತೆಗಳಿಂದ ಸದಾ ಪೂಜಿಸಲ್ಪಡುತ್ತಿರುವವಳು ಇವಳು; ಇಂತಹ ತಾಯಿ ಸರಸ್ವತಿಯು ನನ್ನನ್ನು ಕಾಪಾಡಲಿ; ನನ್ನ ಜಡತ್ವವನ್ನು (ತಾಮಸ ಸ್ಥಿತಿಯನ್ನು) ಅಥವಾ ಅಜ್ಞಾನವನ್ನು ಲವಲೇಶವೂ ಅದು ಉಳಿಯದ ಹಾಗೆ ಹೋಗಲಾಡಿಸಲಿ!)

ಟಿಪ್ಪಣಿ : 9

ದೇವರನ್ನು ಬೆಳಕಿನ ರೂಪದಲ್ಲಿ ಚಿತ್ರಿಸಲು ಅತ್ಯಂತ ಮುಖ್ಯ ಕಾರಣವೆಂದರೆ, ತಪಸ್ಸಿನ ಸಮಯದಲ್ಲಿ ಹೆಚ್ಚಿನ ಸರ್ತಿ ದೇವರು ಉಜ್ವಲ ಪ್ರಭೆಯಾಗಿ ಪ್ರಕಟಗೊಳ್ಳುತ್ತಾನಂತೆ. ಅಡಿಗರು ರಾಮನನ್ನು 'ಗರಿಷ್ಠ ತೇಜದ ಮೊನೆ' ಎಂದು ಚಿತ್ರಿಸಿರುವುದಕ್ಕೂ ಕಾರಣ ಇದು.

ಟಿಪ್ಪಣಿ : 10

ವಾಲ್ಮೀಕಿ ರಾಮಾಯಣದ ಯುದ್ಧಕಾಂಡದಿಂದ ಆಯ್ದ ಭಾಗಗಳನ್ನು ಇಲ್ಲಿ ಕೊಡಲಾಗಿದೆ : ರಾವಣ ಸತ್ತು ಯುದ್ಧ ಮುಗಿಯುತ್ತಲೇ ವಿಭೀಷಣ ಸೀತೆಯ ಹತ್ತಿರ ಬಂದು 'ನೀನು ಸ್ನಾನ ಮಾಡಿ ಶೃಂಗರಿಸಿಕೊಂಡು ಬರಬೇಕು' ಎಂದು ರಾಮ ಹೇಳಿದ್ದಾನೆ ಅನ್ನುತ್ತಾನೆ. ಆದರೆ, ತನ್ನ ಪ್ರೀತಿಯ ಗಂಡನನ್ನು ಕಾಣಲು ಹಾತೊರೆಯುತ್ತಿದ್ದ ಸೀತೆ ನಿತ್ತ ಮೆಟ್ಟಿನಲ್ಲೇ ಹೊರಡಲು ತಯಾರಾಗಿ, 'ಸ್ನಾನ ಬೇಡ, ಮೊದಲು ನಾನು ನನ್ನ ಪತಿಯನ್ನು ನೋಡಲು ಇಷ್ಟಪಡುತ್ತೇನೆ' (ಅಸ್ನಾತಾ ದೃಷ್ಟುಮಿಚ್ಛಾಮಿ ಭರ್ತಾರಂ ರಾಕ್ಷಸಾಧಿಪ, ಸರ್ಗ 114–ಶ್ಲೋಕ 11) ಅನ್ನುತ್ತಾಳೆ. ಆದರೆ ವಿಭೀಷಣ 'ರಾಮ ಹೇಳಿದಂತೆ ಮಾಡು' ಎನ್ನುತ್ತಾನೆ. ಆಗ ಸೀತೆ ಸ್ನಾನ ಮಾಡಿ ಸುಗಂಧದ್ರವ್ಯಗಳನ್ನು ಹಚ್ಚಿಕೊಂಡು, ಕೆಂಪು ಸೀರೆಯನ್ನುಟ್ಟು ಕನಕಾಭರಣಗಳನ್ನು ತೊಟ್ಟು , ಹೂಮಾಲೆಯಿಂದ ತನ್ನನ್ನು ಶೃಂಗರಿಸಿಕೊಂಡು, ವಿಭೀಷಣ ತಂದ ಪಲ್ಲಕ್ಕಿಯ ಮೇಲೆ ರಾಮನ ಬಳಿಗೆ ಬರುತ್ತಾಳೆ! ಸೀತೆ ಬಂದಿರುವ ಸುದ್ದಿ ಕೇಳಿ ರಾಮನಿಗೆ ಏಕಕಾಲದಲ್ಲಿ ಹರ್ಷ, ದೈನ್ಯ ಮತ್ತು ರೋಷ ಉಂಟಾಗುತ್ತದೆ (ಹರ್ಷೋ ದೈನ್ಯಂಚ ರೋಷಶ್ಚ ತ್ರಯಂ ರಾಘವಮಾವಿಶತ್, 114–17). ರಾಮನನ್ನು ಕಾಣುತ್ತಲೇ ಸೀತೆಗೆ ಮೈಯ ಭಾರವೆಲ್ಲ ಇಳಿದು ಆಶ್ಚರ್ಯ, ಸಂತೋಷ ಮತ್ತು ಸ್ನೇಹ ಉಂಟಾಗುತ್ತದೆ (ವಿಸ್ಮಯಾಚ್ಚ ಪ್ರಹರ್ಷಾಚ್ಚ ಸ್ನೇಹಾಚ್ಚ ಪರಿದೇವತಾ, 114–35). ಆದರೆ, ಎಷ್ಟೆಲ್ಲ ದಿನಗಳ ಅಗಲಿಕೆಯ ನಂತರ ಇಷ್ಟೊಂದು ಪ್ರೀತಿಯಿಂದ ಇಷ್ಟೊಂದು ಸಂಭ್ರಮದಿಂದ ಎದುರು ಬಂದು ನಿಂತ ಹೆಂಡತಿಯನ್ನು ರಾಮ ಕಣ್ಣೆತ್ತಿಯೂ ನೋಡುವುದಿಲ್ಲ. ಬದಲಿಗೆ, ಮುಖ ಗಂಟುಹಾಕಿಕೊಂಡು ನೆಲದ ಕಡೆ ನೋಡುತ್ತಾ, ಸೀತೆಯನ್ನುದ್ದೇಶಿಸಿ

'ನಿನ್ನನ್ನು ರಾಕ್ಷಸನ ಕೈಯಿಂದ ಬಿಡಿಸಿಕೊಂಡು ಬಂದಿದ್ದರಿಂದ ನಿನಗಾಗಿದ್ದ ಅನ್ಯಾಯ, ನನಗಾಗಿದ್ದ ಅಪಮಾನ ಹೋಯಿತು; ಜನ ನನ್ನ ಪೌರುಷವನ್ನು ಕಂಡಿದ್ದಾರೆ, ನನ್ನ ಶ್ರಮ ಸಾರ್ಥಕವಾಯಿತು' ಎಂದು ಜಂಭ ಕೊಚ್ಚುತ್ತಾನೆ! ಸೀತೆ ಇಷ್ಟು ದಿನ ಮತ್ತೊಬ್ಬನ ಮನೆಯಲ್ಲಿ ಬಂದಿಯಾಗಿದ್ದವಳು. ಹಾಗಾಗಿ ಜನಾಪವಾದದ ಭಯದಿಂದ ಆತನ ಹೃದಯ ದ್ವಂದ್ವದಲ್ಲಿ ಸಿಕ್ಕಿಕೊಳ್ಳುತ್ತದೆ (ಜನವಾದಭಯಾದ್ರಾಜ್ಞೋ ಬಭೂವ ಹೃದಯಂ ದ್ವಿಧಾ, 115–11). 'ನಿನಗೆ ಗೊತ್ತಿರಲಿ ಎಂದು ಹೇಳುತ್ತಿದ್ದೇನೆ, ನನ್ನ ಮೇಲಿನ ಮತ್ತು ನನ್ನ ಪ್ರಖ್ಯಾತ ವಂಶದ ಮೇಲಿನ ಎಲ್ಲಾ ಅಪವಾದಗಳೂ ಹೋಗಬೇಕು ಎಂಬ ಕಾರಣಕ್ಕಾಗಿ ನಾನು ಯುದ್ಧ ಮಾಡಿದೆನೇ ಹೊರತು ಅದು ನಿನಗಾಗಿ ಅಲ್ಲ. ಚಾರಿತ್ರ್ಯದ ಬಗ್ಗೆ ಸಂದೇಹಕ್ಕೆ ಗುರಿಯಾಗಿರುವ ನೀನು ನನ್ನೆದುರು ನಿಂತಿದ್ದೀಯೆ (ಪ್ರಾಪ್ತಚಾರಿತ್ರಸಂದೇಹ ಮಮ ಪ್ರತಿಮುಖೇ ಸ್ಥಿತಾ, 115–17). ನೀನು ನನಗೆ ಒಪ್ಪಿಗೆಯಾಗುವುದಿಲ್ಲ. ಯಾವ ಸತ್ಕುಲಪ್ರಸೂತನು ಇನ್ನೊಬ್ಬನ ಮನೆಯಲ್ಲಿದ್ದ ಹೆಣ್ಣನ್ನು ತಿರುಗಿ ತನ್ನಲ್ಲಿ ತಂದಿಟ್ಟುಕೊಳ್ಳುತ್ತಾನೆ?.... ಅಲ್ಲದೆಯೆ, ರಾವಣ ನಿನ್ನನ್ನು ಅಪಹರಿಸುತ್ತಿದ್ದಾಗ ಅವನ ತೊಡೆಯ ಮೇಲೆ ಕುಳಿತವಳು ನೀನು, ಮನಮೋಹಕ ದಿವ್ಯ ಸುಂದರಿ ನೀನು, ನಿನ್ನನ್ನು ಬಿಟ್ಟಿರಲು ರಾವಣನಿಗೆ ಸಾಧ್ಯವಾಗುತ್ತಿತ್ತೇ?' ಎಂದು ಕಟಕಿ ಆಡಿ, 'ನಿನ್ನ ಬಗ್ಗೆ ನನಗೆ ಆಳವಾದ ಪ್ರೀತಿಯೇನೂ ಇಲ್ಲ' ಎಂದು ಹೇಳುತ್ತಾನೆ. ಗಂಡನ ಮಾತನ್ನು ಕೇಳಿ ಆನೆಯ ಸೊಂಡಿಲಿನ ಆಕ್ರಮಣಕ್ಕೆ ತುತ್ತಾದ ಬಳ್ಳಿಯ ಹಾಗೆ ಬಹಳ ಹೊತ್ತು ಕಂಪಿಸಿದಳು ಸೀತೆ, ಕಣ್ಣೀರು ಹಾಕಿದಳು, ನಾಚಿಕೆಯಿಂದ ತಲೆತಗ್ಗಿಸಿ ನಿಂತಳು(ಮುಮೋಚ ಬಾಷ್ಪಂ ಸುಭೃಶಂ ಪ್ರವೇಪಿತಾ ಗಜೇಂದ್ರಹಸ್ತಾಭಿಹತೇವ ವಲ್ಲರಿ 115–25). ಆದರೆ ಸ್ವಲ್ಪ ಹೊತ್ತಲ್ಲೇ ಸಾವರಿಸಿಕೊಂಡು, 'ಇದೇ ನಿನ್ನ ಪ್ರತಿಕ್ರಿಯೆಯಾದರೆ, ಈ ಯುದ್ಧ, ಈ ಸಾವುನೋವು ಯಾಕೆ ಬೇಕಿತ್ತು? ಹನುಮಂತ ನನ್ನನ್ನು ಹುಡುಕಿಕೊಂಡು ಲಂಕೆಗೆ ಬಂದಾಗಲೇ ನೀನು ನನ್ನನ್ನು ಬಿಟ್ಟಿದ್ದೀಯೆ ಎಂದು ನನಗೆ ಸಂದೇಶ ಕಳಿಸಿದ್ದರೆ, ನಾನು ಆಗಲೇ ಜೀವ ಬಿಡುತ್ತಿದ್ದೆ. ನೀನು ಭಾವಿಸಿದಂತಹ ಕ್ಷುದ್ರ ಹೆಣ್ಣು ನಾನಲ್ಲ. ನಾನೂ ಉಚ್ಚ ಕುಲದವಳು. ಜಗತ್ತಿನ ಕಣ್ಣಿಗೆ ನಾನು ಜನಕನ ಮಗಳಾದರೂ ವಾಸ್ತವದಲ್ಲಿ ನಾನು ಭೂದೇವಿಯ ಮಗಳು... ನನ್ನ ಮುದ್ದಿನ ಗಂಡ ನೀನು! ನನ್ನ ಪ್ರೀತಿಯ ನಿಷ್ಠೆ, ನನ್ನ ಶೀಲ, ನನ್ನ ಸಕಲವನ್ನೂ ನಿನಗೆ ಅರ್ಪಿಸಿಕೊಂಡವಳು ನಾನು, ಅವೆಲ್ಲವನ್ನೂ ನೀನು ಕಡೆಗಣಿಸಿದೆ(ಮಮ ಭಕ್ತಿಶ್ಚ ಶೀಲಂ ಚ ಸರ್ವಂ ತೇ ಪೃಷ್ಠತಃ ಕೃತಮ್, 116–16). ಬಾಲ್ಯದಲ್ಲಿಯೇ ಮದುವೆಯಾದ ನಾವು ಹಲವಾರು ವರ್ಷ ಒಟ್ಟಾಗಿ ಬದುಕಿದ್ದೆವಲ್ಲ, ಆದರೂ ನಿನಗೆ ನನ್ನ ಮನಸ್ಸು ತಿಳಿಯಲೇ ಇಲ್ಲವೇ?' ಎಂದು ವಿಲಾಪಿಸುತ್ತಾಳೆ. 'ನನ್ನ ಗಂಡನಿಂದ ತಿರಸ್ಕೃತಳಾಗಿ ಈ ಮಿಥ್ಯಾಪವಾದವನ್ನು ಹೊತ್ತುಕೊಂಡು ನಾನು ಬದುಕಲಾರೆ' ಎಂದು ಹೇಳಿ ಆತ್ಮಹತ್ಯೆ ಮಾಡಿಕೊಳ್ಳುವ ಸಲುವಾಗಿ ಲಕ್ಷ್ಮಣನ ಹತ್ತಿರ 'ನನಗೆ ಚಿತೆಯನ್ನು ತಯಾರಿಸಿ ಕೊಡು' ಎಂದು ಕೇಳಿಕೊಳ್ಳುತ್ತಾಳೆ(ಚಿತಾಂ ಮೇ ಕುರು ಸೌಮಿತ್ರೇ ವ್ಯಸನಸ್ಯಾಸ್ಯ ಭೇಷಜಮ್। ಮಿಥ್ಯಾಪವಾದೋಪಹತಾ ನಾಹಂ ಜೀವಿತುಮುತ್ಸಹೇ,116–18). ಅಣ್ಣನ ದುಷ್ಟ ವರ್ತನೆಯಿಂದ ಕೋಪಗೊಂಡಿದ್ದ ಲಕ್ಷ್ಮಣ ಅಣ್ಣನ ಮನಸ್ಸು ಈಗಲಾದರೂ ಬದಲಾಗಬಹುದು ಎಂದುಕೊಂಡು ಆತನ ಕಡೆ ನೋಡುತ್ತಾನೆ. ಆದರೆ, ತಲೆ ತಗ್ಗಿಸಿ ಕುಳಿತ ರಾಮ ತಲೆ ಎತ್ತಿ ನೋಡುವುದೂ ಇಲ್ಲ. ಬೇರೆ ದಾರಿಯಿಲ್ಲದೆ ಲಕ್ಷ್ಮಣ ಚಿತೆಯನ್ನು ತಯಾರಿಸುತ್ತಾನೆ. ಸೀತೆ ತಲೆ ತಗ್ಗಿಸಿ ಕುಳಿತುಕೊಂಡಿದ್ದ ರಾಮನಿಗೆ ಪ್ರದಕ್ಷಿಣೆ ಬಂದು ಧಗಧಗನೆ ಉರಿಯುತ್ತಿದ್ದ ಬೆಂಕಿಯ ಕಡೆಗೆ ಹೋಗುತ್ತಾಳೆ. "ನನ್ನ ಹೃದಯವು ರಾಮನನ್ನು ಬಿಟ್ಟು ಎಂದೂ ಕದಲಲಿಲ್ಲ. ಜಗತ್‌ಸಾಕ್ಷಿಯಾದ ಓ ಅಗ್ನಿದೇವ, ನೀನೇ ನನ್ನನ್ನು ಎಲ್ಲ ರೀತಿಯಿಂದಲೂ ರಕ್ಷಿಸು" ಎಂದು ಹೇಳಿ ಬೆಂಕಿಗೆ ಧುಮುಕುತ್ತಾಳೆ. ಅದನ್ನು ಕಂಡು ಸುತ್ತ ನೆರೆದಿದ್ದ ಜನರು, ರಾಕ್ಷಸರು ಹಾಗೂ ವಾನರರು ಹಾಹಾಕಾರ ಮಾಡುತ್ತಾರೆ. ಅವರ ಕೂಗನ್ನು ಕೇಳಿ ಧರ್ಮಾತ್ಮ ರಾಮ ಕ್ಷಣಕಾಲ ಯೋಚಿಸುತ್ತಾನೆ, ಆದರೆ ಆಗಲೇ ತಳಮಳದಲ್ಲಿದ್ದ

ಆತನ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತದೆ(ತತೋ ಹಿ ದುರ್ಮನಾ ರಾಮಃ ಶ್ರುತ್ವೈವಮ್ ವದತಾಂ ಗಿರಃ। ದಧ್ಯೌ ಮುಹೂರ್ತಂ ಧರ್ಮಾತ್ಮಾ ಬಾಷ್ಪವ್ಯಾಕುಲಲೋಚನಃ, 117–1).

ಈ ದಾರುಣ ದೃಶ್ಯದಿಂದ ದುಃಖಿತರಾದ ದೇವತೆಗಳು ತಮ್ಮ ತಮ್ಮ ವಿಮಾನಗಳಲ್ಲಿ ಲಂಕೆಗೆ ಬರುತ್ತಾರೆ, ರಾಮನಿಗೆ ಬುದ್ಧಿವಾದ ಹೇಳುತ್ತಾರೆ. ಬ್ರಹ್ಮ 'ಸ್ವತಃ ದೇವರು ನೀನು, ರಾವಣನ ವಧೆಗಾಗಿ ಮನುಷ್ಯರೂಪದಲ್ಲಿ ಹುಟ್ಟಿದ್ದೀಯೆ, ಸೀತೆಯೂ ದೇವತೆಯೇ' ಎಂದು ಹೇಳಿ ರಾಮನಿಗೆ ಅವನ ಮತ್ತು ಸೀತೆಯ ನಿಜ ಗುರುತನ್ನು ತಿಳಿಸುತ್ತಾನೆ. ಅದೇ ಹೊತ್ತಿಗೆ ಅಗ್ನಿದೇವ ಸೀತೆಯನ್ನು ಕೈಯಲ್ಲಿ ಎತ್ತಿಕೊಂಡು ಬಂದು ರಾಮನ ಹತ್ತಿರ "ಇಗೋ ನಿನ್ನ ಸೀತೆ, ಈಕೆಯಲ್ಲಿ ಯಾವ ಪಾಪವೂ ಇಲ್ಲ! (ಏಷಾ ತೇ ರಾಮ ವೈದೇಹಿ ಪಾಪಮಸ್ಯಾಂ ನ ವಿದ್ಯತೇ, 118–5) ಮಾತಿನಿಂದಾಗಲಿ ಮನಸ್ಸಿನಿಂದಾಗಲಿ ಬುದ್ಧಿಯಿಂದಾಗಲಿ ದೃಷ್ಟಿಯಿಂದಾಗಲಿ ನಿನ್ನನ್ನು ಬಿಟ್ಟು ಬೇರೆಯವರನ್ನು ಬಯಸಿದವಳಲ್ಲ ಇವಳು!!" (ನೈವ ವಾಚಾ ನ ಮನಸಾ ನೈವ ಬುದ್ಧ್ಯಾನಚಕ್ಷುಷಾ, 118–6) ಎನ್ನುತ್ತಾನೆ. ಬೆಂಕಿಯಿಂದ ಸೀತೆಯ ಮೈ ಸುಡುವುದು ಹಾಗಿರಲಿ, ಆಕೆ ತೊಟ್ಟಿದ್ದ ಹೂಮಾಲೆಯ ಹೂವು ಕೂಡ ಬಾಡಿರುವುದಿಲ್ಲ!!

ಈಗ ರಾಮ ಅಗ್ನಿದೇವನೆದುರು ತನ್ನ ಅಂತರಂಗವನ್ನು ಬಿಚ್ಚಿಕೊಳ್ಳುತ್ತಾನೆ: "ತನ್ನ ಪಾವಿತ್ರ್ಯದಿಂದಾಗಿ ಅಗ್ನಿಶಿಖೆಯಂತೆ ಪ್ರಜ್ವಲಿಸುತ್ತಿದ್ದ ಸೀತೆಯನ್ನು ರಾವಣ ತನ್ನ ಮನಸ್ಸಿನಲ್ಲೂ ಸ್ಪರ್ಶಿಸುವುದು ಸಾಧ್ಯವಿರಲಿಲ್ಲ. ಆತನ ಅಂತಃಪುರದಲ್ಲಿ ಈಕೆ ಸಾಕಷ್ಟು ಕಾಲ ಇದ್ದುದರಿಂದ, ಜಗತ್ತಿಗೆ ತೋರಿಸುವುದಕ್ಕಾಗಿ ಈ ಪಾವಿತ್ರ್ಯ ಪರೀಕ್ಷೆ ಅಗತ್ಯವಾಗಿತ್ತು. ಸೂರ್ಯ ಮತ್ತು ಆತನ ಪ್ರಭೆ ಹೇಗೆ ಬೇರೆಬೇರೆಯಲ್ಲವೋ ಹಾಗೆಯೇ ನಾನು ಮತ್ತು ಸೀತೆ ಬೇರೆಬೇರೆಯಲ್ಲ" (ಅನನ್ಯಾ ಹಿ ಮಯಾ ಸೀತಾ ಭಾಸ್ಕರೇಣ ಪ್ರಭಾ ಯಥಾ, 118–19) ಎಂದು ಹೇಳಿ ರಾಮ ಸೀತೆಯನ್ನು ಪರಿಗ್ರಹಿಸುತ್ತಾನೆ.

ರಾಮನ ಬಾಣಗಳೆಲ್ಲವೂ ವ್ಯರ್ಥವಾದಾಗ, ಕೋದಂಡ ದಂಡವೂ ಹೀಗೆ ದಂಡವೇ ಎಂಬ ಸಂಶಯ ಬಂದಿತು. ಆದರೆ, ಅದರ ನಂತರ ರಾಮನ ಬಾಣವೇ ರಾವಣನನ್ನು ಕೊಂದಿದ್ದರಿಂದ ಆ ಸಂಶಯ 'ಚಕ್ರಾರ ಪಂಕ್ತಿ'ಯ ಒಂದು ಹಂತ ಮಾತ್ರ ಎಂಬುದು ಸಿದ್ಧವಾಯಿತು. ಅಂದರೆ, ಇಲ್ಲಿ 'ಕೋದಂಡ ದಂಡವೂ ಹೀಗೆ ದಂಡ....?' ಎಂಬುದು ಪ್ರಶ್ನೆಯಾದರೆ, 'ಚಕ್ರಾರ ಪಂಕ್ತಿ' ಎಂಬುದು ಅದರ ಉತ್ತರ.

ಇಲ್ಲಿ 'ಚಕ್ರಾರ ಪಂಕ್ತಿ' ಚಿತ್ರದ ಮೂಲಕ ಹೇಳಿದ್ದನ್ನೇ ಅಡಿಗರು ಈ ಲೇಖನದ ಆರಂಭದಲ್ಲಿ ನಾನು ಪ್ರಸ್ತಾಪಿಸಿದ 'ರಾಕ್ಷಸರು'ಎಂಬ ಪ್ರಬಂಧದಲ್ಲಿ ಸರಳ ನೇರ ಗದ್ಯದಲ್ಲಿ ಹೇಳಿದ್ದಾರೆ: "ನಮ್ಮ ಈ ಪವಿತ್ರ ಭಾರತಭೂಮಿಯಲ್ಲೇ ಎಲ್ಲ ಕಾಲದಲ್ಲೂ ರಾಕ್ಷಸರ ಬಾಧೆ ಹೆಚ್ಚು ಅಂತ ತೋರುತ್ತದೆ. ದೇವರೇ ಖುದ್ದು ಮತ್ತೆಮತ್ತೆ ಕೆಳಕ್ಕಿಳಿದು ಬಾರದೇ ತಗ್ಗಲಾರದ ರಾಕ್ಷಸತ್ವಕ್ಕೆ ಫಲವತ್ತಾದ ನೆಲ ಇದು. ಅವತಾರಗಳು ಮತ್ತೆಮತ್ತೆ ಇಲ್ಲಿ ಆಗಿವೆ. ರಾಕ್ಷಸರ ನಾಶವೂ ಮತ್ತೆಮತ್ತೆ ಇಲ್ಲಿ ಆಗಿದೆ. ಆದರೆ ರಾಕ್ಷಸತ್ವದ ನಾಶ ಮಾತ್ರ ಆಗಿಲ್ಲ, ಬಹುಶಃ ಆಗುವುದೂ ಇಲ್ಲ. ಇಂಗ್ಲಿಷ್ ಭಾಷೆಯಲ್ಲಿರುವ ಇವಿಲ್ (evil) ಎಂಬ ಶಬ್ದಕ್ಕೆ ಸಂವಾದಿಯಾಗಿರುವ ಶಬ್ದ ಈ ಅಸುರ ಅಥವಾ ರಾಕ್ಷಸ. ಇದು ಬಹುಶಃ ಅನಾದಿಯೂ ಅನಂತವೂ ಆಗಿರುವ ಹಾಗೆ ತೋರುತ್ತದೆ."....

(ಮುಂದುವರಿಯುವುದು....)

❖❖❖

ಬುಖನನ್ ವರದಿಯಲ್ಲಿ ದಾಖಲಾದ ಟಿಪ್ಪು

ಡಾ. ಅಜಕ್ಕಳ ಗಿರೀಶ ಭಟ್
ಪ್ರಾಧ್ಯಾಪಕ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಕಟ್ಟೆ – 574327

ಕರ್ನಾಟಕದ ಇತಿಹಾಸವನ್ನು ಬರೆಯುವವರು ಟಿಪ್ಪು ಸುಲ್ತಾನ್‌ನ ಬಗ್ಗೆ ವಿಭಿನ್ನ ಕಥನಗಳನ್ನು ಕಟ್ಟುತ್ತಾರೆ. ಇತಿಹಾಸವು ವರ್ತಮಾನ ಕಾಲದಲ್ಲಿ ಜನರನ್ನು ಕೆರಳಿಸುವಂತಿರಬಾರದು; ಹೀಗಾಗಿ ಮುಸ್ಲಿಂ ದೊರೆಗಳ ಬಗ್ಗೆ ಇತಿಹಾಸ ಬರೆಯುವಾಗ ಸತ್ಯಕ್ಕೆ ತುಸು ಅಪಚಾರವಾದರೂ ತೊಂದರೆಯಿಲ್ಲ; ಅವರನ್ನು ಕೆಟ್ಟದಾಗಿ ಚಿತ್ರಿಸಬಾರದು ಎನ್ನುವ ಧೋರಣೆಯ ನೆಹರೂವಿಯನ್ ಸೆಕ್ಯುಲರುವಾದಿ ಎಡಪಂಥೀಯ ಇತಿಹಾಸಕಾರರು ಟಿಪ್ಪುವನ್ನು ಒಂದು ಬಗೆಯಲ್ಲಿ ಚಿತ್ರಿಸಿದ್ದಾರೆ. ಅದಕ್ಕೆ ಪೂರಕವಾಗುವಂತೆ ನಾಟಕ ಇತ್ಯಾದಿ ಕಲಾಪ್ರಕಾರಗಳನ್ನು ಕೂಡ ಬಳಸಿಕೊಂಡುದಿದೆ. ಇತ್ತೀಚಿನ ವರ್ಷಗಳಲ್ಲಿ ಇತಿಹಾಸದ ಸತ್ಯಗಳು ಅನಾವರಣವಾಗಬೇಕು ಎನ್ನುವ ಧೋರಣೆಯಿಂದ ಮೇಲೆ ಹೇಳಿದ ರೀತಿಯ ಕೃತಕ ಸೌಹಾರ್ದದ ಕಥನಗಳನ್ನು ಆಕ್ಷೇಪಿಸುವವರು ಕೂಡ ಹೆಚ್ಚುತ್ತಿದ್ದಾರೆ. ಈ ಆಕ್ಷೇಪಗಳಿಗೆ ಭಾರತದಲ್ಲಿ ಅನುಸರಿಸುತ್ತ ಬಂದ ಸೆಕ್ಯುಲರಿಸಮ್ಮಿನ ನಮೂನೆ ಹಾಗೂ ವರ್ತಮಾನದ ವಿದ್ಯಮಾನಗಳೇ ಮುಖ್ಯವಾಗಿ ಕಾರಣವಾಗಿವೆ. ಅದೇ ಹಿನ್ನೆಲೆಯಲ್ಲಿ ಅಡ್ಡಂಡ ಕಾರ್ಯಪ್ಪನವರ 'ಟಿಪ್ಪು ನಿಜ ಕನಸುಗಳು' ಎಂಬಂತಹ ನಾಟಕ ಕೂಡ ಈಚೆಗೆ ಬಂದಿದೆ.

ವಿಶ್ವವಿದ್ಯಾನಿಲಯಗಳು, ಮುಂಚೂಣಿ ಆಂಗ್ಲ ಪತ್ರಿಕೆಗಳ ಅಂಕಣಗಳು ಮುಂತಾದ ಜ್ಞಾನಾಧಿಕಾರ ಕೇಂದ್ರಗಳ ಏಕಸ್ವಾಮ್ಯ ತೊಲಗಿ ಆಧುನಿಕ ತಂತ್ರಜ್ಞಾನದ ಮೂಲಕ ಎಲ್ಲರಿಗೂ ಸುಲಭವಾಗಿ ಇತಿಹಾಸದ ವಿವಿಧ ಆಕರಗಳು ದೊರೆಯಲಾರಂಭಿಸಿದ್ದು ಮತ್ತು ಅಭಿವ್ಯಕ್ತಿಸಲು ಸಾಮಾಜಿಕ ಮಧ್ಯಮದಂತಹ ವೇದಿಕೆ ದೊರಕಿದ್ದು ಈ ಬೆಳವಣಿಗೆಗೆ ಮುಖ್ಯ ಕಾರಣ. ಅಲ್ಲದೆ, ಸುಶಿಕ್ಷಿತರು ಸರಕಾರಿ ಉದ್ಯೋಗ, ಶಾಲಾಕಾಲೇಜುಗಳು ಅಥವಾ ವಿಶ್ವವಿದ್ಯಾನಿಲಯ ಮುಂತಾದ ಬೌದ್ಧಿಕವಾಗಿ ಹಂಗಿನಲ್ಲಿರಬೇಕಾದ ಉದ್ಯೋಗಗಳ ಬದಲಾಗಿ ಬೌದ್ಧಿಕವಾಗಿ ಹೆಚ್ಚು ಅಭಿವ್ಯಕ್ತಿ ಸ್ವಾತಂತ್ರ್ಯವಿರುವ ಖಾಸಗಿ ವಲಯದಲ್ಲಿ ಉದ್ಯೋಗದಲ್ಲಿರುವುದು ಕೂಡ ಒಂದು ಮುಖ್ಯ ಕಾರಣ. ಒಟ್ಟಿನಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನಲ್ಲೇ ಆದರೂ ಸತ್ಯವನ್ನು ಮುಚ್ಚಿಡುವುದು ಸೌಹಾರ್ದಕ್ಕೆ ಪೂರಕವಲ್ಲ; ಬದಲಾಗಿ ಅಂತಹ ಮುಚ್ಚಿಟ್ಟ ಸತ್ಯಗಳು ಹೊರಬಂದಾಗ ಸಂಬಂಧ ಮತ್ತಷ್ಟು ಹದಗೆಡುತ್ತದೆ. ಇದು ಸಮುದಾಯಗಳ ನಡುವಿನ ಸಂಬಂಧಕ್ಕೂ ಅನ್ವಯಿಸುವ ಮಾತು.

'ಟಿಪ್ಪು ಉತ್ತಮ ಆಡಳಿತಗಾರನಾಗಿ ಜನಾನುರಾಗಿಯಾಗಿದ್ದ; ಮತಾಂಧನಾಗಿರಲಿಲ್ಲ' ಎಂಬ ಮತ್ತು 'ಆತ ಮತಾಂಧನಾಗಿ ನಡೆದುಕೊಂಡು ದೌರ್ಜನ್ಯ ಮಾಡಿದ್ದ' ಎನ್ನುವ ಎರಡು ಅಭಿಪ್ರಾಯಗಳು ಟಿಪ್ಪುವಿನ ಬಗ್ಗೆ ಇವೆ ಎಂದು ಅನೇಕರು ತಿಪ್ಪೆ ಸಾರಿಸುವುದನ್ನು ಕಾಣುತ್ತೇವೆ. ಆದರೆ ಈ ಎರಡೂ ಅಭಿಪ್ರಾಯಗಳಿಗೆ ಸಮವಾಗಿ ಐತಿಹಾಸಿಕ ದಾಖಲೆಗಳಿವೆಯೆ ಎಂದು ನೋಡಿದರೆ ಸತ್ಯ ಗೊತ್ತಾಗುತ್ತದೆ. ಯಾವುದು ಸೃಷ್ಟಿಸಿದ ಅಭಿಪ್ರಾಯ ಮತ್ತು ಯಾವುದು ವಾಸ್ತವ ಎಂದು ಗೊತ್ತಾಗುತ್ತದೆ. ಟಿಪ್ಪುವಿನ ಒಟ್ಟಾರೆ

ಆಡಳಿತ ಅಥವಾ ಅವನು ಹಿಂದು, ಮುಸ್ಲಿಂ, ಕ್ರೈಸ್ತರನ್ನು ನಡೆಸಿಕೊಂಡ ಬಗೆಯನ್ನು ಇಟ್ಟುಕೊಂಡು ಟಿಪ್ಪು ಪರ ಅಥವಾ ವಿರೋಧದ ನಿಲುವನ್ನು ತಳೆಯುವುದು ಈ ಲೇಖನದ ಉದ್ದೇಶವಲ್ಲ. ಐತಿಹಾಸಿಕ ವ್ಯಕ್ತಿಗಳ ಪರ ಅಥವಾ ವಿರೋಧದ ನಿಲುವು ಅಗತ್ಯವಿಲ್ಲ. ಬದಲಾಗಿ ದಾಖಲೆಗಳು ಹೇಳುವ ಸತ್ಯಗಳು ನಮಗೆ ಮುಖ್ಯ ಅಷ್ಟೇ. ಹೀಗಾಗಿ ಅವನ ಮರಣವಾದ ನಂತರದ ದಿನಗಳಲ್ಲಿ ಅವನ ಬಗ್ಗೆ ಮಲಬಾರ್ ಪ್ರದೇಶ, ಮೈಸೂರು ಪ್ರಾಂತ ಮೊದಲಾದೆಡೆ ಪ್ರಯಾಣಿಸಿದ ಬುಖನನ್ ಏನನ್ನು ದಾಖಲಿಸಿದ್ದಾನೆ ಎನ್ನುವುದನ್ನು ಸಂಗ್ರಹಿಸಿ ಹೇಳುವುದಷ್ಟೇ ಇಲ್ಲಿಯ ಉದ್ದೇಶ. ಬುಖನನ್ ಬರೆಹವು ಟಿಪ್ಪುವಿನ ಬಗ್ಗೆ ಇತಿಹಾಸ ಬರೆಯುವವರು ಪರಾಮರ್ಶಿಸುವ ಒಂದು ಪ್ರದಾನ ಆಕರವೇ ಆಗಿರುವುದರಿಂದ ಆ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿರುವವರೆಗೆ ಇಲ್ಲಿ ಹೊಸ ವಿಚಾರಗಳೇನೂ ಇಲ್ಲ. ಈ ಮಾಹಿತಿಗಳು ಟಿಪ್ಪು ಕುರಿತ ಇತಿಹಾಸದಲ್ಲಿ ಸಂದರ್ಭಾನುಸಾರವಾಗಿ ಬೇರೆಬೇರೆ ಕಡೆ ಉಲ್ಲೇಖಿತವಾದವುಗಳೇ ಆಗಿವೆ. ಆದರೆ ಜೆ. ಎನ್. ಯು. ಪ್ರೇರಿತ ಎಡಪಂಥೀಯ ಸೆಕ್ಯುಲರುವಾದಿ ಇತಿಹಾಸಕಾರರೂ ಇಂತಹ ಸತ್ಯಗಳನ್ನು ತಮ್ಮ ಕೃತಿಗಳಲ್ಲಿ ಸಾಧ್ಯವಾದಷ್ಟು ಮರೆಮಾಚಲು ಯತ್ನಿಸುವುದು ನಿಜ. ಬುಖನನ್ ಸಂಪುಟಗಳನ್ನೇ ಇಟ್ಟುಕೊಂಡು ಇತರ ಆಕರಗಳ ಜೊತೆ ತುಲನಾತ್ಮಕವಾಗಿ ಪರಿಶೀಲಿಸಿ ಯಾರಾದರೂ ಸಂಶೋಧನ ಲೇಖನಗಳನ್ನು ಬರೆದಿರಲೂಬಹುದು. ನನ್ನ ಓದಿನ ಮಿತಿಯ ಕಾರಣದಿಂದ ನನ್ನ ಗಮನಕ್ಕೆ ಬಂದಿಲ್ಲ.

******

ಆಗಿನ ಗವರ್ನರ್ ಜನರಲ್ ಆಗಿದ್ದ ವೆಲ್ಲೆಸ್ಲಿಯ ಸೂಚನೆಯಂತೆ, ಸ್ಕಾಟ್ಲೆಂಡ್ ಮೂಲದ ವೈದ್ಯ ಫ್ರಾನ್ಸಿಸ್ ಬುಖನನ್ 1800ರಲ್ಲಿ ಒಂದು ಸುದೀರ್ಘ ಪ್ರಯಾಣದೊಂದಿಗೆ ಸವೇಕ್ಷಣೆಯನ್ನು ಕೈಗೊಂಡ. ಈ ಪ್ರಯಾಣದಲ್ಲಿ ಅನೇಕ ಅಂಶಗಳನ್ನು ಗಮನಿಸಿ, ಅಧ್ಯಯನ ಮಾಡಿ ವರದಿ ನೀಡುವಂತೆ ಬುಖನನ್‌ಗೆ ಸೂಚಿಸಲಾಗಿತ್ತು. ಯಾವುದನ್ನೆಲ್ಲ ವರದಿ ಮಾಡಲು ತನಗೆ ಸೂಚನೆಯಿತ್ತು ಎನ್ನುವುದನ್ನು ತನ್ನ ಮೊದಲ ಸಂಪುಟದ ಆರಂಭದಲ್ಲಿ ಬುಖನನ್ ವಿವರವಾಗಿ ತಿಳಿಸಿದ್ದಾನೆ.

1800ನೇ ಇಸವಿಯ ಫೆಬ್ರವರಿ 24ರಂದು ಆಗಿನ ಗವರ್ನರ್ ಜನರಲನು ಬುಖನನ್‌ಗೆ ನೀಡಿದ್ದ ಸೂಚನೆಗಳ ಪ್ರಕಾರ ಬುಖನನ್‌ನ ಪರಿಶೋಧನೆಯಲ್ಲಿ ಈ ಮುಂದಿನ ಪ್ರದೇಶಗಳು ಒಳಗೊಳ್ಳಬೇಕಾಗಿತ್ತು. ಮೈಸೂರು ಅರಸರ ಒಡೆತನದಲ್ಲಿರುವ ಎಲ್ಲ ಪ್ರದೇಶಗಳು, ಕಂಪೆನಿಯು ಟಿಪ್ಪು ಸುಲ್ತಾನನಿಂದ ವಶಪಡಿಸಿಕೊಂಡ ಭೂಬಾಗಗಳು ಮತ್ತು ಕಾರ್ನವಾಲಿಸನ ನೇತೃತ್ವದ ಯುದ್ಧದಲ್ಲಿ ಕಂಪೆನಿಯು ತನ್ನ ಸುಪರ್ದಿಗೆ ಸೇರಿಸಿಕೊಂಡ ಮಲಬಾರ್ ಭಾಗಗಳು.

ಬುಖನನ್ ಪರಿಶೀಲಿಸಿ ವರದಿ ಸಲ್ಲಿಸಬೇಕಾಗಿದ್ದ ಅಂಶಗಳು ಹೀಗಿವೆ. ಮೊದಲನೆಯದಾಗಿ ಕೃಷಿ ಪದ್ಧತಿಗಳ ಬಗ್ಗೆ ಬಹಳ ವಿಸ್ತೃತವಾದ ವರದಿ ಗವರ್ನರ್ ಜನರಲ್‌ಗೆ ಸಲ್ಲಿಸಬೇಕಿತ್ತು. ಆ ಪ್ರದೇಶಗಳಲ್ಲಿ ಬೆಳೆಯುವ ವಿವಿಧ ಬೆಳೆಗಳು, ಬೇಸಾಯದ ಕ್ರಮಗಳು, ಕೃಷಿ ಸಲಕರಣೆಗಳು, ಬಳಸುವ ಗೊಬ್ಬರ, ಬೀಜಗಳು ಇತ್ಯಾದಿ ಕೃಷಿಗೆ ಸಂಬಂಧಿಸಿದ ಸಮಗ್ರ ವಿವರಗಳನ್ನು ಸಂಗ್ರಹಿಸಬೇಕಿತ್ತು. ಅದೇರೀತಿ, ಜಾನುವಾರುಗಳು, ಜಮೀನಿನ ವಿವರ, ಗಣಿ, ಕ್ವಾರಿ, ಖನಿಜಗಳ ಲಭ್ಯತೆ, ಉತ್ಪಾದನೆಗಳು, ಹವಾಮಾನ, ನಿವಾಸಿಗಳ ಆಹಾರಪದ್ಧತಿ, ಕಲೆ, ಸಂಪ್ರದಾಯಗಳು, ವಹಿವಾಟಿನ

ಬಗೆಗಳು ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ನೀಡುವಂತೆ ಬುಖಿನನ್‌ಗೆ ತಿಳಿಸಲಾಗಿತ್ತು. ಬಂಗಾಳದ ಜೊತೆಗೆ ಇಲ್ಲಿಯ ಕೆಲವು ಅಂಶಗಳನ್ನು ಹೋಲಿಸುವುದು ಕೂಡ ಅವನ ಉದ್ದೇಶವಾಗಿತ್ತು.

ಬುಖಿನನ್ನನ ಮುಖ್ಯ ಉದ್ದೇಶಗಳ ಬಗ್ಗೆ ಯಾಕೆ ಇಲ್ಲಿ ಉಲ್ಲೇಖಿಸಿದೆಯೆಂದರೆ ಟಿಪ್ಪುವಿನ ಬಗ್ಗೆ ಜನರ ಅಭಿಪ್ರಾಯವನ್ನು ಸಂಗ್ರಹಿಸುವುದು ಬುಖಿನನ್‌ನ ಉದ್ದೇಶವಾಗಿರಲಿಲ್ಲ. ಈ ಬಗ್ಗೆ ಅವನ ಸಂಪುಟಗಳನ್ನು ನೋಡಿದರೆ ಅದರಲ್ಲಿ ಅವನಿಗೆ ಪ್ರತ್ಯೇಕವಾದ ವಿಶೇಷ ಆಸಕ್ತಿ ಇದ್ದಂತೆಯೂ ತೋರುವುದಿಲ್ಲ. ಪ್ರಾಸಂಗಿಕವಾಗಿ ಅಲ್ಲಲ್ಲಿ ಟಿಪ್ಪುವಿನ ಬಗ್ಗೆ ಅವನು ಉಲ್ಲೇಖಿಸುತ್ತಾನೆ ಅಷ್ಟೇ. ಅದೂ ಕೂಡ ಜನರ ಅಭಿಪ್ರಾಯವನ್ನು ಅಧರಿಸಿ ಮಾತ್ರ. ಹೀಗಾಗಿ ಬ್ರಿಟಿಷರಿಗೆ ಟಿಪ್ಪು ಶತ್ರುವಾಗಿದ್ದುದರಿಂದ ಅವನ ಬಗ್ಗೆ ಬುಖಿನನ್ ಪೂರ್ವಗ್ರಹದಿಂದ ಬರೆದಿದ್ದಾನೆ ಎಂದು ತೋರುವುದಿಲ್ಲ. ಹಾಗೆ ನೋಡಿದರೆ ಬ್ರಿಟಿಷರಿಗೆ ಟಿಪ್ಪು ಮಾತ್ರ ಶತ್ರುವಾಗಿರದೆ ಇದ್ದುದರಿಂದ ಅವನು ಮಡಿದ ಬಳಿಕ ಅವನ ಬಗ್ಗೆ ಅಷ್ಟೆಲ್ಲ ಅವರು ತಲೆಕೆಡಿಸಿಕೊಂಡಿರುವ ಸಂಭವವೂ ಇಲ್ಲ.

ತನ್ನ ಈ ಪ್ರಯಾಣದಲ್ಲಿ ಗಮನಿಸಿದ ಬೇರೆ ಬೇರೆ ಜಾತಿಗಳ ಬಗ್ಗೆ, ವೃತ್ತಿಗಳ ಬಗ್ಗೆ, ನಂಬಿಕೆಗಳ ಬಗ್ಗೆ ಎಲ್ಲ ಹೇಳುತ್ತಾನೆ. ಹೆಚ್ಚಿನ ಸಂದರ್ಭಗಳಲ್ಲಿ ತಾನು ಸಂದರ್ಶಿಸಿದ ಜನರನ್ನು ತಿದ್ದಲು ಹೋಗದೆ ಅಥವಾ ತನ್ನ ಅಭಿಪ್ರಾಯವನ್ನು ಹೇಳಲು ಹೋಗದೆ ನಿಜವಾದ ಅಧ್ಯಯನಕಾರ ಅಥವಾ ಶೋಧಕನಂತೆ ಬುಖಿನನ್ ವ್ಯವಹರಿಸುತ್ತಿದ್ದನೆಂದು ನಮಗೆ ಅನಿಸುತ್ತದೆ. ಕೆಲವರು ವಸ್ತುಗಳನ್ನು ಅವನಿಗೆ ಮಾರುವಾಗ ಹೆಚ್ಚಿನ ಬೆಲೆ ಹೇಳಿ ಮೋಸ ಮಾಡಿದ ಬಗ್ಗೆಯೂ ಹೇಳುತ್ತಾನೆ. ಒಂದೆಡೆ, 'ಬ್ರಾಹ್ಮಣರು ಮಾವಿನ ಓಟೆಯಿಂದ ನಾಲ್ಕು ಗಂಟೆಗಳೊಳಗೆ ಒಂದು ಅಡಿ ಎತ್ತರದ ಚಿಕ್ಕ ಸಸಿಯು ಕುಡಿಯೊಡೆಯುವಂತೆ ಮಾಡಬಲ್ಲರು' ಎಂಬ ಬಗೆಗಿನ ವಿವರವನ್ನು ನೀಡಿ "ಇದು ಬರಿಯ ಮೋಸವೆಂದು ನನಗೆ ತಿಳಿದಿದೆ" ಎನ್ನುತ್ತಾನೆ. ಬ್ರಾಹ್ಮಣ ಹೇಳಿದ ಈ ಕತೆಯು ಒಂದು ಕುತೂಹಲಕಾರಿ ವಂಚನೆ ಎನ್ನುತ್ತಾನೆ(ಪು. 33–34, ಸಂ.1). ವಿವಿಧ ಜಾತಿಗಳಿಗೆ ಸೇರಿದವರು ಮಾಡುತ್ತಿದ್ದ ಜಾತಿಭೇದದ ಬಗ್ಗೆ ಹೇಳುತ್ತಾನೆ. ಬ್ರಾಹ್ಮಣರು ಮಾಡುತ್ತಿದ್ದ ಜಾತಿಭೇದದ ಬಗ್ಗೆಯೂ ವಿಶೇಷವಾಗಿ ಉಲ್ಲೇಖಿಸುತ್ತಾನೆ(ಪು. 26, ಸಂ. 1). ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಟಿಪ್ಪುವಿನ ಕಾಲದ ಬಗ್ಗೆ, ಅವನ ಜನವಿರೋಧಿ ನೀತಿಗಳ ಬಗ್ಗೆ ತನ್ನ ಪ್ರಯಾಣದ ಹಾದಿಯಲ್ಲಿ ಕಂಡುಕೊಂಡುದನ್ನು ಪ್ರಾಸಂಗಿಕವಾಗಿ ಬುಖಿನನ್ ಹೇಳುವಾಗ ಅದರಲ್ಲಿ ಪೂರ್ವಗ್ರಹ ಅಥವಾ ಅಪ್ರಾಮಾಣಿಕತೆ ಕಾಣುವುದಿಲ್ಲ ಎಂದು ಹೇಳಬಹುದು. ಅಲ್ಲದೆ, ಜನರ ಅಭಿಪ್ರಾಯದ ಹಿನ್ನೆಲೆಯಲ್ಲಿ ಹೈದರನ ಬಗ್ಗೆ ಬುಖಿನನ್ ತನ್ನ ಧನಾತ್ಮಕ ಅಭಿಪ್ರಾಯವನ್ನು ಕೂಡ ದಾಖಲಿಸಿದ್ದಾನೆ. (ಪು. 548, ಸಂ.2).

ಅಷ್ಟೇ ಅಲ್ಲ; ಈ ಪ್ರಯಾಣದಲ್ಲಿ ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡುದನ್ನು ಬುಖಿನನ್ ಮೇಲಿನವರಿಗೆ ವರದಿ ಮಾಡಿಕೊಳ್ಳಬೇಕಿತ್ತು. ಅಂದರೆ ತಮ್ಮ ಆಡಳಿತವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಹೇಗೆ ಮಾಡಬಹುದು; ದೇಶವನ್ನು ಇನ್ನಷ್ಟು ಭದ್ರವಾಗಿ ಹೇಗೆ ತಮ್ಮ ಕೈಯೊಳಗೆ ಇಟ್ಟುಕೊಳ್ಳಬಹುದು ಎನ್ನುವುದನ್ನು ತಿಳಿದುಕೊಳ್ಳಲಿಕ್ಕಾಗಿ ಇಂತಹ ಅಧ್ಯಯನಗಳನ್ನು ಬ್ರಿಟಿಷರು ಕೈಗೊಳ್ಳುತ್ತಿದ್ದರು. ಹೀಗಾಗಿ ಈ ರೀತಿಯ ಅಧ್ಯಯನ ವರದಿಗಳನ್ನು ಸಲ್ಲಿಸುವವರು ಸಾಧ್ಯವಾದಷ್ಟು ಮಟ್ಟಿಗೆ ತಾವು ಕಂಡ ವಾಸ್ತವವನ್ನೇ ವರದಿಯಲ್ಲಿ ಹೇಳುವ ಸಾಧ್ಯತೆಯೇ ಹೆಚ್ಚು.

*****

ಟಿಪ್ಪುವನ್ನು ಹೊಗಳುವ ಲಾವಣಿಗಳ ಬಗ್ಗೆ ಇತಿಹಾಸಕಾರರು ಉಲ್ಲೇಖಿಸುತ್ತಾರೆ. ಆದರೆ ಬುಖನನ್ ಬರಹದಲ್ಲಿ ಟಿಪ್ಪು ಅಂತಹ ಜನಮೆಚ್ಚುಗೆ ಪಡೆದಿದ್ದ ಎನ್ನುವ ಅಂಶಗಳು ದಾಖಲಾದುದು ಕಾಣುವುದಿಲ್ಲ. ಬದಲಾಗಿ ಅವನು ಗೆದ್ದಿದ್ದ ಅಥವಾ ಅವನ ಆಳ್ವಿಕೆಯಿದ್ದ ಪ್ರದೇಶಗಳಲ್ಲಿ ಪ್ರಜಾಪೀಡನೆಯೇ ಇದ್ದಂತೆ ಕಾಣುತ್ತದೆ. ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ ವ್ಯಾಪಕವಾಗಿ ಸುಲಿಗೆಗಳಾಗುತ್ತಿದ್ದ ಬಗ್ಗೆ ಬುಖನನ್ ಸಂಪುಟದಲ್ಲಿ ಉಲ್ಲೇಖಿಗಳು ಸಿಗುತ್ತವೆ. ಉದಾಹರಣೆಗೆ ಪಾಲಾರ್ ನದಿಯ ಪಶ್ಚಿಮಕ್ಕೆ ಇರುವ ಬೇತಮಂಗಲ ಎನ್ನುವ ಸ್ಥಳದ ಬಗ್ಗೆ ಬರೆಯುವಾಗ ಇಂತಹ ವಿವರ ಬರುತ್ತದೆ. ಅಲ್ಲಿ ಪದೇಪದೇ ಸುಲಿಗೆಕೋರರ ದಂಡು ಬರುತ್ತಿತ್ತು(ಪು. 41, ಸಂ. 1). ತಮಿಳರು, ತೆಲುಗರು ಮತ್ತು ಕನ್ನಡಿಗರು ಮತ್ತು ಸಾಕಷ್ಟು ಸಂಖ್ಯೆಯ ಮುಸಲ್ಮಾನರಿದ್ದ ಆ ಭಾಗದಲ್ಲಿ ಟಿಪ್ಪುವಿನ ಆಡಳಿತದಲ್ಲಿ ಸೈನ್ಯದಿಂದಲೇ ಸುಲಿಗೆಯಾಗುತ್ತಿತ್ತು. "ಟಿಪ್ಪೂ ಸೈನ್ಯದ ಸ್ವೇಚ್ಛಾಚಾರ ಹಾಗೂ ಆತನ ಆಳ್ವಿಕೆಯಲ್ಲಿ ಸರ್ವೇಸಾಮಾನ್ಯವಾಗಿದ್ದ ಮನಸ್ಸೀ ಸುಲಿಗೆಗಳು ಈಗ ತಪ್ಪಿವೆ ಎಂಬ ವಿಷಯವೂ ಅವರಿಂದ ತಿಳಿದುಬಂದಿತು" (ಪು. 43, ಸಂ. 1). ಈ ಬಗೆಯ ಸುಲಿಗೆ ಒಂದು ಪ್ರದೇಶಕ್ಕೆ ಸೀಮಿತವಾಗಿರಲಿಲ್ಲ. ಬೆಂಗಳೂರಿನಲ್ಲೂ ಅದು ಇತ್ತು. ಸುಲ್ತಾನನ ಆಳ್ವಿಕೆಯಿದ್ದ ಕಾಲದಲ್ಲಿ ಊರಿನ ಲೂಟಿಯಲ್ಲಿ ರೆವಿನ್ಯೂ ಇಲಾಖೆಯ ಪ್ರತಿಯೊಬ್ಬ ನೌಕರರಿಗೂ ಪಾಲನ್ನು ಪಡೆಯಲು ಅನುಮತಿಯಿತ್ತು (ಪು. 62, ಸಂ. 1). ಕಿಂಗಾರ ಅಥವಾ ತಿಂಗಾರ ಎನ್ನುವ ಊರಲ್ಲಿ ಕರ್ನವಾಲಿಸನ ಉಪಯೋಗಕ್ಕೆ ಬಾರದಿರಲೆಂಬ ಉದ್ದೇಶದಿಂದ ಅನೇಕ ಮನೆಗಳನ್ನು ಟಿಪ್ಪು ಹಾಳುಗೆಡವಿದನು ಎಂಬ ಮಾಹಿತಿಯನ್ನು ಊರವರು ನೀಡುತ್ತಾರೆ (ಪು. 64, ಸಂ. 1).

ಚನ್ನಪಟ್ಟಣದ ಬಳಿಯ ಕಪಲ ದುರ್ಗದ ಬಗ್ಗೆ ಬುಖನನ್ ಕೊಡುವ ವಿವರ ಹೀಗಿದೆ. "ಚನ್ನಪಟ್ಟಣದಿಂದ ಗೋಚರವಾಗುವಂತಿದ್ದಾಗ್ಯೂ ಕಪಲ ದುರ್ಗವು ಸಾಕಷ್ಟು ದೂರದಲ್ಲಿದೆ. ಟಿಪ್ಪು ತನ್ನ ಅಸಮಾಧಾನಕ್ಕೆ ಗುರಿಯಾದ ಹತಭಾಗ್ಯರನ್ನು ಇಲ್ಲಿಗೆ ರವಾನಿಸುತ್ತಿದ್ದ. ಕಡಿದಾದ ಎತ್ತರದ ಬಂಡೆಯೊಂದರ ಮೇಲೆ ಈ ಕೋಟೆಯನ್ನು ನಿರ್ಮಿಸಲಾಗಿದೆ. ಇಲ್ಲಿನ ಕೆಟ್ಟ ಹವೆ ಹಾಗೂ ನೀರಿನಿಂದಾಗಿ ಬಂಧಿತರು ಬಹಳ ಬೇಗ ಸಾವಿಗೀಡಾಗಿ ತಮ್ಮ ನರಳಾಟದಿಂದ ಮುಕ್ತಿ ಪಡೆಯುತ್ತಿದ್ದರು. ಆಗಾಗ್ಗೆ ಯುಫೋರ್ಬಿಯಂನ ಕೊಂಬೆಗಳನ್ನು ಬಾವಿಗೆ ಹಾಕಿ, ಅದನ್ನು ಅಸಹ್ಯ ಹಾಗೂ ಅಪಾಯಕಾರಿಯಾಗಿ ಮಾಡುತ್ತಿದ್ದರಲ್ಲದೆ ಸತ್ತ ಹಾವು ಮತ್ತಿತರ ಸರೀಸೃಪಗಳನ್ನು ಹಾಕಿ ಮತ್ತಷ್ಟು ಕೊಳೆಯುವಂತೆ ಮಾಡುತ್ತಿದ್ದರು. ಈ ಬಂಧೀಖಾನೆಯ ಭಯಾನಕ ವಿವರಗಳನ್ನು ನೀಡಲು ಯಾವ ಸ್ಥಳೀಯ ಕೈದಿಯೂ ಅಲ್ಲಿಂದ ವಾಪಸಾಗಿಲ್ಲವೆಂದು ಹೇಳಲಾಗಿದೆ." (ಪು. 70, ಸಂ. 1)

ಮದ್ದೂರು ಪ್ರದೇಶಕ್ಕೆ ಬಂದ ಬುಖನನ್ ಅಲ್ಲಿ ಜನಸಂಖ್ಯೆ ಕಡಿಮೆಯಿದ್ದ ಬಗ್ಗೆ ಹೀಗೆ ಕಾರಣಗಳನ್ನು ನಿಡುತ್ತಾನೆ. "ಟಿಪ್ಪುವಿನ ದಬ್ಬಾಳಿಕೆ ಹಾಗೂ ಯುದ್ಧದ ಬೇಗುದಿಗಳಿಂದಾಗಿ ಹತ್ತನೇ ನಾಲ್ಕರಷ್ಟು ಕೃಷಿಕರು ಇಲ್ಲಿಂದ ಹೊರಬಿದ್ದರು. ಈ ಪ್ರಜಾಪೀಡಕನು ತನ್ನ ತಂದೆಯಿಂದ ರಾಜ್ಯವನ್ನು ಪಡೆದಾಗ , ಅದು ಬಹಳ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು. ಈ ವಿಷಯದ ಬಗ್ಗೆ ನನ್ನೊಂದಿಗೆ ಸಂಭಾಷಿಸಿದ ಎಲ್ಲ ಸ್ಥಳೀಯರೂ ಈತನ ತಂದೆಯ ಬಗ್ಗೆ ಅಪಾರ ಗೌರವವನ್ನು ವ್ಯಕ್ತಪಡಿಸಿದರು" (ಪು. 72, ಸಂ.

1)ಅಂದರೆ ಹೈದರಾಲಿಯ ಬಗ್ಗೆ ಗೌರವ ಹೊಂದಿದ್ದ ಅಲ್ಲಿಯ ಜನರು ಟಿಪ್ಪುವನ್ನು ಪ್ರಜಾಪೀಡಕನೆಂದೇ ಪರಿಗಣಿಸಿದ್ದರು.

ಮಂಡ್ಯದ ಆಸುಪಾಸಿನ ಬಗ್ಗೆ ವಿವರಗಳನ್ನು ನೀಡುವಾಗ ಈಚಲು ಮರದ ಶೇಂದಿಯನ್ನು ಟಿಪ್ಪು ನಿಷೇಧಿಸಿದ್ದ ಬಗ್ಗೆ ಹೇಳಿದ ನಂತರ ಬುಖನನ್ ಹೀಗೆ ಮುಂದುವರಿಸುತ್ತಾನೆ. "(ಟಿಪ್ಪು) ಚಾರಿತ್ರ್ಯಹೀನ ಸ್ತ್ರೀಯನ್ನು ಸಹಿಸತಕ್ಕದ್ದಲ್ಲವೆಂದು ಆಜ್ಞೆಯಿತ್ತದ್ದನಾದರೂ, ಈತನೇ ವಿವೇಚನಾರಹಿತ ಸ್ತ್ರೀವ್ಯಸನಿಯಾಗಿದ್ದನು. ಕೆಲವೊಮ್ಮೆ ತಮ್ಮ ಪುತ್ರಿಯರಲ್ಲಿ ಅತ್ಯಂತ ಸುಂದರಿಯಾದವಳನ್ನು ಬಲವಂತವಾಗಿ ಕರೆದೊಯ್ಯುತ್ತಿದ್ದನೆಂದು ಇಲ್ಲಿನ ಬ್ರಾಹ್ಮಣರು ದೂರುತ್ತಾರೆ. ಆತನು ಅವರನ್ನು ಕೆಲವು ಕಾಲ ಜನಾನಾದಲ್ಲಿ ಬಂಧನದಲ್ಲಿರಿಸಿ, ತನಗೆ ಇಷ್ಟವಾಗದಿದ್ದಲ್ಲಿ ಅವರ ತಂದೆಯ ಹತ್ತಿರ ವಾಪಸ್ಸು ಕಳುಹಿಸುತ್ತಿದ್ದನು. ಆಗ ತಂದೆಯು ಆಕೆಯನ್ನು ಕುಟುಂಬದೊಳಗೆ ಸೇರಿಸಿಕೊಳ್ಳಲು ನಿರಾಕರಿಸುತ್ತಿದ್ದನು. ಆ ನಿರ್ಭೀತ ವರ್ತನೆಯನ್ನು ಸಹಿಸದ ಟಿಪ್ಪು, ಆತನನ್ನು ಕರೆಸಿ, ಆಸ್ತಿಯೆಲ್ಲವನ್ನೂ ಕಿತ್ತುಕೊಂಡು ಚೆನ್ನಾಗಿ ಥಳಿಸುತ್ತಿದ್ದನಲ್ಲದೆ, ನಂತರ ಆ ಹುಡುಗಿಗೆ ಯಾರಾದರೊಬ್ಬ ಬ್ರಾಹ್ಮಣನನ್ನು ಪತಿಯಾಗಿ ಆರಿಸುವಂತೆ ಆಜ್ಞಾಪಿಸುತ್ತಿದ್ದನು. ಆ ಬ್ರಾಹ್ಮಣನು ಇದಕ್ಕೆ ಒಪ್ಪುವವರೆಗೂ ಆತನನ್ನು ಥಳಿಸಲಾಗುತ್ತಿತ್ತು. ಜಾತಿಭ್ರಷ್ಟನಾದ ಬ್ರಾಹ್ಮಣನು ಟಿಪ್ಪುವಿನ ಆಧಿಪತ್ಯದ ಪ್ರದೇಶಗಳನ್ನು ಬಿಟ್ಟು, ಪತ್ನಿಯನ್ನು ತ್ಯಜಿಸಿ, ಪಲಾಯನ ಮಾಡುತ್ತಿದ್ದನು. ಆತನ ಪತ್ನಿ ನಿರ್ಗತಿಕಳಾಗುತ್ತಿದ್ದಳು ಅಥವಾ ಆಕೆ ವೇಶ್ಯೆಯಾಗುತ್ತಿದ್ದುದೂ ಉಂಟು. ಬೇರೊಂದು ಪ್ರದೇಶಕ್ಕೆ ತೆರಳಿದ ಬ್ರಾಹ್ಮಣನು ಅಶುದ್ಧಳಾದ ತನ್ನ ಪತ್ನಿಯನ್ನು ತಿರಸ್ಕರಿಸಿ, ಮತ್ತೊಂದು ವಿವಾಹವಾಗಲು ಗುರುವಿನಿಂದ ಅನುಮತಿಯನ್ನು ಪಡೆದು ಬಿಡುಗಡೆ ಹೊಂದುತ್ತಿದ್ದನು." (ಪು. 74, ಸಂ. 1) ಸ್ತ್ರೀಯರನ್ನು ಬಲಾತ್ಕಾರವಾಗಿ ಜನಾನಾಕ್ಕೆ ಸೇರಿಸಿ ಆನಂತರ ತಿರಸ್ಕರಿಸುವ ಟಿಪ್ಪುವಿನ ಈ ಕ್ರೌರ್ಯಕ್ಕೆ ಯಾವ ವಿವರಣೆಯೂ ಬೇಕಿಲ್ಲ. ಇಲ್ಲಿ ಟಿಪ್ಪುವಿನ ಉದ್ದೇಶ ಕೇವಲ ಸ್ತ್ರೀಯರನ್ನು ಭೋಗವಸ್ತುಗಳಾಗಿ ಅನುಭವಿಸುವುದಷ್ಟೇ ಅಲ್ಲ; ಸ್ತ್ರೀಯರ ನೆಪದಲ್ಲಿ ಒಂದು ಸಮುದಾಯದ ಆತ್ಮಸ್ಥೈರ್ಯವನ್ನೇ ಕುಗ್ಗಿಸುವ ಉದ್ದೇಶ ಎನ್ನುವುದು ಸ್ಪಷ್ಟವಾಗುತ್ತದೆ.

ಮತಾಂತರ ಮಾಡುವ ಟಿಪ್ಪುವಿನ ತೀವ್ರ ಯತ್ನಗಳು ಕೇವಲ ಜನಸಾಮಾನ್ಯರ ಮಟ್ಟಿಗೆ ಮಾತ್ರ ಇರಲಿಲ್ಲ. ದಿವಾನರನ್ನೇ ಮತಾಂತರಿಸುವ ಯೋಚನೆಯೂ ಆತನಲ್ಲಿ ಇತ್ತೆಂದು ಗೊತ್ತಾಗುತ್ತದೆ. ಶ್ರೀರಂಗಪಟ್ಟಣಕ್ಕೆ ಭೇಟಿಯಿತ್ತ ಸಂದರ್ಭವನ್ನು ವಿವರಿಸುವಾಗ ದಿವಾನ್ ಪೂರ್ಣಯ್ಯನನ್ನೂ ಮತಾಂತರ ಮಾಡಲು ಟಿಪ್ಪು ಯತಿಸಿದ್ದ ಬಗ್ಗೆ ಬುಖನನ್ ಉಲ್ಲೇಖಿಸುತ್ತಾನೆ. "ದಿವಂಗತ ಸುಲ್ತಾನನ ಕಾಲದಲ್ಲಿ ಮೀರ್ ಸಾದಕನ ನಂತರ, ಇತರ ಯಾವುದೇ ವ್ಯಕ್ತಿಗಿಂತಲೂ ಈತನು ಅತಿ ಹೆಚ್ಚಿನ ಅಧಿಕಾರವನ್ನು ಹೊಂದಿದ್ದನಾದರೂ, ಆತನ ಅಧಿಕಾರವು ಸುಲ್ತಾನನ ಈ ಅಚ್ಚುಮೆಚ್ಚಿನ ವ್ಯಕ್ತಿಗಿಂತಲೂ(ಮೀರ್ ಸಾದಕನಿಗಿಂತಲೂ) ಅತ್ಯಂತ ಕೆಳದರ್ಜೆಯದಾಗಿತ್ತು. ತನ್ನ ಯಜಮಾನನ ಸ್ವಮತಾಭಿಮಾನದ ಅಪಾಯದಿಂದ ಈತನೂ ಹೊರತಾಗಿರಲಿಲ್ಲ. ಸುಲ್ತಾನನು ಒಮ್ಮೆ ಪೂರ್ಣಯ್ಯನಿಗೆ ಮಹ್ಮದನ ಧರ್ಮಕ್ಕೆ ಮತಾಂತರಗೊಳ್ಳುವ ಪ್ರಸ್ತಾಪವನ್ನಿಟ್ಟಾಗ, ಸುಲ್ತಾನನ ಪ್ರಸ್ತಾಪಗಳೆಲ್ಲವೂ ಪಾಲಿಸಲೇಬೇಕಾದ ಆಜ್ಞೆಗಳಾದ್ದರಿಂದ ಪೂರ್ಣಯ್ಯನು, 'ನಾನು ತಮ್ಮ ಸೇವಕ' ಎಂದಷ್ಟೇ ಹೇಳಿ ಕೂಡಲೇ ಅಲ್ಲಿಂದ ನಿರ್ಗಮಿಸಿದನೆಂಬ

ಸುದ್ದಿಯಿದೆ. ಈತನನ್ನು ಬಲ್ಲ ಅತ್ಯಂತ ಗೌರವಾನ್ವಿತ ಮಹಿಳೆಯಾದ ಸುಲ್ತಾನನ ತಾಯಿಯು, ಪೂರ್ಣಯ್ಯನ ಮೇಲ್ನೋಟದ ಮೌನಸಮ್ಮತಿಯು ಸಹಜವಾಗಿ ನುಡಿದ ಮಾತುಗಳಷ್ಟೇ ಆಗಿದ್ದು, ಜನರಲ್ಲಿ ಆತನ ಪ್ರಭಾವವು ಗಮನಾರ್ಹವಾಗಿರುವುದರಿಂದ, ಸುಲ್ತಾನನ ಪ್ರಸ್ತಾಪವು ಅಪಾಯಕಾರಿಯಾಗಿದ್ದು, ಇದಕ್ಕೆ ಒತ್ತಾಯಿಸಿದಲ್ಲಿ ಎಲ್ಲವೂ ಗೊಂದಲಮಯವಾಗುವುದೆಂಬ ಸಲಹೆಯನ್ನು ನೀಡಿದರು. ಟಿಪ್ಪು ಇದನ್ನು ಅಷ್ಟಕ್ಕೇ ಬಿಟ್ಟು, ಈ ವಿಷಯದಲ್ಲಿ ಮತ್ತೇನೂ ಹೇಳದೆ ಸುಮ್ಮನಾದನು." (ಪು.79, ಸಂ. 1)

ಆಂಗ್ಲರ ಸೈನ್ಯದಿಂದ ಎರಡೂ ಕಡೆಯಿಂದ ಟಿಪ್ಪು ಗುಂಡಿನ ದಾಳಿಗೊಳಗಾದ ಬಗ್ಗೆ ಬುಖನನ್ ಹೇಳುತ್ತಾನೆ. ಟಿಪ್ಪುವಿನ ಮರಣದ ಬಗ್ಗೆ ಬುಖನನ್ ದಾಖಲಿಸುವ ವಿವರ ಹೀಗಿದೆ. "...ಕುದುರೆಯು ಆತನು ಕುಳಿತಿರುವಂತೆಯೇ ಗುಂಡಿಗೆ ಬಲಿಯಾಯಿತೆಂದು ಹೇಳಲಾಗಿದೆ. ...(ಆಂಗ್ಲ ಸೈನ್ಯದ) ಎರಡೂ ತಂಡಗಳು ದ್ವಾರದತ್ತ ಗುಂಡು ಹಾರಿಸಿದವಲ್ಲದೆ, ಸುಲ್ತಾನನ ತೋಳಿನಲ್ಲಿ ಕೋವಿಯಿಂದಾದ ಗಾಯವು ಅನಂತರದಲ್ಲಿ ನಿಚ್ಚಳವಾಗಿ ಗುರುತಿಸಲ್ಪಟ್ಟ ಕಾರಣ, ಕೋವಿಯನ್ನು ಹಿಡಿದ ಯುರೋಪಿಯನ್ನರು ಆ ಮಾರ್ಗವಾಗಿ ಸಾಗಿರಬಹುದೆಂದು ಊಹಿಸಲಾಗಿದೆ..." ಆದರೆ ಟಿಪ್ಪುವನ್ನು ಕೊಂದವರು ಯಾರು ಎನ್ನುವ ಮಾಹಿತಿ ಆಗಲೂ ಯಾರಲ್ಲೂ ಇರಲಿಲ್ಲ. ಬುಖನನ್ ಹೇಳುವಂತೆ, "ಸುಲ್ತಾನನ್ನು ಕೊಂದ ಕೀರ್ತಿಗೆ ಯಾರೂ ಭಾಜನರಾಗಿಲ್ಲ. ದ್ವಾರದ ಬಳಿ ಕೆಳಗೆ ಬಿದ್ದಿದ್ದ ಆತನ ಬಗ್ಗೆ ಎರಡೂ ಕಡೆಯ ಸೈನಿಕರಿಗೆ ಅರಿವೇ ಇರಲಿಲ್ಲ. ದಾಳಿಕೋರರಿಗೆ ಶತ್ರುನಾಶದ ಹೊರತಾಗಿ, ಮತ್ತೇನನ್ನೂ ಯೋಚಿಸುವ ವ್ಯವಧಾನವಿರಲಿಲ್ಲ... ಪ್ರವೇಶದ್ವಾರಗಳ ಮೂಲಕ ತೆರಳುವ ಪ್ರಯತ್ನದಲ್ಲಿ, ಕೆಳಗೆ ಬಿದ್ದ ಸುಲ್ತಾನನ ಅಚ್ಚುಮೆಚ್ಚಿನ ಮೀರ್ ಸಾದಕನನ್ನು ಟಿಪ್ಪುವಿನ ಸೈನಿಕರೇ ಕೊಂದಿರಬಹುದೆಂದ ಊಹಿಸಲಾಗಿದೆ. ಸುಲ್ತಾನನ ನಿರಂಕುಶ ಆಳ್ವಿಕೆಯಲ್ಲಿ ಮೀರ್ ಸಾದಕನಿಂದಾಗಿ ಬಹಳಷ್ಟು ಕಷ್ಟಕಾರ್ಪಣ್ಯಗಳನ್ನು ಅವರು ಅನುಭವಿಸಿದ್ದರು. ಕೆಳಗೆ ಬಿದ್ದ ಆತನ ಹೆಣದ ಮೇಲೆ ಕೆಲಹೊತ್ತಿನವರೆಗೂ ಆ ಮಾರ್ಗವಾಗಿ ಸಾಗಿದ ಎಲ್ಲರೂ ಉಗುಳುತ್ತ ಸಾಗಿದರಲ್ಲದೆ, ಚಪ್ಪಲಿಯಿಂದಲೂ ಹೊಡೆದರು."(ಪು.84, ಸಂ1). ಟಿಪ್ಪುವಿನ ಸೈನಿಕರಿಗೇ ಅಷ್ಟು ಸಿಟ್ಟು ಇರಬೇಕಾದರೆ ಇನ್ನು ಇತರ ಪ್ರಜೆಗಳು ಯಾವ ದೌರ್ಜನ್ಯವನ್ನು ಅನುಭವಿಸಿರಬಹುದು!?

ಬುಖನನ್ ಕಂಡುಕೊಂಡಂತೆ, ಟಿಪ್ಪುವಿನ ಪ್ರವೃತ್ತಿಯಾದರೂ ಅಷ್ಟೆ: "ಹಿಂದಿನದನ್ನು ನಾಶಪಡಿಸುವುದು. ಈ ಹಿಂದಿನ ಆಳ್ವಿಕೆಯ ಎಲ್ಲ ಸ್ಮಾರಕಗಳನ್ನೂ ನಾಶಗೊಳಿಸುವ ಪ್ರವೃತ್ತಿಯ ಟಿಪ್ಪು ಮೈಸೂರನ್ನು ಧ್ವಂಸಗೊಳಿಸಿ, ಅರಮನೆ ಹಾಗೂ ದೇವಸ್ಥಾನಗಳ ಕಲ್ಲುಗಳನ್ನು ಕಿತ್ತು ನೆರೆಯಲ್ಲಿ ತಾನು ನಿರ್ಮಿಸುತ್ತಿದ್ದ ಕೋಟೆಯೊಂದಕ್ಕೆ ಸಾಗಿಸಿದ." (ಪು.88, ಸಂ.1). ರಾಜನ ಆಳ್ವಿಕೆಯಲ್ಲಿದ್ದ ಎಲ್ಲವನ್ನೂ ಹಾಳುಗೆಡಹುವುದು ಆತನ ಅಚ್ಚುಮೆಚ್ಚಿನ ನೀತಿಯಾಗಿತ್ತು. ಇದನ್ನು ಆಚರಣೆಗೆ ತರುವ ಭರದಲ್ಲಿ ಜಮೀನುಗಳಿಗೆ ನೀರು ಪೂರೈಸುವ ನಾಲೆ, ಕೆರೆ ಮುಂತಾದ ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತವೆನಿಸಿದ್ದ ಕಾಮಗಾರಿಗಳನ್ನು ಆಗಾಗ್ಗೆ ಹಾಳುಗೆಡವಿದನು. ಆತನು ಕ್ರಿಯಾಶೀಲ ರಾಜನೇ ಆಗಿದ್ದರೂ ಪ್ರಜೆಗಳಿಗೆ ಹತ್ತಿರವಾಗಿರಲಿಲ್ಲ. ಇದು, ನಿರಂಕುಶ ರಾಜಪ್ರಭುತ್ವಗಳ ಅತ್ಯಂತ ಕೆಟ್ಟ ಪ್ರವೃತ್ತಿಗಳಲ್ಲೊಂದು. ಆತನ ಅಚ್ಚುಮೆಚ್ಚಿನ ಮೀರ್ ಸಾದಕ್, ಅತ್ಯಂತ ದುರಾಸೆಯ ಕ್ರೂರ ರಾಕ್ಷಸನಂತೆ ವರ್ತಿಸುತ್ತಿದ್ದನು.." (ಪು.91, ಸಂ.1). ಇದೇ ಸಂದರ್ಭದಲ್ಲಿ ರೆವಿನ್ಯೂ ಇಲಾಖೆಯನ್ನು ನಿಭಾಯಿಸುತ್ತಿದ್ದ ಬ್ರಾಹ್ಮಣರು

ಧನಲೋಭಿಗಳೂ, ಭ್ರಷ್ಟಾಚಾರಿಗಳೂ ಆಗಿದ್ದ ಬಗ್ಗೆಯೂ ಬುಖಿನನ್ ಹೇಳುತ್ತಾನಾದ್ದರಿಂದ ಆತ ಯಾರೋ ಕೆಲವು ಬ್ರಾಹ್ಮಣರ ಪೂರ್ವಗ್ರಹೀತ ಮಾತುಗಳಿಂದ ಪ್ರಭಾವಿತನಾಗಿ ಟಿಪ್ಪುವಿನ ದೋಷಗಳನ್ನು ಹೇಳುತ್ತಾನೆಂದು ಭಾವಿಸಲು ಅವಕಾಶವಿಲ್ಲ.

ಟಿಪ್ಪುವಿಗೆ ತನ್ನ ಹಿಂದೂ ಪ್ರಜೆಗಳ ಧರ್ಮದ ಬಗ್ಗೆ ಕಾಳಜಿಯಿರಲಿಲ್ಲ ಎಂಬುದನ್ನು ಬುಖಿನನ್ ಗುರುತಿಸುತ್ತಾನೆ. "ತನ್ನ ಬಹುತೇಕ ಪ್ರಜೆಗಳ ದಾರ್ಮಿಕ ಪೂರ್ವಗ್ರಹಗಳ ಬಗ್ಗೆ ಯಾವುದೇ ಆಸಕ್ತಿ ತೋರದ ಆತನು, ನಿಷ್ಕಾರಣವಾಗಿ ಅವರ ದೇವಸ್ಥಾನಗಳ ನಾಶಕ್ಕೆಳಸುತ್ತಿದ್ದನಲ್ಲದೆ, ಸಾವಿರಾರು ಜನರನ್ನು ಮುಸಲ್ಮಾನ್ ಮತಶ್ರದ್ಧೆಯನ್ನು ಸ್ವೀಕರಿಸುವಂತೆ ಒತ್ತಾಯಿಸುವುದರಲ್ಲಿ ಹೆಮ್ಮೆಪಡುತ್ತಿದ್ದನು.."(ಪು. 91, ಸಂ.1).

ವಾಣಿಜ್ಯ ವ್ಯವಹಾರದಲ್ಲಿ ಮತ್ತು ಆಡಳಿತದಲ್ಲಿ ಸುಲ್ತಾನನ ದಬ್ಬಾಳಿಕೆ ಬೇರೊಂದು ರೀತಿಯಲ್ಲಿ ಕೂಡ ಪ್ರತಿಫಲಿತವಾಗುತ್ತಿತ್ತು. "ಸರಕುಗಳನ್ನು ಅಸಲಿ ಬೆಲೆಗಿಂತಲೂ ಅತ್ಯಂತ ಹೆಚ್ಚಿನ ದರಕ್ಕೆ ಸುಲ್ತಾನನ ಲೆಕ್ಕದಲ್ಲಿ ಮಾರಾಟಮಾಡುವಂತೆ ಅದೇಶಿಸಿ ಕೆಲವೊಮ್ಮೆ ಅಮಲ್ದಾರರು ಅಥವಾ ಸಂಸ್ಥಾನಗಳ ಗವರ್ನರುಗಳಿಗೆ ಅವನ್ನು ಹಂಚಲಾಗುತ್ತಿತ್ತು... ದಬ್ಬಾಳಿಕೆ, ಸಾರ್ವಜನಿಕ ಹಣದ ದುರುಪಯೋಗ ಹಾಗೂ ರಾಜ್ಯಾದಾಯದ ಸೋರಿಕೆಗೆ ಇದು ಬಹು ದೊಡ್ಡ ಮೂಲವಾಗಿತ್ತು..." (ಪು.91, ಸಂ.1). ಸಾರ್ವಜನಿಕ ಹಣದ ದುರುಪಯೋಗದ ಸಂದರ್ಭಗಳಲ್ಲಿ ಎಚ್ಚರಿಕೆಯ ಶಿಕ್ಷೆಯನ್ನು ವಿಧಿಸಿ, ಲಂಚಕ್ಕೆಳಸದಂತೆ ತೃಪ್ತಿಕರ ವೇತನವನ್ನು ನಿಗದಿಸುವ ಬದಲಿಗೆ, ಮುಸಲ್ಮಾನ್ ಅಸೋಫ್ ಅಥವಾ ಲೆಫ್ಟಿನೆಂಟ್ ಗಳನ್ನು ಆತನು ನೇಮಿಸಿದನು. ಇವರಿಗೆ ನಾಡಿನ ಬೃಹತ್ ವಿಭಾಗಗಳ ಉಸ್ತುವಾರಿಯನ್ನು ವಹಿಸಲಾಗಿ, ಪರಿಸ್ಥಿತಿಯು ಮತ್ತಷ್ಟು ಬಿಗಡಾಯಿಸಿತು. ಸೋಮಾರಿಗಳೂ, ಲಂಪಟರೂ, ಅಜ್ಞಾನಿಗಳೂ ಆದ ಇವರಿಗೆ ಮತಾಂದತೆಗೆ ದೊರೆಯುವ ರಾಜನ ಬೆಂಬಲದ ಬಗ್ಗೆ ಅಪಾರ ನಂಬಿಕೆ. ಯಾವುದೇ ನಿಯಮ ನಿಬಂಧನೆಗಳನ್ನು ಪಾಲಿಸದ ಇವರು ತಮ್ಮ ವಾಂಛೆಗಳ ಪೂರೈಕೆಗಾಗಿ ಸಾರ್ವತ್ರಿಕವಾಗಿ ಲಂಚವನ್ನು ಪಡೆಯತೊಡಗಿದರು. ಅಸೋಫರ ಹೊಸ ಬೇಡಿಕೆಗಳು ತಾವು ಪಡೆಯುತ್ತಿದ್ದ ಲಾಭಕ್ಕಿಂತಲೂ ಸಾಕಷ್ಟು ಹೆಚ್ಚಾಗಿದ್ದ ಕಾರಣ ಅವನ್ನು ಪೂರೈಸುವ ನಿಟ್ಟಿನಲ್ಲಿ, ಬ್ರಾಹ್ಮಣರ ಅಪರಾಧಗಳು ದುಪ್ಪಟ್ಟಾದವು." (ಪು. 92, ಸಂ.1). ನಣ್ಯಗಳ ಮೌಲ್ಯ ನಿರ್ಣಯ ಮುಂತಾದ ವಿಚಾರಗಳಲ್ಲೂ ಟಿಪ್ಪು ಬೇಕಾಬಿಟ್ಟಿಯಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದ ಎಂಬ ಅಂಶವೂ ದಾಖಲಾಗಿದೆ. (ಪು.165, 167, ಸಂ.1). ಟಿಪ್ಪುವಿನ ದುರಾಡಳಿತ ಮತ್ತು ದಬ್ಬಾಳಿಕೆಯಿಂದಾಗಿ ಕೆಲವು ಕಡೆ ಜನರು ಊರು ಬಿಟ್ಟು ಹೋಗುತ್ತಿದುದೂ ಉಂಟು. (ಪು. 178, ಸಂ.1). ಅದೇರೀತಿ, "ಕಬ್ಬಿಣದ ಅದಿರನ್ನು ಕರಗಿಸುವವರೊಂದಿಗೆ ಬಹಳ ಕಠೋರವಾಗಿ ವರ್ತಿಸುತ್ತಿದ್ದನೆಂದು ಹೇಳಲಾಗಿದೆ." (ಪು. 234, ಸಂ.1).

ಬೆಂಗಳೂರಿನ ಬಗ್ಗೆ ಬರೆಯುವಾಗ ಬುಖಿನನ್ ಹೇಳುವ ಮಾತುಗಳು ಹೀಗಿವೆ. "ಹೈದರನ ಆಳ್ವಿಕೆಯಲ್ಲಿ ಇದು ಪ್ರಮುಖ ಸ್ಥಳವಾಗಿತ್ತು. ಇಲ್ಲಿ ಅನೇಕ ವಸ್ತುಗಳು ತಯಾರಾಗುತ್ತಿದ್ದು, ವಾಣಿಜ್ಯ ವ್ಯವಹಾರಗಳು ಹೆಚ್ಚಾಗಿ ನಡೆಯುತ್ತಿದ್ದವು. ಅರ್ಕಾಟ್ ಹಾಗೂ ಹೈದರಾಬಾದಿನ ಆಡಳಿತಗಾರರ ಆಧಿಪತ್ಯವನ್ನು ದ್ವೇಷಿಸುತ್ತಿದ್ದ ಟಿಪ್ಪು, ಆ ಪ್ರದೇಶಗಳೊಂದಿಗೆ ವ್ಯಾಪಾರಗಳನ್ನು ನಿರ್ಬಂಧಿಸುವ ಮೂಲಕ ಇದರ ದೌರ್ಭಾಗ್ಯಕ್ಕೆ ನಾಂದಿಯಾದನು. ಅಪಾರ ಪ್ರಮಾಣದ ಸರಕನ್ನು ರವಾನಿಸಿದ ಟಿಪ್ಪು, ಅವುಗಳನ್ನು

ಅಧಿಕ ಬೆಲೆಗೆ ಕೊಳ್ಳುವಂತೆ ವರ್ತಕರನ್ನು ಒತ್ತಾಯಿಸಿದನು. ಈತನ ದಬ್ಬಾಳಿಕೆಗಳು ಈ ಪ್ರದೇಶಕ್ಕೆ ಅಪಾರ ಹಾನಿಯನ್ನುಂಟುಮಾಡಿದನು..... ಅಂಗ್ಲರು ಈ ಸ್ಥಳದಿಂದ ತೆರಳಿದ ಬಳಿಕ, ಟಿಪ್ಪು ಇಲ್ಲಿಯ ನಿವಾಸಿಗಳನ್ನು ವಾಪಸ್ಸು ಬರುವಂತೆ ಉತ್ತೇಜಿಸಿದನು. ಅವರು ತೆರಳಿದ ವಿವಿಧ ಸ್ಥಳಗಳಲ್ಲಿನ ಅಳಿದುಳಿದ ಸಂಪತ್ತೆಲ್ಲವನ್ನೂ ಸಂಗ್ರಹಿಸಿ, ಮತ್ತೆ ತಮ್ಮ ವಹಿವಾಟುಗಳನ್ನು ಮುಂದುವರಿಸುವಂತೆ ಆಶ್ವಾಸನೆಗಳನ್ನು ನೀಡಿ ಪ್ರಲೋಭಿಸಿದನು. ಆತನು ಇದನ್ನು ಕಾರ್ಯಗತಗೊಳಿಸಿದ ಬೆನ್ನಲ್ಲೇ, ಅವರು ಆಂಗ್ಲರೊಂದಿಗೆ ಸ್ನೇಹದಿಂದಿರುವರೆಂಬ ನೆಪವೊಡ್ಡಿ, ತನ್ನ ಸೈನ್ಯದೊಂದಿಗೆ ಸ್ಥಳವನ್ನು ಸುತ್ತುವರಿದು, ಸ್ತ್ರೀಯರೂ ಸಹ ತಮ್ಮ ಅತ್ಯಂತ ಸಣ್ಣಪುಟ್ಟ ಆಭರಣಗಳನ್ನು ಒಪ್ಪಿಸುವವರೆಗೆ ನಿವಾಸಿಗಳನ್ನು ಸುಲಿಗೆಮಾಡಿದನು..." (ಪು.251–252, ಸಂ.1).

ಮುಂದೆ ಚಿಕ್ಕಬಳ್ಳಾಪುರದ ಬಗ್ಗೆ ಬರೆಯುವಾಗ ಬುಖಿನನ್ ವರದಿ ಮಾಡುವ ಪ್ರಕಾರ ಟಿಪ್ಪುವಿನ ದಬ್ಬಾಳಿಕೆಯಿಂದ ವರ್ತಕರು ಸಂಪೂರ್ಣವಾಗಿ ಚೆಲ್ಲಾಪಿಲ್ಲಿಯಾದರು. ಬುಖಿನನ್ ಮುಂದೆ ಹೇಳುವ ಅಂಶಗಳು ಭೀಕರವಾಗಿವೆ. "ಈ ಊರಿನಲ್ಲಿ ಚರ್ಮವನ್ನು ಹದಮಾಡುವ ಮಾದಿಗರು ಬಳಸುವ ದೊಡ್ಡ ಚಾಕುವಿನಿಂದ ಪ್ರತಿಯೊಬ್ಬ ಸೈನಿಕನ ಕಾಲು ಇಲ್ಲವೆ ಕೈಗಳು ಕತ್ತರಿಸಲ್ಪಟ್ಟವು. ರಕ್ಷಕ ಸೇನೆಗೆ ತೋರಿಸಲ್ಪಟ್ಟ ಏಕೈಕ ಔದಾರ್ಯವೆಂದರೆ: ಯಾವ ಕೈ ಅಥವಾ ಕಾಲನ್ನು ತುಂಡರಿಸಬೇಕೆಂಬ ಅಯ್ಕೆಯಷ್ಟೇ. ಇದೇ ಸಮಯದಲ್ಲಿ ಅಗಾಗ ಈ ಸ್ಥಳಕ್ಕೆ ಬಂದು ಅದರ ರಕ್ಷಣೆಗೆ ಸಹಕರಿಸುತ್ತಿದ್ದ ನೆರೆಯ ಏಳುನೂರು ಮಂದಿ ರೈತರಿಗೂ ಇದೇ ಶಿಕ್ಷೆಗಳನ್ನು ವಿಧಿಸಲಾಯಿತು. ಕದ ಎಣ್ಣೆಯಲ್ಲಿ ಅದ್ದಿದ ಚಿಂದಿ ಬಟ್ಟೆಯನ್ನು ಹೊರತುಪಡಿಸಿ, ರಕ್ತಸ್ರಾವವನ್ನು ನಿಲ್ಲಿಸುವ ಯಾವುದೇ ದಾರಿ ಇವರಿಗಿರಲಿಲ್ಲ. ಇವರಲ್ಲಿ ಬಹುತೇಕ ಜನರು ಬಡವರಾಗಿದ್ದು, ಅನೇಕರಿಗೆ ಇಂತಹ ಸಂದರ್ಭದಲ್ಲಿ ಸಹಾಯ ಮಡಬಹುದಾದ ಯಾವ ಸ್ನೇಹಿತನೂ ಇರಲಿಲ್ಲ. ಕೆಲವೇ ಹತಭಾಗ್ಯರು ಬದುಕುಳಿದರು. ಅವರಲ್ಲಿನ ಕೆಲವರು ಇಲ್ಲಿ ನೆಲೆಸಿದ್ದು, ಭಿಕ್ಷೆಯಿಂದ ಜೀವನ ನಡೆಸುತ್ತಿದ್ದಾರೆ. ನನ್ನನ್ನು ನೋಡಿಕೊಳ್ಳುತ್ತಿರುವ ಪೂರ್ಣಯ್ಯನ ಸುದ್ದಿವಾಹಕನು ಟಿಪ್ಪುವಿನ ಸೈನಿಕರಲ್ಲೊಬ್ಬನಾಗಿ, ಈ ಹತ್ಯೆಗಳ ಸಂದರ್ಭದಲ್ಲಿ ಉಪಸ್ಥಿತನಿದ್ದನು." (ಪು.430, ಸಂ.1)

ಬುಖಿನನ್ ಹೇಳುವಂತೆ "ಟಿಪ್ಪುವಿನ ಅನಾಗರಿಕ ಕ್ರೌರ್ಯದಿಂದಾಗಿ ಆತನ ಪತನದ ಬಗ್ಗೆ ಯಾರಿಗೂ ಮರುಕವುಂಟಾಗಲಿಲ್ಲ. ಕೆಳದರ್ಜೆಯ ಮುಸಲ್ಮಾನರನ್ನು ತನ್ನ ಜೊತೆ ಸೇರಿಸಿಕೊಳ್ಳುವ ನೀತಿಯಲ್ಲಿ ಈತನು ಯಶಸ್ಸು ಸಾಧಿಸಿದನು. ಈ ಉದ್ದೇಶಕ್ಕೆ ತಕ್ಕ ಮತಾಂಧತೆ, ಸ್ವಪ್ರತಿಷ್ಠೆ, ಹಿಡಿದ ಕೆಲಸದಲ್ಲಿನ ಅಪಾರ ಶ್ರದ್ಧೆ ಹಾಗೂ ಆಷಾಢಭೂತಿ ಗುಣಗಳು ಆತನಲ್ಲಿ ಚೆನ್ನಾಗಿಯೇ ಮೇಳೈಸಿದ್ದವು." ಎಲ್ಲದಕ್ಕಿಂತ ಮುಖ್ಯವಾಗಿ ಬುಖಿನನ್ ಗುರುತಿಸಿದ ಒಂದಂಶವಿದೆ. ಟಿಪ್ಪು ತನ್ನ ಮುಸ್ಲಿಂ ಪ್ರಜೆಗಳಿಂದ ಗೌರವವನ್ನು ಪಡೆದಿದ್ದ. ಮುಸಲ್ಮಾನ ಪ್ರಜೆಗಳ ಮಟ್ಟಿಗೆ ಅವನು ಜನಾನುರಾಗಿ ಎನಿಸಿಕೊಳ್ಳಲು ಅವನ ಮತಾಂಧತೆಯೇ ಕಾರಣವಾಗಿತ್ತು! "ಅಗತ್ಯ ಬಿದ್ದಾಗಲೂ ಸಹ ಆತನ ಯಾವ ಮುಸಲ್ಮಾನ ಬಾಂಧವರೂ ನಮ್ಮಲ್ಲಿ(ಆಂಗ್ಲರಲ್ಲಿ) ಕೆಲಸಕ್ಕೆ ಸೇರಲಿಲ್ಲ. ತಮ್ಮ ಧರ್ಮವನ್ನು ಉಳಿಸುವುದಕ್ಕಾಗಿ ಪ್ರಾಣತೆತ್ತ ಹುತಾತ್ಮನೆಂಬ ಭಾವದಿಂದ ಅವರೆಲ್ಲರೂ ಸುಲ್ತಾನನ್ನು ಅಪಾರ ಗೌರವದಿಂದ ಸ್ಮರಿಸುತ್ತಾರೆ." (ಪು.93, ಸಂ.1). ಅಂದರೆ ಅಂತಹ ಮುಸಲ್ಮಾನರ ಮಟ್ಟಿಗೆ ಆಂಗ್ಲರ ವಿರುದ್ಧದ ಟಿಪ್ಪುವಿನ ಹೋರಾಟ

ತನ್ನ ರಿಲಿಜನ್ನಿಗಾಗಿ ನಡೆಸಿದ ಹೋರಾಟ! ಟಿಪ್ಪುವಿನ ಇಂತಹ ಹೋರಾಟವನ್ನೇ ಅಲ್ಲವೇ ಸ್ವಾತಂತ್ರ್ಯ ಹೋರಾಟವೆಂದು ನಮ್ಮ ತಥಾಕಥಿತ ಸೆಕ್ಯುಲರುವಾದಿಗಳು ಕರೆಯುವುದು? ಆ ಮುಸಲ್ಮಾನ ಪ್ರಜೆಗಳು ಆಂಗ್ಲರನ್ನು ದ್ವೇಷಿಸಲು ರಿಲಿಜನ್ನಿನ ಮೇಲಿನ ಪ್ರೇಮವೇ ಕಾರಣ ಹೊರತು ಸಂಸ್ಥಾನದ ಬಗೆಗಿನ ಪ್ರೇಮ ಅಲ್ಲ! ತಮ್ಮ ಜೀವನ ನಿರ್ವಹಣೆಗಾಗಿ ಮುಸಲ್ಮಾನರು ಕಡಿಮೆ ಸಂಬಳವಾದರೂ ಕೃಷಿ ಕೂಲಿ ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರೇ ಹೊರತು ತಮ್ಮ ಹುತಾತ್ಮ ಸುಲ್ತಾನನ್ನು ಕೊಂದ ಇನ್ಫಿಡೆಲ್‌ಗಳ (ಹಿಂದುಗಳ) ಜೊತೆಗೆ ಸೇರಿ ಕಂಪೆನಿಯ ಸೇವೆಗೆ ಸೇರಲು ಸಿದ್ಧರಿರಲಿಲ್ಲ. (ಪು.90, ಸಂ.2). ಅಂದರೆ ಸಾಮಾನ್ಯ ಮುಸಿಮರಿಗೆ ತಮ್ಮ ಜೀವನ ನಿವಹಣೆಗಾಗಿ ಮಾಡುವ ಸಂಪಾದನೆಗಿಂತಲೂ ರಿಲಿಜನ್ನನ್ನು ಉಳಿಸಿದ ಟಿಪ್ಪು ಮುಖ್ಯ ಎನಿಸಿದ್ದ. ಬುಖನನ್ ವರದಿಯಲ್ಲಿ ಎಲ್ಲೂ ಟಿಪ್ಪು ಜನಾದರಣೆಗೆ ಒಳಗಾಗಿದ್ದ ಎನ್ನುವ ಮಾಹಿತಿ ಸಿಗುವುದಿಲ್ಲವಾದರೂ ಅವನನ್ನು ಹಾಡಿ ಹೊಗಳುವ ಲಾವಣಿಗಳು ಎಲ್ಲಿ ಯಾರಿಂದ ಯಾವಾಗ ಸೃಷ್ಟಿಯಾಗಿರಬಹುದು?

ಟಿಪ್ಪುವಿನ ಜನಾನಾದ ಬಗ್ಗೆ ಬುಖನನ್ ಹೀಗೆ ಹೇಳುತ್ತಾನೆ: "....ಎಂದಿನಂತೆ ಅಲ್ಲಿದ್ದ ಖೋಜಾಗಳ ಕಾವಲು ಅನುಲ್ಲಂಘನೀಯವಾಗಿತ್ತು. ಇಲ್ಲಿ, ಸುಲ್ತಾನ ಹಾಗೂ ಆತನ ದಿವಂಗತ ತಂದೆಗೆ ಸೇರಿದ ಆರುನೂರು ಜನ ಸ್ತ್ರೀಯರಿದ್ದರು. ಇವರಲ್ಲಿನ ಬಹುಪಾಲು ಸ್ತ್ರೀಯರು ದಾಸಿಯರು ಅಥವಾ ಸ್ತ್ರೀಯರ ಪರಿಚಾರಕರು. ಯಜಮಾನಿಯರೊಂದಿಗೆ ಅವರನ್ನು ಬಿಗಿಯಾದ ಕಾವಲಿನಲ್ಲಿಡಲಾಗಿತ್ತು. ಸುಲ್ತಾನನ ಸ್ತ್ರೀಯರ ಸಂಖ್ಯೆ ಎಂಭತ್ತು. ಬಹುತೇಕ ಎಲ್ಲರೂ ಹಿಂದೂ. ಬ್ರಾಹ್ಮಣರ ಪುತ್ರಿಯರು ಹಾಗೂ ಹಿಂದೂ ರಾಜಕುಮಾರಿಯರನ್ನು ಹೆತ್ತವರಿಂದ ಬಲವಂತವಾಗಿ ಬೇರ್ಪಡಿಸಿ ಕರೆತರಲಾಗುತ್ತಿತ್ತು. ಎಳೆಯ ಪ್ರಾಯದಲ್ಲೇ ಅವರನ್ನು ಜೆನಾನಾದಲ್ಲಿ ಬಂಧಿಸಿ, ಮೊಹಮದ್‌ರ ಮತದ ಬಗ್ಗೆ ಶ್ರದ್ಧಾಪೂರ್ವಕ ವಿಶ್ವಾಸವು ಮೂಡುವಂತೆ ಎಚ್ಚರಿಕೆಯಿಂದ ಬೆಳೆಸಲಾಗುತ್ತಿತ್ತು." (ಪು. 94, ಸಂ. 1)

ಮೇಲುಕೋಟೆ ಬಳಿ ರಾಮಾನುಜರು ಕಟ್ಟಿದ್ದ ದೇವಾಲಯವನ್ನು ಟಿಪ್ಪು ಕೋಟೆಯಾಗಿ ಪರಿವರ್ತಿಸಿದ್ದ ಬಗ್ಗೆ ಹಾಗೂ ರಾಮಾನುಜರು ರೈತರಿಗೆ ನೀರಾವರಿ ವ್ಯವಸ್ಥೆಗಾಗಿ ಕಟ್ಟಿಸಿದ್ದ ಒಂದು ದೊಡ್ಡ ಕೆರೆಯನ್ನೇ ಟಿಪ್ಪು ನಾಶ ಮಾಡಿದ ಉಲ್ಲೇಖವೂ ಇದೆ. (ಪು. 82–83, ಸಂ. 2).

ಬುಖನನ್ ಹೇಳುವ ಪ್ರಕಾರ, ವೀರರಾಯನ ಆಳ್ವಿಕೆಯಿದ್ದಾಗ ಕೊಡಗನ್ನು ಸುತ್ತುವರಿದ ಟಿಪ್ಪು ಸುಲ್ತಾನನು ಕೊಡಗಿನವರಿಗೆ ದಿಗ್ಬಂಧನವನ್ನೇ ವಿಧಿಸಿದ. ಕೊಡಗಿನ ಪ್ರಜೆಗಳನ್ನು ಕೊಲ್ಲಲು ತನ್ನವರಿಗೆ ಆಜ್ಞೆ ಮಾಡಿದ್ದ. ಕೊನೆಗೆ ವೀರರಾಯನನ್ನು ಸೆರೆಹಿಡಿದ ಬಳಿಕ ಅವನ ಒಬ್ಬಳು ತಂಗಿಯನ್ನು ತನ್ನ ಜನಾನಾಕ್ಕೆ ಬಲವಂತವಾಗಿ ಸೇರಿಸಿಕೊಂಡ. (ಪು. 94–95 ಸಂ. 2). ಪಿರಿಯಾಪಟ್ಟಣದ ಜೈನ ದೇವಾಲಯದಲ್ಲಿ ಇಡಲಾಗಿದ್ದ ಮದ್ದುಗುಂಡುಗಳನ್ನು ಟಿಪ್ಪು ಸ್ಫೋಟಿಸಿ ಅದನ್ನು ನಾಶಗೊಳಿಸಿದ. ಹೀಗೆ ಮೂರ್ತಿಪೂಜೆಯ ಆರಾಧನಾ ಕೇಂದ್ರಗಳನ್ನು ನಿರ್ನಾಮಗೊಳಿಸುವುದು ಟಿಪ್ಪುವಿನ ಮನರಂಜನೆಯಾಗಿತ್ತು ಎಂದು ಬುಖನನ್ ಹೇಳುತ್ತಾನೆ. (ಪು. 96, ಸಂ. 2).

ಕೇರಳದ ತಾಮರಚೆರಿಯಲ್ಲಿ ಟಿಪ್ಪು ಮೊಪ್ಲಾಗಳ ಕಾಲನಿಯನ್ನು ಸ್ಥಾಪಿಸಿದ ಬಗ್ಗೆ ಬುಖನನ್ ವರದಿಯಲ್ಲಿ ಉಲ್ಲೇಖವಿದೆ. (ಪು. 490, ಸಂ. 2). ಹೆಚ್ಚುಕಡಿಮೆ

ಇಡೀ ತಾಮರಚೆರಿ ಜಿಲ್ಲೆಯೇ ಅವರ ಸ್ವಾಧೀನದಲ್ಲಿದೆ ಎನ್ನುತ್ತಾನೆ ಬುಖಿನನ್. ಅದು 1801ರಲ್ಲಿ.

ಬುಖಿನನ್ ವರದಿಯ ಪ್ರಕಾರ, ಮಲಬಾರ್ ಪ್ರದೇಶದ ಜನರು ಟಿಪ್ಪುವಿನ ಆಳ್ವಿಕೆಗೂ ಮೊದಲೇ ಸಂಕಷ್ಟದಲ್ಲಿ ಇದ್ದವರು ಟಿಪ್ಪುವಿನ ಕಾಲದಲ್ಲಿ ಇನ್ನಷ್ಟು ಕಷ್ಟಕ್ಕೆ ಒಳಗಾದರು.(ಪು. 549, ಸಂ. 2). ಹೈದರನ ಕಾಲದಲ್ಲಿ ಹಿಂದುಗಳು ದಾರ್ಮಿಕವಾಗಿ ದಬ್ಬಾಳಿಕೆಗೆ ಒಳಗಾಗಿರಲಿಲ್ಲ. ಆದರೆ ಟಿಪ್ಪು ಇದಕ್ಕೆ ವಿರುದ್ಧವಗಿ ನಡೆದುಕೊಂಡ. ಇಸ್ಲಾಮನ್ನು ಮಲಬಾರಿನ ಏಕೈಕ ರಿಲಿಜನ್ ಆಗಿ ಮಾಡಲು ಕ್ರಮ ಕೈಗೊಂಡ. ಅವನ ಈ ಕ್ರೂರ ಉಪಕ್ರಮವನ್ನು ಮೊಪ್ಲಾಗಳು ಸಂತೋಷದಿಂದ ಬೆಂಬಲಿಸಿದರು.

ಮೊಪ್ಲಾಗಳ ಬಗ್ಗೆ ಬುಖಿನನ್ ಬರೆಯುವ ಮಾತುಗಳು ಹೀಗಿವೆ. " Moplays, men possessed of a strong zeal, and of a large share of that spirit of violence and depredation which appears to have invariably been an ingredient in the character of the professors of their religion, in every part of the world where it has spread. All the confidence of the Sultan was bestowed on Moplays, and in every place they became the officers and instruments of government. The Hindus were everywhere persecuted, and plundered of their riches, of their women, and of their children. All such as could flee to other countries did so: those who could not escape took refuge in the forests, from whence they waged a constant predatory war against their oppressors. To trace the progress of these evils would carry me too far. I mention them only for the purpose of showing, how the ancient government of this country was at last completely destroyed, and anarchy was introduced…. During this period of total anarchy the number of Moplays was greatly increased, multitudes of Hindus were circumcised by force, and many of the lower orders were converted. By these means, at the breaking out of the war conducted by Lord Cornwallis, the population of Hindus was reduced to a very inconsiderable number" (ಪು.550, ಸಂ.2).

ಮೊಪ್ಲಾಗಳ ಮನಸ್ಥಿತಿಯ ಬಗ್ಗೆ ಬುಖಿನನ್ ಹೀಗೆ ವರದಿ ಮಾಡುತ್ತಾನೆ. "ನಾಯರ್ ಗಳ ಬಗ್ಗೆ ತಮಗಿದ್ದ ದ್ವೇಷವನ್ನು ಮೊಪ್ಲಾಗಳು ಮರೆಮಾಚುವುದಿಲ್ಲ... ನಾಯರುಗಳು ಮತ್ತು ನಂಬೂದರಿಗಳಿಗೆ ಆಂಗ್ಲರ ರಕ್ಷಣೆ ಸಿಗದೆ ಅವರಷ್ಟಕ್ಕೇ ಬಿಟ್ಟರೆ ಮೊಪ್ಲಾಗಳು ಅವರನ್ನು ಬಹಳ ಬೇಗನೆ ಕಾಡು ಬೆಟ್ಟಗಳಿಗೆ ಓಡಿಸಬಹುದು." ಟಿಪ್ಪುವಿನ ಮತೀಯ ಧೋರಣೆಯು ಉಂಟುಮಾಡಿದ ಪರಿಣಾಮ ಇದು.

ಟಿಪ್ಪುವಿನ ಬಲವಂತದ ಮತಾಂತರದ ಭೀತಿ ಕೇವಲ ಜನಸಾಮಾನ್ಯರಿಗೆ ಇದ್ದುದಲ್ಲ. ಓಪ್ಪು ತನ್ನನ್ನು ಮತಾಂತರಿಸಬಹುದೆಂಬ ಭಯದಿಂದ ಮಲಬಾರಿನಲ್ಲಿ ರಾಜಕುಟುಂಬದ ರಾಮ ವರ್ಮ ತನ್ನ ಆತ್ಮೀಯನಾದ ಒಬ್ಬ ನಾಯರ್ ನಿಂದ ಗುಂಡು ಹಾಕಿಸಿಕೊಂಡು ಸತ್ತನು. (ಪು.558, ಸಂ.2). ಅರಿತ್ತಪರುಂಬ ಪ್ರದೇಶದ

ಬಗ್ಗೆ ಹೇಳುವಾಗ ದಾಖಲಿಸುವಂತೆ, ಅಲ್ಲಿ ಒಳ್ಳೆಯ ಮಣ್ಣು ಇದ್ದರೂ ಕೃಷಿ ಸಾಗುವಳಿಯನ್ನು ಬುಖನನ್ ಕಾಣಲಿಲ್ಲ. ಹೀಗೆ ಸಾಗುವಳಿ ಇಲ್ಲದೆ ಇರಲು ಕಾರಣ ಆ ಭಾಗದ ಹಿಂದುಗಳು 1788–89ರಲ್ಲಿ ಟಿಪ್ಪುವಿನ ಹಿಂಸೆಯಿಂದ ಹತರಾಗಿ ಅಲ್ಲಿ ಸಾಕಷ್ಟು ಜನರೇ ಇಲ್ಲದುದು. (ಪು.559, ಸಂ.2). ಟಿಪ್ಪು ಕೆಲವು ಊರುಗಳನ್ನೇ ಹೀಗೆ ನಾಶ ಮಾಡಿದ್ದುದು ಗೊತ್ತಾಗುತ್ತದೆ.

ನೀಲೇಶ್ವರದ ಬಗ್ಗೆ ಬುಖನನ್ ವರದಿ ಹೀಗೆ ಹೇಳುತ್ತದೆ. "ಇಲ್ಲಿ ಈಗಲೂ (ಅಂದರೆ ಬುಖನನ್ ಪ್ರವಾಸದ ಕಾಲದಲ್ಲಿ) ಸಂಖ್ಯೆಯಲ್ಲಿ ನಾಯರುಗಳೇ ಹೆಚ್ಚು ಇದ್ದಾರಾದರೂ ಟಿಪ್ಪುವಿನ ಕಾಲದಲ್ಲಿ ಹಿಂದುಗಳಿಗೆ ರಕ್ಷಣೆ ಇರಲಿಲ್ಲವಾದ್ದರಿಂದ ಅವರು ಕಾಡುಗಳಲ್ಲಿ ಇರಬೇಕಾಗುತ್ತಿತ್ತು. ಸಿಕ್ಕಿಬಿದ್ದವರಿಗೆ ಸುನ್ನತ್ ಮಾಡಲಾಗುತ್ತಿತ್ತು..." (ಪು.9, ಸಂ.3).

ಮಂಗಳೂರಿನಲ್ಲಿ/ತುಳುನಾಡಿನಲ್ಲಿ ಕ್ರೈಸ್ತರು ಟಿಪ್ಪುವಿನಿಂದ ಹಿಂಸಾಚಾರಕ್ಕೆ ಒಳಗಾದ ಬಗ್ಗೆ ಬರೆಯುವಾಗ ಬುಖನನ್ ಹೀಗೆ ಹೇಳುತ್ತಾನೆ: "In Tuluva they had 27 churches… Tippoo threw the priests into dungeons, forcibly converted to IslAmism the laity, and, destroyed all the churches." (ಪು.24, ಸಂ.3). ಟಿಪ್ಪುವಿನ ಪತನದ ಬಳಿಕ ಹೀಗೆ ಬಲಾತ್ಕಾರವಾಗಿ ಇಸಲಾಮಿಗೆ ಮತಾಂತರಗೊಂಡ ಸುಮಾರು 15,000ದಷ್ಟು ಕ್ರೈಸ್ತರು ಪುನಃ ಮಂಗಲೂರು ಹಾಗೂ ಅಸುಪಾಸಿನ ಪ್ರದೇಶಗಳಿಗೆ ಹಿಂದಿರುಗಿದ್ದಾರೆ ಹಾಗೂ ಮಲಬಾರ್ ಕಡೆಗೆ ಓಡಿಹೋಗಿದ್ದ ಸುಮಾರು 10,000ದಷ್ಟು ಮಂದಿ ಕ್ರೈಸ್ತರು ಹಿಂದಿರುಗುತ್ತಿದ್ದಾರೆ ಎಂದು ಬುಖನನ್ ಬರೆಯುತ್ತಾನೆ. (ಪು.524, ಸಂ.3). ಮೂಡಬಿದಿರೆ ಭಾಗದಲ್ಲಿ ಬ್ರಾಹ್ಮಣರ ಹೆಚ್ಚಿನ ಮನೆಗಳನ್ನು ಟಿಪ್ಪು ನಾಶಗೊಳಿಸಿದ ಬಗ್ಗೆಯೂ ಉಲ್ಲೇಖವಿದೆ. (ಪು.75, ಸಂ.3).

ಮುಂದೆ ಬಿದಿರೂರಿನ ಬಗ್ಗೆ ಬುಖನನ್ ವರದಿ ಮಡುವ ಪ್ರಕಾರ, ಅಲ್ಲಿದ್ದ ಸುಮರು 100 ಕ್ರಿಶ್ಚಿಯನ್ ಕುಟುಂಬಗಳನ್ನು ಟಿಪ್ಪು ಶ್ರೀರಂಗಪಟ್ಟಣಕ್ಕೆ ಒಯ್ದನು. ಅವರ ಚರ್ಚನ್ನು ಖಾಜಿ ನಶ ಮಾಡಿದನು.ಅಲ್ಲಿದ್ದ ಅನೇಕ ಶಿಲಾಶಾಸನಗಳನ್ನು ತುಂಡುತುಂಡು ಮಾಡಲಾಯಿತು. ಖಾಜಿಯು ದೇವಾಲಯಗಳ ಅವಶೇಷಗಳಿಂದ ಸುಂದರ ಮಸೀದಿಯನ್ನು ಕಟ್ಟಿಸಿ ಮೂರು ಮುಲ್ಲಾಗಳನ್ನು ಅಲ್ಲಿ ನಿಲ್ಲಿಸಿದನು. ಆ ಮುಲ್ಲಾಗಳು ಬುಖನನ್ ಭೇಟಿಯ ಕಾಲದಲ್ಲೂ ಅಲ್ಲಿಯೇ ಇದ್ದರು. ಈ ಬಗೆಗಿನ ಟಿಪ್ಪಣಿ ಗಮನಾರ್ಹವಾಗಿದೆ. "The three priests remain in the mosque where, in place of being pampered by the charity of Asophs, and other officers of distinction, they drag out an existence upon an annual pension of 2 pagodas. Their being allowed anything is however a great proof of Poornea's moderation; as they are still living in the spoils of Hindu temples torn from the gods at their instigation." ದೇವಾಲಯಗಳನ್ನು ಧ್ವಂಸಗೊಳಿಸಿ ಕಟ್ಟಿದ ಕಟ್ಟಡದಲ್ಲೇ ಅವರು ಇದ್ದರೂ ಟಿಪ್ಪು ಕಾಲಾನಂತರವೂ ಅವರಿಗೆ ಜೀವನಾಂಶ ಒದಗಿಸಿದ ಪೂರ್ಣಯ್ಯನ ಬಗ್ಗೆ ಬುಖನನ್ ಪ್ರತ್ಯೇಕವಾಗಿ ಉಲ್ಲೇಖಿಸುತ್ತಾನೆ.

ಶಿವಮೊಗ್ಗ ಭಾಗದ ಬಗ್ಗೆ ಬರೆಯುವಾಗ ಮರಾಠಾ ಸೈನ್ಯವು ಟಿಪ್ಪುವಿನ ಬೆಂಕಿ ನವಾಬನ ಸೈನ್ಯವನ್ನು ಎದುರಿಸಿದ ನಂತರ ಮಾಡಿದ ದೌರ್ಜನ್ಯ ಮತ್ತು ಹಾನಿಯನ್ನು

ಕೂಡ ಬುಖನನ್ ದಾಖಲಿಸುತ್ತಾನೆ. "These ruffians did not even spare the Kudali Swami, who is the Guru of all the Marattah Brahmans of the Smartal sect, and who is by them considered as an actual incarnation of the deity. His Matam, or college was plundered and burnt; but this cost the Peshwa dear. The enraged Swami held out the threats of instant excommunication, and was only pacified by a sum of 4,00,000 Rupees. Tippoo had the satisfaction of taking one half of this sum, which was the assessment levied from the Swami on account of the Nuzzur that Lord Cornwallis exacted." (ಪು.290, ಸಂ.3). ಅಂದರೆ ಮರಾಠಾ ದಾಳಿಯಿಂದಲೂ ಟಿಪ್ಪುವಿಗೆ ಲಾಭವೇ ಆಯಿತು! ಮರಾಠಾ ದಾಳಿಯನನು ಹೇಳಿ ಮರಾಠರೇ ಟಿಪ್ಪುವಿಗಿಂತ ಹೆಚ್ಚು ದೌರ್ಜನ್ಯ ಮಾಡಿದವರು ಎನ್ನುವ ಇತಿಹಾಸಕಾರರೂ ಇದ್ದಾರೆ. ಆದರೆ ಮರಾಠರು ಭಿನ್ನ ನಂಬಿಕೆಯವರನ್ನು ಹುಡುಕಿ ಹುಡುಕಿ ಕೊಲ್ಲಲಿಲ್ಲ; ಮತಾಂತರ ಮಾಡಲಿಲ್ಲ! ಹಿಂದುಗಳ ಮಠದ ಮೇಲೆಯೇ ದಾಳಿ ಮಾಡಿದ್ದರು. ಆದ್ದರಿಂದ ಅವರನ್ನು ಸೆಕ್ಯುಲರ್ ಎನ್ನುವುದಕ್ಕೆ ಏನೂ ಅಡ್ಡಿಯಿಲ್ಲ! ಈಗ ಕಾಶ್ಮೀರದಲ್ಲಿ ಮುಸ್ಲಿಮರನ್ನೂ ಕೊಲ್ಲುತ್ತಿರುವ ಕಾರಣಕ್ಕೇ ತಾನೆ ಭಯೋತ್ಪಾದಕರಿಗೆ ರಿಲಿಜನ್ ಇಲ್ಲ ಅಂತ ಎಡಪಂಥೀಯ ಸೆಕ್ಯುಲರುವಾದಿಗಳು ಹೇಳುವುದು?

****

ಗವರ್ನರ್ ಜನರಲ್ ವೆಲ್ಲೆಸ್ಲಿಯ ಆದೇಶದಂತೆ ಮದರಾಸಿನಿಂದ ಮೈಸೂರು, ಕೆನರಾ ಮತ್ತು ಮಲಬಾರ್ ಪ್ರಾಂತ್ಯಗಳಲ್ಲಿ ಪ್ರಯಾಣ ಮಾಡಿ ಕೃಷಿ, ಕಲೆ, ಸಂಸ್ಕೃತಿ, ವಾಣಿಜ್ಯ ವ್ಯವಹಾರ, ಧರ್ಮ/ರಿಲಿಜನ್, ನಡೆನುಡಿ, ಆಚರಣಾಪದ್ಧತಿ ಇತ್ಯಾದಿ ವಿಚಾರಗಳ ಬಗ್ಗೆ ಸಂಶೋಧನ ಪ್ರಜ್ಞೆಯಿಂದಲೇ ಬುಖನನ್ ಮಾಹಿತಿ ಸಂಗ್ರಹಿಸಿದ್ದನೆಂಬುದು ಅವನ ವಿಸ್ತೃತ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ಒಟ್ಟು ಮೂರು ಸಂಪುಟಗಳಲ್ಲಿ ಸುದೀರ್ಘವಾಗಿ ದಾಖಲಾದ ವರದಿಯಲ್ಲಿ ಪ್ರಾಸಂಗಿಕವಾಗಿ ಟಿಪ್ಪುವಿನ ಮತಾಂಧತೆ ಮತ್ತು ದುರಾಡಳಿತದ ಬಗ್ಗೆ ಮಾಹಿತಿ ಸಿಗುತ್ತದೆ. ಟಿಪ್ಪುವಿನ ಬಗೆಗೆ ಒಟ್ಟಾರೆಯಾಗಿ ಜನಸಾಮಾನ್ಯರ ಅಭಿಪ್ರಾಯವೂ ಅದೇ ಆಗಿದೆ. ಆದರೆ ಎಲ್ಲಿಯೂ ಟಿಪ್ಪುವಿನ ಮತಸೌಹಾರ್ದ ಮನೋಭಾವದ ಬಗ್ಗೆಯಾಗಲೀ, ಆತನ ಅನ್ಯಮತ ಸಹಿಷ್ಣುತೆಯ ಬಗ್ಗೆಯಾಗಲೀ, ಆತ ಜನರ ಆದರಕ್ಕೆ ಒಳಗಾಗಿದ್ದ ಎಂಬ ಬಗ್ಗೆಯಾಗಲೀ ಸೂಚನೆ ಸಿಗುವುದಿಲ್ಲ. ಅವನು ಶೃಂಗೇರಿ ಮಠಕ್ಕೆ ಮಾಡಿದ ಸಹಾಯವಾಗಲೀ, ರಂಗನಾಥ ದೇವಾಲಯವನ್ನು ಉಳಿಸಿಕೊಂಡುದಾಗಲೀ ಅಪವಾದಗಳೆಂಬಂತೆ ಕಾಣುತ್ತವೆ. ಜೀವಮಾನದ ಬಹುಭಾಗದಲ್ಲಿ ಕೆಲವು ಕೊಲೆ, ಸುಲಿಗೆಗಳನ್ನು ಮಾಡಿ, ಹಫ್ತಾ ವಸೂಲಿ ಮಾಡಿ ಅಕ್ರಮವಾಗಿ ಸಂಪಾದಿಸಿದ ಡಾನ್‌ಗಳಂಥ ವ್ಯಕ್ತಿಗಳು ಒಂದೆರಡು ಜನೋಪಕಾರಿ ಕೆಲಸಗಳನ್ನು ಮಾಡಿದಾಗ ಅದಕ್ಕೆ ಪ್ರಚಾರ ಸಿಕ್ಕುವುದು ಸಹಜ; ಮತ್ತು ಈ ಪ್ರಚಾರವು ಜೀವನವಿಡೀ ಸಮಾಜಕ್ಕಾಗಿ ದುಡಿದವನಿಗೆ ದೊರೆಯುದಕ್ಕಿಂತ ಹೆಚ್ಚೇ ಇರುವುದೂ ಸಹಜ.

ಕೊನೆಯದಾಗಿ, ಮಾಸ್ತಿಯವರು ತಮ್ಮ 'ಬಿಳಿಗಿರಿ ರಂಗ' ಎಂಬ ಕಥೆಯಲ್ಲಿ, ಪ್ರಾಯಶಃ ಜನಪದರ ಅಭಿಪ್ರಾಯವನ್ನು ಆಧರಿಸಿ ಬರೆದ ಸಾಲುಗಳೊಂದಿಗೆ ಈ

ಲೇಖನವನ್ನು ಮುಗಿಸಬಹುದು. "ಟೀಪು ಸುಲ್ತಾನ ತನ್ನ ಅಧಿಕಾರಿಗಳಿಗೆ 'ಯಾವ ಊರಿನಲ್ಲೇ ಆಗಲಿ ರಂಗನಾಥನ ದೇವಾಲಯಕ್ಕೆ ತಂಟೆ ಮಾಡಬೇಡಿ' ಎಂದು ಹೇಳಿದ್ದನಂತೆ. ಮುಸ್ಲಿಂ ಅಧಿಕಾರಿ ಬಂದು ಇಲ್ಲಿ ಯಾವ ದೇವರು ಎಂದು ಕೇಳಿದಾಗ, ರಂಗನಾಥ ಎಂದರೆ ದೇವಾಲಯ ಉಳಿಯಿತು; ಶ್ರೀನಿವಾಸ ಎಂದರೆ ಉಳಿಯುವುದೋ ಇಲ್ಲವೋ ಸಂದೇಹ. 'ರಂಗನಿಗೇ ಶ್ರೀನಿವಾಸ ಎಂದು ಇನ್ನೊಂದು ಹೆಸರು. ಆದ್ದರಿಂದ ಇದೂ ರಂಗನಾಥನ ದೇವಾಲಯವೇ' ಎಂದು ವಿವರಿಸಿ ಹೇಳಬಹುದು. ಅಧಿಕಾರಿ ಒಪ್ಪಿದರೆ ಸಮ; 'ಸುಳ್ಳು ಹೇಳುತ್ತಿದ್ದೀರಿ' ಎಂದರೆ ಸಮರ್ಥನೆ ಯಾರು ಹೇಳಬೇಕು? ಶ್ರೀನಿವಾಸ, ರಂಗನಾಥ ಎರಡೂ ಒಂದೇ ಆಗಿರುವಾಗ, ಶ್ರೀನಿವಾಸ ಎಂದು ಹೇಳಿ ಚರ್ಚೆಯಲ್ಲಿ ತೊಡಗಿಕೊಳ್ಳುವುದಕ್ಕಿಂತ ರಂಗನಾಥ ಎಂದು ಹೇಳಿ ಅವರಿಂದ ತಪ್ಪಿಸಿಕೊಳ್ಳುವುದು ಸುಖ ಎಂದು ಜನರಿಗೆ ಕಂಡಿತು. ಆದ್ದರಿಂದ ಬಿಳಿಗಿರಿ ಮಾಗಡಿ ದೇವಾಲಯಗಳ ಶ್ರೀನಿವಾಸನೂ ಶೀಬಿಯ ನರಸಿಂಹನೂ ರಂಗನೆಂದು ಪ್ರಸಿದ್ಧರಾದರು."

ಈ ವಿವರಣೆಯನ್ನೂ ಅಗತ್ಯಕ್ಕೆ ತಕ್ಕಂತೆ ಬೇಕಾದರೆ 'ರಂಗನಾಥ ದೇವಾಲಯಕ್ಕೆ ಮಾತ್ರ ಹಾನಿ ಮಾಡಬಾರದು' ಎಂದು ಓದುವ ಬದಲಿಗೆ 'ದೇವಾಲಯಕ್ಕೆ ಹಾನಿ ಮಾಡಬಾರದು' ಎಂದು ಟಿಪ್ಪು ತನ್ನ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಆಜ್ಞೆ ಮಾಡಿದ್ದಿದೆ' ಎಂದು ಓದಿಕೊಳ್ಳುವವರು ಇದ್ದೇ ಇರುತ್ತಾರೆ.

ಆಧಾರ

ಫ್ರಾನ್ಸಿಸ್ ಬುಖಿನನ್, (ಅನು: ಶೈಲಜಾ ಜಿ.ಪಿ.) ಮೈಸೂರು, ಕೆನರಾ ಮತ್ತು ಮಲಬಾರ್ ಪ್ರಾಂತ್ಯಗಳ ಮೂಲಕ ಮದ್ರಾಸಿನಿಂದ ಒಂದು ಪಯಣ (ಸಂಪುಟ–1), ಕುವೆಂಪು ಭಾಷಾ ಭಾರತಿ ಪ್ರಾಧಿಕರ, ಬೆಂಗಳೂರು, 2021.

ಸಂಪುಟ–2: buchanan vol 2.pdf (ಅಂತರಜಾಲದಿಂದ)

ಸಂಪುಟ–3: Buchanan vol 3.pdf (ಅಂತರಜಾಲದಿಂದ)

❖❖❖

ಸ್ಥಿರವು ತೋರುವುದು ಚಲನದಲಿ
ಚಲನವೋ ಅದು ಸ್ಥಿರದಲ್ಲಿ

ಯಳಂದೂರು ತಾಲ್ಲೂಕಿನ ಮಾಂಬಳ್ಳಿಯ ಶಾಸನೋಕ್ತ ಅಧ್ಯಯನ

ಸತ್ಯಶೀಲ ಜಿ. ಎಂ.
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳಗಂಗೋತ್ರಿ
ಮಂಗಳೂರು ವಿಶ್ವವಿದ್ಯಾನಿಲಯ

ಚರಿತ್ರೆಯ ಅಧ್ಯಯನಕ್ಕೆ ಸಂಬಂಧಿಸಿದಂತೆ ದೊರೆಯುವ ಸಾಹಿತ್ಯಕ ಕೃತಿಗಳು ಅಥವಾ ಆಕರ ಗ್ರಂಥಗಳಿಗಿಂತಲೂ ಶಾಸನಗಳನ್ನು ಪ್ರಮುಖವಾದ ಮೂಲಾಧಾರಗಳಾಗಿವೆ. "ಆಧಾರಗಳಿಲ್ಲದೆ ಇತಿಹಾಸವಿಲ್ಲ"ವೆಂಬ ವಾಡಿಕೆಯಂತೆ ಇವುಗಳ ಸಮಗ್ರ ಸತ್ಯಶೋಧನೆಗೆ ಶಾಸನಗಳೇ ಆಧಾರಗಳಾಗಿದ್ದು ಇವುಗಳು ದೊರೆಯದೇ ಇದ್ದರೆ ಇತಿಹಾಸವನ್ನು ಮರೆಮಾಚುವ, ತಿರುಚುವ ಸಂಭವವಿರುತ್ತದೆ. ಹಾಗೆಯೇ ಸತ್ಯಾಂಶವನ್ನು ಕುರಿತು ರಚನೆಗಳನ್ನು ಹುಡುಕುವುದು ಬಲು ಕಷ್ಟ. ಆದ್ದರಿಂದಲೇ ನಮ್ಮ ಸಂಶೋಧನಾಸಕ್ತರಿಗೆ ಸಾಹಿತ್ಯಾಧಾರಗಳಿಗಿಂತ ಶಾಸನಾಧಾರಗಳು ಅತ್ಯಂತ ನಂಬಿಕೆಯುಳ್ಳ ಆಕರಗಳಾಗಿ ದೊರಕುತ್ತವೆ.[1]

ಶಾಸನಾತ್ಮಕವಾಗಿ ಯಾವುದೇ ಪ್ರದೇಶವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಹಲವಾರು ಮಹತ್ವಪೂರ್ಣವಾದ ಅಂಶಗಳು ಬೆಳಕಿಗೆ ಬರುತ್ತವೆ. ಈ ಲೇಖನದಲ್ಲಿ ಮಾಂಬಳ್ಳಿಯ ಚಾರಿತ್ರಿಕ ಹಿನ್ನೆಲೆಯನ್ನು ಶಾಸನಗಳ ಅಧ್ಯಯನದಿಂದ ವಿಶ್ಲೇಷಿಸಲಾಗಿದೆ. ಮಾಂಬಳ್ಳಿ ಗ್ರಾಮವು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿಗೆ ಸೇರಿದ ಒಂದು ಪ್ರಾಚೀನ ಗ್ರಾಮವಾಗಿದೆ. ಐತಿಹಾಸಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ಹಾಗೂ ಸಾಮಾಜಿಕವಾಗಿಯೂ ಸಹ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಮಾಂಬಳ್ಳಿ ಗ್ರಾಮವು ಜಿಲ್ಲಾ ಕೇಂದ್ರದಿಂದ 35 ಕಿ.ಮೀ ಹಾಗೂ ತಾಲ್ಲೂಕು ಕೇಂದ್ರದಿಂದ 12 ಕಿ.ಮೀ ದೂರದಲ್ಲಿದ್ದು, ಸುವರ್ಣಾವತಿ ನದಿಯ ಎಡದಂಡೆಯ ಮೇಲಿದೆ.[2] ಪ್ರಾಚೀನ ಕಾಲದಲ್ಲಿ ಮಾಂಬಳ್ಳಿ ಗ್ರಾಮವು ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದ ನೆಲೆಯಾಗಿದ್ದು, ಈ ಗ್ರಾಮದ ಬಗ್ಗೆ ಶಾಸನಗಳಲ್ಲಿ ಅದರ ಪ್ರಾಚೀನ ಹೆಸರನ್ನು ಮಾಮ್ಪಳ್ಳಿ,[3] ಮಾಪಳ್ಳಿ,[4] ವೀರವಲ್ಲಾಳ ಪಟ್ಟಣ,[5] ಮಾಂಬಳ್ಳಿ,[6] ಮಾಂಬನಳಿ,[7] ಮಾಂಬಳಿ,[8] ಮಾಪ್ಪಳ್ಳಿ,[9] ಮಾಮ್ಬಳ್,[10] ಹರಿಹರರಾಯ ಪಟ್ಟಣ[11] ಎಂದು ಶಾಸನಗಳಲ್ಲಿ ಉಲ್ಲೇಖಿಗೊಂಡಿದೆ.

ಮಾಂಬಳ್ಳಿಯಲ್ಲಿ ದೊರೆತಿರುವ 20ಕ್ಕೂ ಹೆಚ್ಚು ಶಾಸನಗಳನ್ನು ಕುರಿತ ಅಧ್ಯಯನ ನಡೆಸಲಾಗಿದೆ. ಪುನ್ನಾಟರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರ ಕಾಲದ ಶಾಸನಗಳು ದೊರಕಿವೆ. ಈ ಭಾಗವು ಪುನ್ನಾಟರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರಿನ ಪಾಳೇಗಾರರು, ಹದಿನಾಡ ಅರಸರು, ಮೈಸೂರು ಒಡೆಯರ ಆಳ್ವಿಕೆಗೆ ಒಳಪಟ್ಟಿತ್ತು.[12]

ವಿವಿಧ ಸಾಮ್ರಾಜ್ಯಗಳ ಮೂಲಕ ಆಡಳಿತ ನಡೆಸಿದ ರಾಜರುಗಳ ಇತಿಹಾಸ ಹಾಗೂ ಅವರ ಕಾಲಘಟ್ಟದಲ್ಲಿ ನಡೆದ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳು, ಯುದ್ಧಗಳು, ಒಳಾಡಳಿತ ಘಟಕಗಳು, ವ್ಯಾಪಾರ ವಹಿವಾಟು, ಐತಿಹ್ಯಗಳು, ಸ್ಥಳನಾಮ, ಸ್ಥಳ ಮಹಿಮೆ, ರಾಜಧಾನಿಗಳ ಬದಲಾವಣೆಗಳು, ತೆರಿಗೆಗೆ ಸಂಬಂಧಿಸಿದ ನೀತಿ–ನಿರೂಪಣೆಗಳು, ರಾಜಾಜ್ಞೆಗಳು, ದಾನ–ದತ್ತಿ ವಿಚಾರಗಳು, ಕಾನೂನು ಸುವ್ಯವಸ್ಥೆ, ಪ್ರಜೆಗಳ ಜೀವನ ವ್ಯವಸ್ಥೆಗಳು, ಪ್ರಜೆಗಳ ಹಿತಕ್ಕಾಗಿ ವ್ಯವಸಾಯ, ಕುಡಿಯುವ ನೀರು ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳ ಅನುಕೂಲಕ್ಕಾಗಿ ಕೆರೆ–ಕಟ್ಟೆಗಳನ್ನು ನಿರ್ಮಾಣ ಮಾಡುವಂತಹ ಜನೋಪಯೋಗಿ ಕಾರ್ಯಕ್ರಮಗಳು, ಬಿರುದು, ಬಹುಮಾನಗಳು, ವೀರ ಮರಣಕ್ಕೆ ಸಂಬಂಧಿಸಿದ ಹಾಗೆ ಸತಿಸಹಗಮನದಂತಹ ಹತ್ತಾರು ಮಾಸ್ತಿಕಲ್ಲು ಮತ್ತು ವೀರಗಲ್ಲುಗಳ ವಿಚಾರಗಳನ್ನು ಕಲ್ಲಿನ ಮೇಲೆ, ಲೋಹಗಳ ಮೇಲೆ, ದೇವಾಲಯದ ಗೋಡೆಗಳ ಮೇಲೆ, ವಿಗ್ರಹಗಳ ಪೀಠದ ಮೇಲೆ, ದೇವಸ್ಥಾನದ ಘಂಟೆಗಳ ಮೇಲೆ, ಪಾತ್ರೆಗಳ ಮೇಲೆ ಆಸ್ಥಾನದ ವಿದ್ವಾಂಸರುಗಳು, ಪಂಡಿತರು, ಕವಿಗಳು, ಶಿಲ್ಪ ಕಲೆಗಾರರು ಅಥವಾ ವಾಸ್ತುಶಿಲ್ಪಿಗಳಿಂದ ಕೆತ್ತಿಸುತಿದ್ದರು ಅಥವಾ ಬರೆಸುತ್ತಿದ್ದರು. ಹೀಗೆ ಹಲವಾರು ಕುತೂಹಲಕಾರಿ ಅಂಶಗಳ ಬಗ್ಗೆ ಶಾಸನಗಳು ಬೆಳಕನ್ನು ಚೆಲ್ಲುತ್ತವೆ.[13]

ಕಪಿಲ ನದಿಯ ಬಲದಂಡೆಯ ಮೇಲೆ ಕಿತ್ತೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತಿದ್ದ ಪುನ್ನಾಟದ ಅರಸರ ಆಡಳಿತಕ್ಕೆ ಮಾಂಬಳ್ಳಿಯು ಒಳಪಟ್ಟಿತ್ತೆಂದು ಅಲ್ಲಿ ದೊರೆತಿರುವ ತಾಮ್ರಶಾಸನದಿಂದ ತಿಳಿದು ಬರುತ್ತದೆ. ಪುನ್ನಾಟ ರಾಜ್ಯದ ರಾಜಧಾನಿ ಕಿತ್ತೂರು ಇಂದಿನ ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಕಂಡುಬರುತ್ತದೆ. ಯಳಂ–167ರ ಕ್ರಿ.ಶ.550ನೆಯ ಮಾಂಬಳ್ಳಿಯ ಶಾಸನವೇ ಪುನ್ನಾಟ ಅರಸರ ಅತ್ಯಂತ ಪ್ರಾಚೀನವಾದ ಶಾಸನವಾಗಿದೆ. ಅದರಲ್ಲಿ ರಾಷ್ಟ್ರವರ್ಮನು 'ಪುಂರಾಷ್ಟ್ರ' ಎಂದರೆ ಪುನ್ನಾಟ ರಾಜ್ಯದ ಅರಸನಾಗಿದ್ದನೆಂದೂ ಆತನು ತಾಮ್ರಕಶ್ಯಪ ಕುಲಕ್ಕೆ ಸೇರಿದವನೆಂದು ಹೇಳಿದೆ. ಈ ಶಾಸನದಲ್ಲಿ ತಿಳಿದುಬರುವ ವಂಶಾವಳಿಯನ್ನು ಹೀಗೆ ಉಲ್ಲೇಖಿಸುತ್ತದೆ.

ವಿಷ್ಣುದಾಸ

|

ರಾಷ್ಟ್ರವರ್ಮ (ಹಾರೀತ ವಂಶದ ಪ್ರಭಾವತಿ)

|

ಪೃಥ್ವೀಪತಿ

ಮಾಂಬಳ್ಳಿ ಶಾಸನದಲ್ಲಿ ಪುಂರಾಷ್ಟ್ರದ ವಿವರಣೆ ಇದೆ. ಹಲವಾರು ದೇಶಗಳ ವಿದ್ವಜ್ಜನರು ಆ ದೇಶದ ಯಶಸ್ಸನ್ನು ಸ್ತುತಿಸಿದ್ದಾರೆಂದೂ, ಈ ದೇಶವು ಎಮ್ಮೆ, ಆಕಳು, ಕುದುರೆಗಳಿಂದಲೂ, ಉಣ್ಣೆಯ ಬಟ್ಟೆ, ರತ್ನ, ಬಂಗಾರ, ಬೆಳ್ಳಿ, ಮುತ್ತು, ಹವಳಗಳ ಸಂಪತ್ತುಳ್ಳ ಜನರಿಂದಲೂ ಬಹು ಶೋಭಾಯಮಾನವಾಗಿತ್ತು. ಭತ್ತ,

ಗೋದಿ, ಜವೆಗೋದಿ, ರಾಡಾಕ (ಇದನ್ನು ಇಂದಿಗೂ ಸಹ ಈ ಭಾಗದ ಜನರು ಅತಿ ಹೆಚ್ಚು ಬೆಳೆಯುವ ರಾಗಿಯಾಗಿರ ಬಹುದೆಂದು ಊಹಿಸಬಹುದು.) ಪ್ರತಿ ವರ್ಷವೂ ಹುಲುಸಾಗಿ ಬೆಳಿಯುತ್ತಿದ್ದವು. ಜನರು ತಮ್ಮ ನಿತ್ಯ ಜೀವನದಲ್ಲಿ ವಿವಾಹ, ಉತ್ಸವ, ನರ್ತನಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆನಂದಗೊಳ್ಳುತ್ತಿದ್ದರು. ಬಾಳೆ, ಅಡಕೆ, ತೆಂಗು, ಕಬ್ಬು, ಹಲಸು, ಸಂಪಿಗೆ, ವೀಳ್ಯದೆಲೆ, ಬಕುಲ, ಅಶೋಕ, ಪುನ್ನಾಗ, ಮೊದಲಾದ ಗಿಡ ಬಳ್ಳಿಗಳುಳ್ಳ ತೋಟಗಳಿಂದ ಕಂಗೊಳಿಸುವ ತಟಗಳುಳ್ಳ ಕಾವೇರಿ, ಕಪಿನಿ, ನದಿಗಳಿಂದ ಆಲಂಕೃತವಾಗಿತ್ತು ಮತ್ತು ವಿದೇಹ ದೇಶದಂತೆ ಸೊಬಗಿನ ಬೀಡಾಗಿ ಶೋಭಿಸುತ್ತಿತ್ತು ಎಂದು ತಿಳಿಸಿದೆ. ಶಾಸನೋಕ್ತ ವಿವರಗಳಿಂದ ಪುನ್ನಾಟವು ಕೃಷಿ, ಪಶುಪಾಲನೆ, ಗಣಿಗಾರಿಕೆ, ಮತ್ತು ವಾಣಿಜ್ಯಧಾರಿತ ಆರ್ಥಿಕತೆಯನ್ನು ಹೊಂದಿದ್ದ ಸಂಪತ್ಭರಿತ ದೇಶವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.[14]

ಪುನ್ನಾಟ ಅರಸರ ನಂತರ ಈ ಪ್ರದೇಶವನ್ನು ಆಳ್ವಿಕೆ ಮಾಡಿದ ಗಂಗರು, ಚೋಳರ ಶಾಸನಗಳು ಈ ಗ್ರಾಮದಲ್ಲಿ ಕಂಡುಬಂದಿಲ್ಲ. ಈ ಗ್ರಾಮದ ಹತ್ತರದಲ್ಲೇ ಇರುವ ಮುಡಿಗುಂಡ ಗ್ರಾಮವನ್ನು ಮುಡಿಗುಂಡ ಚೋಳ ಮಂಡಲವನ್ನು ಚೋಳರು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರು. ಅದ್ದರಿಂದ ಮಾಂಬಳ್ಳಿಯು ಚೋಳರ ನೇರ ಆಳ್ವಿಕೆಗೆ ಒಳಪಟ್ಟಿತ್ತು. ಆದ ಕಾರಣ ಚೋಳರ ಶಾಸನಗಳು ಈ ಗ್ರಾಮದಲ್ಲಿ ಕಂಡು ಬಂದಿಲ್ಲ. ಚೋಳರ ನಂತರ ಕ್ರಿ.ಶ.1117ರಲ್ಲಿ ನಡೆದ ತಲಕಾಡು ಕದನದಲ್ಲಿ ಹೊಯ್ಸಳ ಅರಸ ವಿಷ್ಣುವರ್ಧನನು ಚೋಳರನ್ನು ಸೋಲಿಸಿ ಈ ಪ್ರದೇಶವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡನು. ಹೊಯ್ಸಳರ ಮೂರು ಶಾಸನಗಳು ಮಾಂಬಳ್ಳಿಯಲ್ಲಿ ದೊರೆತಿವೆ. ಯಳಂ–157ನೆಯ ಕ್ರಿ.ಶ.1246ರ ಶಾಸನವು ಹೊಯ್ಸಳ ಅರಸ ಸೋಮೇಶ್ವರನ ಕಾಲಕ್ಕೆ ಸೇರಿದೆ. ಶ್ರೀ ವೈದ್ಯನಾಥೇಶ್ವರ ದೇವಾಲಯದ ಪೂರ್ವಕ್ಕಿರುವ ಮಠದಲ್ಲಿ ದೊರಕಿದ್ದು, ಈ ಶಾಸನವು ತಮಿಳು ಭಾಷೆಯಲ್ಲಿದೆ. ಸೋಮೇಶ್ವರನು ಮನೆಗಳಿಗೆ ವಿಧಿಸುತ್ತಿದ್ದ ತೆರಿಗೆಯನ್ನು ಮುಕ್ತಿಗೊಳಿಸಿದ ಮಾಹಿತಿಯನ್ನು ಈ ಶಾಸನವು ಉಲ್ಲೇಖಿಸುತ್ತದೆ.[15]

ಉಪ್ಪರಿಗೆ ಬಸವೇಶ್ವರ ದೇವಾಲಯದ ಮುಂದಿರುವ ಕಲ್ಲಿನಲ್ಲಿ ಕೆತ್ತಿರುವ ಯಳಂ–158ರ ಕ್ರಿ.ಶ.1270ನೆಯ ಹೊಯ್ಸಳ ವೀರನರಸಿಂಗದೇವನ ಕಾಲದ ಈ ಶಾಸನವು ಹಲವಾರು ವಿಷಯಗಳನ್ನು ಉಲ್ಲೇಖಿಸುತ್ತದೆ. ಮಾಂಪಳ್ಳಿಯ ನಾನಾದೇಶಿಗಳಿಂದ ಭೂಮಿಯ ಮೌಲ್ಯವು 500 ರೂ. ಒಳಗೆ ತೆಗೆದುಕೊಂಡರೆ ಅದಕ್ಕೆ ತೆರಿಗೆ ವಿನಾಯಿತಿ ಇರುತ್ತದೆ ಎಂದು ಉಲ್ಲೇಖಿಸುತ್ತದೆ, ಹೀಗೆ ಕೊಂಡು ಕೊಂಡ ಭೂಮಿಯನ್ನು ಪಿಳ್ಳೆಯರ್ ದೇವಸ್ಥಾನಕ್ಕೆ ದಾನವಾಗಿ ನೀಡಲಾಗಿದೆ. ಪ್ರಸ್ತುತ ಈ ದೇವಸ್ಥಾನವು ಇಂದಿನ ಮದ್ದೂರು ಗ್ರಾಮದಲ್ಲಿದೆ. ಅಲ್ಲದೇ ಮುಡಿಗೊಂಡ ಚೋಳರ ಮಹಾದಂಡನಾಯಕ ವಾಸುದೇವ ಪೆರುಮಾಳ್, ಅಲ್ವನ್‌ತಿರುವಂದೈ, ವೀರನ್‌ಚೊಕ್ಕನಾಯನ್ ಎಂಬುವವರು ಇದು ಮುಡಿಗೊಂಡದ ಪಶ್ಚಿಮಕ್ಕೆ ಮಾಂಪಳ್ಳಿ ಎಂಬ ಗ್ರಾಮದಲ್ಲಿ ತೆರಿಗೆ ವಿನಾಯಿತಿ ನೀಡಿರುವುದರ ಬಗ್ಗೆ ಉಲ್ಲೇಖಿಸುತ್ತದೆ.[16] ಕ್ರಿ.ಶ. 1301ರ ಯಳಂ–147ನೇ ಶಾಸನವು ವೈದ್ಯೇಶ್ವರ ದೇವಾಲಯದ ದಕ್ಷಿಣ ದಿಕ್ಕಿನ ಅಧಿಷ್ಠಾನದಲ್ಲಿದ್ದು, ಮೂರನೇ ಬಲ್ಲಾಳನ ಕಾಲಕ್ಕೆ ಸೇರಿದೆ. ಮಾಂಬಳ್ಳಿಯ ಶ್ರೀ ವೈದ್ಯನಾಥೇಶ್ವರ ದೇವಾಲಯದ ಶ್ರೀಕಾರ್ಯಕ್ಕಾಗಿ ನಾನಾದೇಶಿಗಳು ನೀಡಿದ ದಾನ ದತ್ತಿಯ ಬಗ್ಗೆ ತಿಳಿದುಬರುತ್ತದೆ.[17]

ವಿಜಯನಗರದ ಅರಸರು ಹೊಯ್ಸಳರ ನಂತರ ದಕ್ಷಿಣ ಭಾರತದಲ್ಲಿ ಆಧಿಕಾರಕ್ಕೆ ಬಂದರು. ಯಳಂ–155ನೆಯ ಶಾಸನವು ಶ್ರೀ ವೈದ್ಯನಾಥೇಶ್ವರ ದೇವಾಲಯದ ಹಿಂದೆ ಬಿದ್ದಿರುವ ಕಲ್ಲಿನಲ್ಲಿದ್ದು, ಕ್ರಿ.ಶ.1359ರಲ್ಲಿ ವಿಜಯನಗರದ ಅರಸರಾದ ಬುಕ್ಕಣ್ಣ ಒಡೆಯರ ಮಗ ಕಂಪಣ್ಣ ಒಡೆಯರು ರಾಜ್ಯವನ್ನು ಆಳುತ್ತಿದ್ದ ಕಾಲಕ್ಕೆ ಸೇರಿದ್ದುದಾಗಿದೆ. ಇದರಲ್ಲಿ ಬಹುಮುಖ್ಯವಾಗಿ ನಾಲ್ಕು ಅಂಶಗಳ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ. ಮೊದಲ ಅಂಶವೆಂದರೆ ಅಪ್ಪಣ್ಣ ನಾಯಕ ಎಂಬುವವನು ತೆಂಗಿನ ತೋಟ ಮತ್ತು ಹದಿನೈದು ಮನೆಗಳನ್ನು 'ಹರಿಹರನಾಥ ಪಟ್ಟಣ' ಎಂದು ವರ್ಣಿಸಲ್ಪಟ್ಟ ಮಾಂಬಳ್ಳಿಯ ಶ್ರೀ ವೈದ್ಯೇಶ್ವರ ದೇವರ ಅಮೃತಪಡಿಯ ದೇವದಾನಕ್ಕೆ ನೀಡಿದನು. ಎರಡನೇ ಅಂಶವೆಂದರೆ ಸಾಕಮ್ಮದೇವಿ ಮತ್ತು ದೇವಣ್ಣಶೆಟ್ಟಿಯ ಮಗ ಮರಿಶೆಟ್ಟಿಯ ಹತ್ತಿರ ಮುಂದಿನ ತೆಂಗಿನತೋಟವನ್ನು, ಕಾಳಶೆಟ್ಟಿಯ ಮಗ ಅಂಡಾರಶೆಟ್ಟಿಯು ತೆಗೆದುಕೊಂಡು ಈ ದೇವಾಲಯದ ಕೈಂಕರ್ಯಕ್ಕೆ ನೀಡಿದನು. ಮೂರನೇ ಅಂಶವೆಂದರೆ ಶೆಟ್ಟಿಯನ್ನನು ಈ ದೇವಾಲಯಕ್ಕೆ ತೆಂಗಿನಮರ ಮತ್ತು ಹಲಸಿನ ಮರದ ತೋಟವನ್ನು ನೀಡಿದನು. ನಾಲ್ಕನೇ ಅಂಶವೆಂದರೆ ಅಂಡಾರಶೆಟ್ಟಿಯು ಮತ್ತೆರಡು ತೋಟವನ್ನು ತೆಗೆದುಕೊಂಡು ವೈದ್ಯನಾಥೇಶ್ವರ ದೇವಾಲಯ ಕೈಂಕರ್ಯಕ್ಕೆ ದಾನವಾಗಿ ನೀಡಿರುವುದನ್ನು ತಿಳಿಸುತ್ತದೆ.[18]

ಯಳಂ–164 ನೆಯ ಈ ಶಾಸನವು ದೇವಾಲಯದ ಹಿತ್ತಲಿನಲ್ಲಿರುವ ಇನ್ನೊಂದು ಕಲ್ಲಿನಲ್ಲಿ ದೊರೆತಿದ್ದು, 14ನೆಯ ಶತಮಾನದ ಶಾಸನವು ಮತ್ತು ವಿಜಯನಗರದ ಅರಸನ ಕಾಲಕ್ಕೆ ಸೇರಿದೆ. ಮಾಂಬಳ್ಳಿಯ ನಾನಾದೇಶಿಗಳು ಹರಿಹರರಾಯ ಪಟ್ಟಣದ ಭೂಕಂದಾಯ ಮತ್ತು ಮನೆ ತೆರಿಗೆಯ ಬಗ್ಗೆ ಉಲ್ಲೇಖಿಸುತ್ತದೆ.[19] ಕ್ರಿ.ಶ.1429ರ ಯಳಂ–16ನೆಯ ಶಾಸನವು ಚೌಡೇಶ್ವರಿ ದೇವಸ್ಥಾನದಲ್ಲಿ ಕಂಡುಬರುತ್ತದೆ. ಇದು ವಿಜಯನಗರದ ಅರಸ ಎರಡನೇ ದೇವರಾಯನ ಕಾಲಕ್ಕೆ ಸೇರಿದ್ದಾಗಿದೆ. ಮಾಂಬಳ್ಳಿಯ ನಾನಾದೇಶಿಗಳಿಂದ ತೆರಿಗೆಯಿಂದ ಬರುವ ಆದಾಯವನ್ನು ವೈದ್ಯನಾಥೇಶ್ವರ ದೇವಸ್ಥಾನಕ್ಕೆ ಸೇರಿದುದೆಂದು ವಿಜಯನಗರದ ಅರಸ ಪ್ರತಾಪದೇವರಾಯ ರಾಜಾಜ್ಞೆಯ ಬಗ್ಗೆ ಈ ಶಾಸನದಲ್ಲಿ ಉಲ್ಲೆಖಿಸುತ್ತದೆ.[20] ಯಳಂ–159ರ ಶಾಸನವು ಉಪ್ಪರಿಗೆ ಬಸವೇಶ್ವರ ದೇವಾಲಯದಲ್ಲಿರುವ ಇನ್ನೊಂದು ಕಲ್ಲಿನಲ್ಲಿ ದೊರೆತ್ತಿದ್ದು, ಈ ಶಾಸನವು 13ನೆಯ ಶತಮಾನಕ್ಕೆ ಸೇರಿದ್ದು, ಮೈಸೂರು ಒಡೆಯರ ರಾಮರಾಜನಾಯಕನ ಕಾಲಕ್ಕೆ ಸೇರಿದ್ದಾಗಿದೆ. ತಿರುವಿದ್ವತಮ್ ಎಂಬ ಭೂಮಿಗೆ ಕೇಶಿಯ ಪೆರುಮಾಳ್ ಎಂಬುವವನು ಮಾಂಬಳ್ಳಿಯ ನಾನಾದೇಶಿಗಳು ಪ್ರತಿನಾಮದೇಯವಾದ 'ವೀರವಲ್ಲಾಳ ಪಟ್ಟಣಂ'ನ ಮಹಾಜನಗಳಿಗೆ ಭೂಕಂದಾಯದಿಂದ ವಿಮುಕ್ತಿಗೊಳಿಸಿದರ ಬಗ್ಗೆ ಉಲ್ಲೇಖಿಸಲಾಗಿದೆ.[21]

ಯಳಂ–146ನೆಯ ವೈದ್ಯೇಶ್ವರ ದೇವಾಲಯದ ಉತ್ತರದ ಅದಿಷ್ಠಾನದಲ್ಲಿ ದೊರೆತಿದ್ದು, 14ನೆಯ ಶತಮಾನದ ಶಾಸನವು ವೇಲೂರುಡೈಯಾನ್ ಇರುಮುಡಿ ಮಣ್ಣಲಸಾಮಿ ವಾಸುದೇವರಣ್ಣಾ ಮಲೈಯಾರ್ ಎಂಬ ದಾನಿಯು ವೈದ್ಯೇಶ್ವರ ದೇವಾಲಯಕ್ಕೆ 200 ಕುಳಿ ಭೂಮಿಯನ್ನು ದಾನವಾಗಿ ನೀಡಿದರೆಂದು ಶಾಸನವು ತಿಳಿಸುತ್ತದೆ.[22] ಯಳಂ–161ರ ಕ್ರಿ.ಶ. 1505–06ರಲ್ಲಿ ಮಾಂಬಳ್ಳಿಯ ಬಾಲಸರಸ್ವತಿಯ ಹತ್ತಿರ ಗೋಪಣ್ಣ ಶೆಟ್ಟಿಯು ಮನೆಯನ್ನು ಕ್ರಯಕ್ಕೆ ಕೊಂಡುಕೊಂಡು ಸುರಿಗೆರಾಹುತರಿಗೆ ಕೊಟ್ಟಿದ್ದು ಆ ಸುರಿಗೆರಾಹುತರು ಅದೇ ಮನೆಯನ್ನು ತಮ್ಮ ಮಾವನಾದ ನರ್ತನಿ ಒಡೆಯರಿಗೆ ನೀಡಿದ ಮಾಹಿತಿಯನ್ನು ಈ ಶಾಸನವು ಉಲ್ಲೇಖೀಸುತ್ತದೆ.[23] ಯಳಂ–

162ನೆಯ ಶಾಸನವು ಮನೆಯೊಂದರ ಹಿತ್ತಲಿನಲ್ಲಿರುವ ಕಲ್ಲಿನಲ್ಲಿ ದೊರೆತಿದ್ದು, ಕ್ರಿ.ಶ. 1560 ಜೂನ್ 10 ಸೋಮವಾರದಂದು ಈ ಶಾಸನವು ಮಾಂಬಳ್ಳಿಯ ಲಿಂಗಪ್ಪನಮಗ ವೀರಪ್ಪ ಶೆಟ್ಟಿಯ ಹದಿನಾರು ಸಾಲುಗಳ ಕಾಗದವನ್ನು ಮಂಡ್ಯದ ಗೋಪನ್ ಎಂಬುವವರಿಗೆ ಬರೆದಿದ್ದು ತನ್ನ ಮನೆಯ ನಿವೇಶನವನ್ನು ಆನಂದ ಒಡೆಯರಿಗೆ 10 ಗದ್ಯಾಣಕ್ಕೆ ಮಾರಾಟ ಮಾಡಿರುವುದರ ಬಗ್ಗೆ ಉಲ್ಲೇಖಿಸುತ್ತದೆ.[24]

ವೈದ್ಯೇಶ್ವರ ದೇವಾಸ್ಥಾನದ ಉತ್ತರ ದಿಕ್ಕಿನಲ್ಲಿರುವ ಪ್ರಾಕಾರದ ಕಲ್ಲಿನ ಮೇಲೆ ದೊರೆತಿರುವ ಯಳಂ 156ರ ಶಾಸನವು ಕ್ರಿ.ಶ. ಸುಮಾರು 16 ಮತ್ತು 17ನೇ ಶತಮಾನಕ್ಕೆ ಸೇರಿದ್ದಾಗಿದೆ. ಮಂಡ್ಯಣ ಶೆಟ್ಟಿ ಮತ್ತು ಗೋಪಣ್ಣ ಶೆಟ್ಟರು, ಚೆಟ್ಟಿಯರ ಮಕ್ಕಳಿಗೆ ನೀಡಿದ ಕೊಡುಗೆಯ ಬಗ್ಗೆ ಉಲ್ಲೇಖಿಸುತ್ತದೆ. ಹಾಗೆ ಯಾರಾದರು ಈ ಶಾಸನವನ್ನು ಹಾಳುಮಾಡಿದರೆ ಗಂಗೆಯ ದಡದಲ್ಲಿ ತಮ್ಮ ತಂದೆ ತಾಯಿಯ ಕೊಂದ ಪಾಪಕ್ಕೆ ಹೋಗುತ್ತಾರೆ ಎಂಬ ಶಾಪವಿರುವುದನ್ನು ಕಾಣಬಹುದು.[25] ಯಳಂ–148ರ ಕ್ರಿ.ಶ.19ನೆ ಶತಮಾನದ ಶಾಸನದಲ್ಲಿ ಕಲಿಯುಗದ ಪ್ರಸ್ಥಾಪವಿದೆ.[26] ಯಳಂ–149ರ ಶಾಸನವು ವೈದ್ಯೇಶ್ವರ ದೇವಾಲಯದ ಪಶ್ಚಿಮ ಬಾಗಿಲ ಎಡಗಡೆ ದೊರಕಿದ್ದು ತಮಿಳು ಭಾಷೆಯಲ್ಲಿದ್ದು, ಕಟ್ಟಾಣಿರವಿ ಎಂಬ ಕುರಿಕಾಯುವ ಕುರುಬನು ವೆಲ್ಲಪನಾಡಿನಲ್ಲಿ ಪಿಲ್ಲೆರು ಸಾತ್ತನೂರಿನಲ್ಲಿ ಉತ್ಸವನ ಮಾಡಿರುವುದನ್ನು ಉಲ್ಲೇಖಿಸಲಾಗಿದೆ.[27]

ವೈದ್ಯೇಶ್ವರ ದೇವಾಲಯದ ರಂಗ ಮಂಟಪದ ಕಂಬದ ಮೇಲಿರುವ ಯಳಂ–150ರ ಶಾಸನವು ತಮಿಳು ಭಾಷೆಯಲ್ಲಿದೆ. ಕೊಟ್ಟುರಿನ ಉದಯನ್ ಎಂಬುವ ವ್ಯಕ್ತಿ ಎರಡು ಕಂಬಗಳನ್ನು ಕಟ್ಟಿಸಿರುವುದರ ಬಗ್ಗೆ ಉಲ್ಲೇಖಿಸಲಾಗಿದೆ.[28] ಯಳಂ–151 ಶಾಸನವು ವೈದ್ಯೇಶ್ವರ ದೇವಾಲಯದ ಎರಡನೆಯ ಕಂಬದ ಮೇಲಿರುವ ವೆಲ್ಲಪನಾಡಿನ ದೇವಿಯಾರ್ ಸೋನಾರಣತಿಲ್ಲನಚಕ್ಕನಕ್ಕಣ್ಣ ಎಂಬುವವನು ಕಟ್ಟಿಸಿದ್ದಾನೆಂದು ಉಲ್ಲೇಖಿಸುತ್ತದೆ.[29] ಯಳಂ–152ರ ಈ ಶಾಸನವು ವೈದ್ಯೇಶ್ವರ ದೇವಾಲಯದ ಮೂರನೇ ಕಂಬದ ಮೇಲೆ ದೊರೆತಿದ್ದು, ಪೆರಿಯ ನಂದಿಯ ಮಗ ಉದಯನ್ ಎಂಬುವವನು ಈ ಕಂಬವನ್ನು ಕಟ್ಟಿಸಿದ್ದಾನೆಂದು ಮಾಹಿತಿಯನ್ನು ನೀಡುತ್ತದೆ.[30] ಯಳಂ–153ನೆಯ ಶಾಸನವು ವೈದ್ಯೇಶ್ವರ ದೇವಾಲಯದ ನಾಲ್ಕನೆಯ ಕಂಬದ ಮೇಲೆ ದೊರೆತಿದ್ದು, ಯಾರು ಆ ಕಂಬವನ್ನು ಕಟ್ಟಿಸಿದ್ದಾರೆಂದು ತಿಳಿದುಬಂದಿಲ್ಲ.[31] ಯಳಂ–154 ಈ ಶಾಸನವು ವೈದ್ಯೇಶ್ವರ ದೇವಾಲಯದ ಐದನೆಯ ಕಂಬದ ಮೇಲೆ ದೊರೆತಿದ್ದು, ಪೆರುವೆಂಬಳ್ಳಿ ಊರಿನಕುಮಾರನ್ ಮಾದಪ್ಪನ್ ಎಂಬುವವನು ಈ ಕಂಬವನ್ನು ಕಟ್ಟಿಸಿದ್ದಾನೆಂದು ಉಲ್ಲೇಖಿಸಲಾಗಿದೆ.[32] ಮೇಲಿನ ಎಲ್ಲಾ ಶಾಸನಗಳನ್ನು ಗಮನಿಸಿದರೆ ವೈದ್ಯೇಶ್ವರ ದೇವಾಲಯವನ್ನು ಕಟ್ಟಿಸಲು ಎಲ್ಲರೂ ಸಹ ಕೊಡುಗೆಯನ್ನು ನೀಡಿರುವುದು ತಿಳಿದು ಬರುತ್ತದೆ.

ಮನೆಯೊಂದರ ಹಿತ್ತಲಿನಲ್ಲಿರುವ ಕಲ್ಲಿನಲ್ಲಿ ಯಳಂ–163 ಶಾಸನವನ್ನು ಕೆತ್ತಲ್ಪಟ್ಟಿದೆ. ಈ ಶಾಸನವು ಮಾಂಬಳ್ಳಿಯ ನಾನಾದೇಶಿಗಳು ಪ್ರತಿನಾಮದೇಯವಾದ ಮಲ್ಲನಪಟ್ಟಣದ ಜನರಿಗೆ ಸರ್ವಮಾನ್ಯವಾಗಿ ದಾನಮಾಡಿ ಭೂಕಂದಾಯದಿಂದ ಬರುವ ತೆರಿಗೆಗಳಾದ ವಿಟ್ಟ ಮತ್ತು ವಿದ್ರಾಮ ಎಂಬ ತೆರಿಗೆಯನ್ನು ವಿಮುಕ್ತಗೊಳಿಸಿದ್ದರ ಬಗ್ಗೆ ಉಲೇಖಿಸುತ್ತದೆ.[33] ಯಳಂ–165ರ ಶಾಸನದಲ್ಲಿ ನಾಗರ ಹತ್ರ ಎಂಬ ಇಬ್ಬರು ವ್ಯಕ್ತಿಗಳು ದೇವಸ್ಥಾನದ ಭೂಮಿಯನ್ನು ಎರಡು ಪಣಕ್ಕೆ ನಾನಾದೇಶಿಯರ ಹತ್ತಿರ

ತೆಗೆದುಕೊಂಡಿದ್ದರ ಬಗ್ಗೆ ಉಲ್ಲೇಖಿಸಲಾಗಿದೆ.[34] ಯಳಂ–166ರ ಸುಮಾರು 13–14 ನೆ ಶತಮಾನದ ಶಾಸನವು ಅರುಲಾಲನಾಥ ಎಂಬ ವ್ಯಾಪಾರಿಯು ಇದೇ ಗ್ರಾಮದ ಮಹಾಜನಗಳ ಹತ್ತಿರ ಭೂಮಿಯನ್ನು ಕೊಂಡುಕೊಂಡಿದುದ್ದರ ಬಗ್ಗೆ ಈ ಶಾಸನದಲ್ಲಿ ಉಲ್ಲೇಖಿತಗೊಂಡಿದೆ.[35]

ಉಪಸಂಹಾರ

ಒಟ್ಟಿನಲ್ಲಿ ಮಾಂಬಳ್ಳಿ ಶಾಸನಗಳಲ್ಲಿ ಉಲ್ಲೇಖವಾಗಿರುವ ವಿಚಾರ ಸಂಗತಿಗಳನ್ನು ಅಧ್ಯಯನ ಮಾಡಿದಾಗ ಈ ಗ್ರಾಮದ ಚಾರಿತ್ರಿಕ ಹಿನ್ನೆಲೆ ಅನಾವರಣಗಳ್ಳುತ್ತದೆ. ಪುನ್ನಾಟ ರಾಜ್ಯದ ಅರಸರು, ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಮುಂತಾದವರ ಆಳ್ವಿಕೆಗೆ ಒಳಪಟ್ಟ ಮಾಂಬಳ್ಳಿಯು ಕಾಲ ಕಾಲಕ್ಕೆ ಹಲವು ಹೆಸರುಗಳಿಂದ ಬದಲಾಗುತ್ತಿದ್ದನ್ನು ಹಾಗೂ ಮನೆ ಮತ್ತು ಭೂಮಿಯ ಮೇಲೆ ತೆರಿಗೆ ವಿಧಿಸುತಿದ್ದಿದ್ದನ್ನು ಮತ್ತು ವಿನಾಯಿತಿ ನೀಡಿರುವುದನ್ನು ಗಮನಿಸಿದರೆ ಮಾಂಬಳ್ಳಿಯು ಸಂಪತ್ಭರಿತವಾದ ಗ್ರಾಮವಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಈ ಗ್ರಾಮವು ಪ್ರಾಚೀನ ಕಾಲದಲ್ಲಿ ಅಂದರೆ ಕ್ರಿ.ಶ.550ಕ್ಕೂ ಮುಂಚೆ ಇತ್ತೆಂದು ಹಾಗೂ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತೆಂದು ಕಂಡುಬರುತ್ತದೆ. ವೈದ್ಯೇಶ್ವರ ದೇವಾಲಯಗಳಿಗೆ ಅರಸರುಗಳು ನೀಡುತ್ತಿದ್ದ ಉಂಬಳಿ, ಭೂದಾನ, ದೇವಾದಾಯ ಇತ್ಯಾದಿಗಳನ್ನು ಗಮನಿಸಿದರೆ ಮಾಂಬಳ್ಳಿ ಗ್ರಾಮವು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತೆಂಬುದನ್ನು ಶಾಸನಗಳು ಸ್ಪಷ್ಟಪಡಿಸುತ್ತದೆ. ಮಾಂಬಳ್ಳಿಯು ಪ್ರಾಚೀನ ಕಾಲದಲ್ಲಿ ನಾನಾದೇಶಿಗಳು ಸಹ ವಾಸ ಮಾಡಲು ಯೋಗ್ಯವಾದ ಪಟ್ಟಣವಾಗಿತ್ತೆಂದು, ವ್ಯಾಪಾರ–ವಾಣಿಜ್ಯ ಕೇಂದ್ರವಾಗಿ, ಪ್ರವಾಸಿ ಯಾತ್ರಾ ತಾಣವಾಗಿ, ಆಡಳಿತ ಘಟಕವಾಗಿ ಹಾಗೂ ಧಾರ್ಮಿಕ ಕೇಂದ್ರವಾಗಿಯೂ ಸಹ ಪ್ರಖ್ಯಾತಿಯನ್ನು ಹೊಂದಿತ್ತು.

ಆಧಾರಗಳು

1. ಉಮೇಂದ್ರ ಕುಮಾರ್ ಎಚ್.ಎಂ.(2014) ಚಾಮರಾಜನಗರ ತಾಲ್ಲೂಕಿನ ಕೃಷಿ ಜಾನಪದ. (ಸಂಶೋದನಾ ಮಹಾ ಪ್ರಬಂಧ, ಮೈಸೂರು ವಿಶ್ವ ವಿದ್ಯಾನಿಲಯ). http://hdl.handle.net/10603/110478
2. ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು(2015). ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್, ಪು.ಪು 1068–1069
3. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 158
4. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 159
5. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 159
6. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 160
7. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 161
8. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 162
9. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 163
10. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4,, ಯಳಂ 164
11. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 164

12. ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು (2015). ಚಾಮರಾಜನಗರ ಜಿಲ್ಲಾ ಗ್ಯಾಸೆಟಿಯರ್, ಪು.ಪು 1068–1069
13. ಉಮೇಂದ್ರ ಕುಮಾರ್ ಎಚ್. ಎಂ. (2014) ಚಾಮರಾಜನಗರ ತಾಲ್ಲೂಕಿನ ಕೃಷಿ ಜಾನಪದ. (ಸಂಶೋದನಾ ಮಹಾ ಪ್ರಬಂಧ, ಮೈಸೂರು ವಿಶ್ವ ವಿದ್ಯಾನಿಲಯ). http://hdl.handle.net/10603/110478
14. ಗೋಪಾಲ, ಬಾ. ರಾ (ಸಂ) (1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 167 + ಮುರುಗೇಶಿ, ಟಿ. & ಉಷಾದೇವಿ ಎ.(2013) ಪುನ್ನಾಟದ ಪುರಾತನ ಬಂಡಿ. ಇತಿಹಾಸ ದರ್ಶನ. 28. 174–180
15. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 157
16. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 158
17. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 147
18. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4,, ಯಳಂ 155
19. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 164
20. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 160
21. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 159
22. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 146
23. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 161
24. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 162
25. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 156
26. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 148
27. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 149
28. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 150
29. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 151
30. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 152
31. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 153
32. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 154
33. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 163
34. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 165
35. ಗೋಪಾಲ, ಬಾ.ರಾ.(ಸಂ.)(1975) ಎಪಿಗ್ರಾಫಿಯ ಕರ್ನಾಟಕ, ಸಂಪುಟ 4, ಯಳಂ 166

❖❖❖

ಎಂ. ಗೋಪಾಲಕೃಷ್ಣ ಅಡಿಗರ ಕಾವ್ಯದಲ್ಲಿ ಸಮಾಜ ಚಿಂತನೆ

ಡಾ. ಎಚ್.ಕೆ. ವೆಂಕಟೇಶ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು ತೆಂಕನಿಡಿಯೂರು ಉಡುಪಿ–576106

'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಮೊಗೇರಿ ಗೋಪಾಲಕೃಷ್ಣ ಅಡಿಗರು. ನವೋದಯ ಕಾವ್ಯ ಮಾದರಿಯಲ್ಲಿ 'ಭಾವತರಂಗ', 'ಕಟ್ಟುವೆವು ನಾವು' ಸಂಕಲನಗಳು ರಚನೆಗೊಂಡವು. 1950ರ ದಶಕದಲ್ಲಿ ಇಂಗ್ಲೆಂಡ್‌ನ ಮಾಡ್ರನಿಸಂ (ನವ್ಯ) ಸಾಹಿತ್ಯದಿಂದ ಪ್ರೇರಿತರಾಗಿ ನವ್ಯ ಕಾವ್ಯ ಸಂಪ್ರದಾಯವನ್ನು ಕನ್ನಡದಲ್ಲಿ ಹುಟ್ಟುಹಾಕಿದರು. ತಮ್ಮದೇ ಇರವು, ಅಭಿವ್ಯಕ್ತಿ, ತುಡಿತಗಳ ಮೂಲಕ ಕಾವ್ಯದಲ್ಲಿ ತಮ್ಮ ಛಾಪು ಮೂಡಿಸಿದರು. 'ನಡೆದು ಬಂದದಾರಿ', 'ಚಂಡೆ ಮದ್ದಳೆ', 'ಭೂಮಿಗೀತ', 'ವರ್ಧಮಾನ', 'ಬತ್ತಲಾರದ ಗಂಗೆ', 'ಇದನ್ನು ಬಯಸಿರಲಿಲ್ಲ', 'ಮೂಲಕ ಮಹಾಶಯರು', 'ಚಿಂತಾಮಣಿಯಲ್ಲಿ ಕಂಡ ಮುಖ', 'ಸುವರ್ಣ ಪುತ್ಥಳಿ' – ಇವರ ಅತ್ಯಮೂಲ್ಯ ನವ್ಯಕಾವ್ಯ ಸಂಕಲನಗಳು.

"ಕವಿಯ ಅನುಭವದ ಒಂದು ಗೆರೆ, ತಂತ್ರದ ಬೆಳವಣಿಗೆಯ ಒಂದು ಗೆರೆ ಇವೆರಡೂ ಸೇರುವ ಕಡೆ ಉತ್ತಮ ಕಾವ್ಯ ಸೃಷ್ಟಿಯಾಗುತ್ತದೆ. ಈ ಎರಡೂ ಗೆರೆಗಳು ದೂರದೂರವಾಗಿ, ಆದರೂಎಲ್ಲಿಯೋ ಒಂದು ಕಡೆ ಸೇರುವ ಸೂಚನೆ 'ಭಾವತರಂಗ'ದ ಕವನಗಳಲ್ಲಿ ಕಂಡುಬರುತ್ತದೆ."[1] 1931 ರಿಂದ 1946 ರವರೆಗೆ ರಚಿತವಾದ ಕವನಗಳುಳ್ಳ 'ಭಾವತರಂಗ' 1946ರಲ್ಲಿ ಪ್ರಕಟಗೊಂಡಿತು. ಈ ಸಂಕಲನದ 'ಮಂದರದಿ ಮಿಡಿಯುತಿದೆ!' ಕವನ ಮುಖ್ಯವಾಗುತ್ತದೆ.

"ಕೂಳುಕೂಳೆಂದೊರಲಿ ಬಡತನದ ಬೇಗೆಯಲಿ
ಬಾಳುವೆಯು ಕುದಿಯುತಿರೆ ನೊಂದು, ಬೆಂದು, ಮೃತ್ಯು
ವಾಲಯಕಕಾಲದಲಿ ತೆರಳಿ ಕಂಡು"

(ಗೋಪಾಲಕೃಷ್ಣ ಅಡಿಗ – ಸಮಗ್ರಕಾವ್ಯ, ಮಂದರದಿ ಮಿಡಿಯುತಿದೆ, ಪು. 21)

ಭೂದೇವಿ, ಭಾರತ ಮಾತೆಯ ಸ್ಥಿತಿಗೆ ಮರುಗುವ ಕವಿ ಅಲ್ಲಿನ ಜನರ ನೋವನ್ನು ಹೀಗೆ ಕಾವ್ಯರೂಪದಲ್ಲಿರಿಸಿದ್ದಾರೆ.

ಅಡಿಗರ 'ಕಟ್ಟುವೆವು ನಾವು' 1948ರಲ್ಲಿ ಪ್ರಕಟವಾಯಿತು. "ಗೋಪಾಲಕೃಷ್ಣ ಅಡಿಗರು, ಮುಖ್ಯವಾಗಿ 'ಕಟ್ಟುವೆವು ನಾವು' ಸಂಗ್ರಹದಲ್ಲಿ, ಸಾಮಾಜಿಕ ಅನ್ಯಾಯಗಳ ಕಡೆ ಬೆಟ್ಟು ತೋರಿಸುತ್ತ, ಸಮಾಜವಾದದ ಕನಸನ್ನು ಮುಂದಿಟ್ಟರು."[2] ಈ ಸಂಕಲನದ ಹಲವು ಕವನಗಳು ಜನರ ಸಮಸ್ಯೆಯ ಕಡೆಗೆ ನಮ್ಮ ಗಮನ ಸೆಳೆಯುತ್ತವೆ. 'ಕಟ್ಟುವೆವು ನಾವು', 'ನಾವೆಲ್ಲರು ಒಂದೇ ಜಾತಿ', 'ನಮ್ಮ ಹೊಲವಿದು ನಿಜವು', 'ನಮ್ಮ ಮನೋರಥ' ಮತ್ತು'ನಾವು ನರರು' ಈ ಶೀರ್ಷಿಕೆಗಳನ್ನು ನೋಡಿದಾಗ ಅಡಿಗರು ತಮ್ಮ ಭಾವದ ಹಾಸಿಗೆ ಜನರಜೀವನದ ಹೊಕ್ಕು ಸೇರಲು ಬಿಟ್ಟಿದ್ದಾರೆ ಎನಿಸುತ್ತದೆ."[3]

'ಕಟ್ಟುವೆವು ನಾವು' ಹೊಸ ನಾಡೊಂದನುರಸದ ಬೀಡೊಂದನು' ಎಂಬ

ಉತ್ಸಾಹದ ಬುಗ್ಗೆಗಳು ಯುವಕರು. ಸಾಮಾಜಿಕ ಅಸಮತೆ ಅಳಿಸಿ ಸಮ ಸುಖ ದುಃಖದ ಸಾಮರಸ್ಯದ ನಾಡನ್ನು ಕಟ್ಟುವ ಹೆಬ್ಬಯಕೆ ಇವರದು.

"ಇಂದು ಬಾಳಿದು ಕ್ರೂರ ಕಾಳಗವು; ಹೊಟ್ಟೆಯೇ
ಕೇಂದ್ರವಾಗಿದೆ ನರನಜೀವಿತಕೆ;
ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ!" (ಗೋ.ಅ.ಸ.ಕಾ., ಕಟ್ಟುವೆವುನಾವು. ಪು. 67–68)

'ದಾರಿದ್ರ್ಯ ಭೂತವನಭೂತವೆನಿಸಲುಬಹುದು'– ದುಃಸ್ಥಿತಿಯ ನಡುವೆಯೂ ಚಿಗುರುವ ಆಶಾವಾದಿ ನಿಲುವು ಕವಿಯ ಕಾವ್ಯದಲ್ಲಿ ತುಂಬಿದೆ.

"ಭಾವತೀವ್ರತೆ ಅಡಿಗರ ಕವಿಜೀವನದ ಒಂದು ವಿಶೇಷ ಧರ್ಮವಾಗಿರುವುದರಿಂದ ಅದು ಅವರ ಕವಿತೆಗಳಿಗೆ ಬಣ್ಣಕೊಟ್ಟಿದೆ."[4] ಇದು ಅಡಿಗರ ಕಾವ್ಯದ ಒಂದು ಬಗೆಯಾದರೆ, ಸಮಾಜದ ವಸ್ತುಸ್ಥಿತಿಯನ್ನು ಕಟ್ಟಿಕೊಡುವುದು ಅವರ ಕಾವ್ಯದ ಮತ್ತೊಂದು ದೃಷ್ಟಿ. 'ನಮ್ಮ ಮನೋರಥ'ದಲ್ಲಿ ಈ ಎರಡನೆಯ ಬಗೆಯ ನಿಲುವಿಗೆ ಸಮರ್ಥನೆಯಿದೆ.

"ಹಸಿವೆ ಬೆಂಕಿಯಲಿ ನರತೆ ಸುಟ್ಟು ಬರಿ
ಬೂದಿಯಾಗುವಂಥ
ನೂರುಜನರದಣಿವಿಂದಲೊಬ್ಬತಣಿ
ವಂಥ ಈ ದುರಂತ" (ಗೋ.ಅ.ಸ.ಕಾ., ನಮ್ಮ ಮನೋರಥ, ಪು.77)
"ಕೊನೆಗಾಣಲಿಲ್ಲ; ಯುಗಯುಗ ಕಳೆದರೂ
ಅನ್ನದೊಂದು ಭಯವು" (ಅದೇ)

ಅನ್ನದ ಹಸಿವು, ಬಡತನದ ಕಾಳರಾತ್ರಿ ಬಡವರನ್ನು ತಿಂದರೂ ಸಿರಿವಂತರ ಶೋಷಣೆ ನಿರಂತರ–ವಾಗಿರುವುದು ಕವಿಯ ಕೆಂಗಣ್ಣಿಗೆ ಗುರಿಯಾಗಿದೆ.

ಸಮಾಜದ ಬಡವರು–ಸಿರಿವಂತರ ನಡುವಣ ಅಂತರವನ್ನು ಹೇಳುವ ಕವನ 'ನೊಂದನುಡಿ'.

"ಒಂದು ಕಡೆ ಬಡತನದ ಘೋರಾಗ್ನಿ ಕುಂಡವಿದೆ
ಮುಂದುವರಿವರ ಸುಟ್ಟು ಸೂರೆಗೊಳಲು;
ಒಂದುಕಡೆಯಲಿ ದಾಸ್ಯದುರ್ಲಲಿತ ಲಾಸ್ಯವಿದೆ
ಮಂದಿಗಳ ಮನುಜತೆಯ ಮರೆಗೊಳಿಸಲು" (ಗೋ.ಅ.ಸ.ಕಾ., ನೊಂದನುಡಿ, ಪು. 89)

ಉಳ್ಳವ–ಇಲ್ಲದವರ ಮನಸ್ಥಿತಿಯೂ ಇಲ್ಲಿ ಬಿಂಬಿತ. ಒಬ್ಬರದು ಯುಗ ಯುಗಗಳಿಂದಲೂ ಶೋಷಣೆ ಮಾಡುವುದಾದರೆ, ಮತ್ತೊಂದು ಆ ದಾಸ್ಯದಲ್ಲಿ ಸಿಕ್ಕಿ ನರಳಿರುವ ಭೀಭತ್ಸತೆ.

ಅಡಿಗರ 'ಇದು ಮೊದಲು' ಬಡತನದ ಸಮಗ್ರ ವಿಷಯ ವಸ್ತು ಹೊಂದಿದ ಕವಿತೆ. ಬಡತನ ಎಂದರೇನು? ಎಂಬುದಕ್ಕೆ ಅರ್ಥಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು ವ್ಯಾಖ್ಯಾನ ಕೊಡುತ್ತಾರೆ. ಅಡಿಗರು ಕಾವ್ಯರೂಪದಲ್ಲಿ ಬಡತನದ ವ್ಯಾಖ್ಯಾನ ನೀಡಿರುವುದಿಲ್ಲಿನ ವೈಶಿಷ್ಟ್ಯ.

"ಹಸಿದಿಹುದು ಹೊಟ್ಟೆ; ಕೊಡು ಅನ್ನವನು. ನನ್ನತನು
ಕೋಡುತಿದೆ ಚಳಿಗೆ; ಕೊಡು ಬಟ್ಟೆಗಳನು.
ಗಾಳಿಬೆಳಕಿನ ಗೋರಿಯಲ್ಲಿ ಹೂತಿರುವೆನಿದೊ;

ಕೊಡು ನನಗೆ ಸುವಿಶಾಲ ವಸತಿಗಳನು.
ಇದು ಮೊದಲು ಆ ಮೇಲೆ ಉಳಿದುದೆಲ್ಲ"
(ಗೋ.ಅ.ಸ.ಕಾ., ಇದು ಮೊದಲು, ಪು. 104)

ಬಡತನದಲ್ಲಿ ಬೇಯುವವರಿಗೆ ಮೊದಲು ಅತ್ಯಗತ್ಯವಾಗಿ ಬೇಕಿರುವುದು ಆಹಾರ, ವಸ್ತ್ರ, ವಸತಿ. ಮೊದಲು ಇದು; ಉಳಿದುದೇನಿದ್ದರೂ ಅನಂತರದ್ದು. ಇಡೀಕವಿತೆ ಬಡತನದ, ಬಡವರ ಪರಿಸ್ಥಿತಿಯ ಪ್ರತಿಬಿಂಬ. "ಶೋಷಿತರ ಪರ ಸಹಾನುಭೂತಿ ಬೆಳೆಸುವ, ಅವರಿಗಾದ ಅನ್ಯಾಯವನ್ನು ಖಂಡಿಸುವ, ಅವರ ಹಕ್ಕುಗಳನ್ನು ಎತ್ತಿ ಹಿಡಿಯುವ ವಿಚಾರಗಳ ಪದ್ಯ–ಗದ್ಯರೂಪಗಳು. ನೀತಿಯುತವಾದ ಒಂದು ಸಾಮಾಜಿಕ ನಿಲುವಿಗಾಗಿ ದುಡಿಯುತ್ತಿರುವ ಈ ವಿಚಾರಗಳು ಮೌಲಿಕವಾದುವು, ಯಾರೂ ಒಪ್ಪಬೇಕಾದಂಥವು"[5] ಎಂಬ ಲಕ್ಷ್ಮೀನಾರಾಯಣ ಭಟ್ಟರ ಮಾತು ಇಲ್ಲಿಗೆ ಹೆಚ್ಚು ಒಪ್ಪುತ್ತದೆ.

"ಮೊನ್ನೆಗೋತಾ ಹೊಡೆದನಲ್ಲಿ ಆ ಬಡಪಾಯಿ
ಛತ್ರದಚರಂಡಿ ಬಳಿ ಹರಕುಚಿಂದಿಯ ಕೆಳಗೆ
"ಹಂಸತೂಲಿಕೆಯ ಹಾಸಿಗೆ, ಗುಲಾಬಿಯ ದಿಂಬು,
ಕರ್ಪೂರ ಸುಂದರಿಯಕೂರ್ಪು, ಮಲ್ಲಿಗೆ ಕಂಪು,
ಓ ಕನಸಿನಿಂಪು?"
ಮಲಗಿದಾತನ ಬಂದು ಮಾತಾಡಿಸಿತ್ತು ನೊಣ;
ಕುಶಲ ಕೇಳಿತ್ತು ಕಟ್ಟಿರುವೆ ಗುಂಪು" (ಗೋ.ಅ.ಸ.ಕಾ., ಹಿಮಗಿರಿಯಕಂದರ, ಪು. 226)

'ಹಿಮಗಿರಿಕಂದರ'ದ ಈ ಸಾಲು ಸಾಮಾನ್ಯ ಜನರ ಅಸಹಾಯಕ ಬದುಕಿಗೆ ಉತ್ತಮ ನಿದರ್ಶನ. 'ಬೆನ್ನಿಗಂಟಿದ ಹೊಟ್ಟೆ, ಹೊಟ್ಟೆಗಂಟಿದ ತಲೆ'ಯ ವ್ಯಕ್ತಿ

"ಅಯ್ಯೋ ಸ್ವಾಮಿ, ಅನಾಥ! ಕೊಡಿ ಮೂರು ಕಾಸ;
ಸುಡಬೇಕು; ಬಡಪಾಯಿ! ನೀಡಿಧರ್ಮ" (ಅದೇ)
ಎಂದು ಅಂಗಲಾಚುವನು.
"ಹೊಟ್ಟೆಗಿಲ್ಲದೆ ಅವಳು ಮಗುವ ಬಾವಿಗೆ ನೂಕಿ
ಹಾರಿದಳನಾಥೆ ಈ ಜನ್ಮ ರೋಸಿ" (ಅದೇ, ಪು. 228)

"ಅಡಿಗರ ಶ್ರೇಷ್ಠತೆ ಬದುಕಿನ ಸಂಕೀರ್ಣ ಸಮಸ್ಯೆಗಳನ್ನು, ಕುಂದುಕೊರತೆ ದೋಷಗಳನ್ನು ಸಂಭಾವ್ಯವೆನ್ನಿಸುವ ಪರಿಹಾರಗಳನ್ನು ಸರಳ ಮಾಡದೆ, ನಾಟಕೀಯವಾಗಿಯೋ, ಭಾವಮಯವಾಗಿಯೋ ಬರೆಯುವುದು"[6] ಎಂಬ ಪಿ. ಶ್ರೀನಿವಾಸ ರಾವ್ ಅವರ ಮಾತು ಹೆಚ್ಚು ಸತ್ಯ. 'ಕೋಟಿಗಟ್ಟಲೆ ಹಸಿದ ಹೊಟ್ಟೆ ಸೂತ್ರದ ಗೊಂಬೆ ಕತ್ತುಕತ್ತನು ಸುತ್ತಿ ಬಿಗಿದು ಝಣಝಣಿಸಿತ್ತು ಹನುಮಂತ ಬಾಲದಂತುದ್ದ ಸರಪಣಿ' (ಗೊಂದಲಪುರ)– ಇಲ್ಲೆಲ್ಲ ಅಡಿಗರು ಸಮಾಜದ ಪರಿಸ್ಥಿತಿಯನ್ನು ಪ್ರತಿಬಿಂಬಿಸುವುದು ಪ್ರಖರವಾಗಿರುತ್ತದೆ.

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಮಾತನ್ನು ಇಲ್ಲಿ ಉಲ್ಲೇಖಿಸುವುದುಚಿತ. "ಒಂದು ಸಾಹಿತ್ಯ ವೇದಿಕೆಯಿಂದ ನಾನು ಮಾತನಾಡುವುದಿತ್ತು. ಮಾತಿನ ಅನಂತರ ಚರ್ಚೆ ಶುರುವಾಯಿತು. ಒಬ್ಬಯುವಕ, ಅಡಿಗರು ಶ್ರೇಷ್ಠ ಕವಿ ಎನ್ನುವುದನ್ನೇ ಅಲ್ಲಗಳೆಯಲು ಹೊರಟ. ಅವರ ಕಾವ್ಯ ನಮ್ಮ ಸಾಮಾಜಿಕ ಏರುಪೇರುಗಳಿಗೆ, ಬದುಕಿನ ತಾರತಮ್ಯಗಳಿಗೆ, ಸಾಮಾನ್ಯರ ನೋವು ದುಃಖಗಳಿಗೆ ಕಣ್ಣು ಮುಚ್ಚಿಕೊಂಡಿದೆ.

ಇಂಥವರು ಶ್ರೇಷ್ಠ ಕವಿ ಎನ್ನಲುಬಾರದು ಎಂದ. ತಾನಾಡಿದ್ದನ್ನು ಅವನು ಪ್ರಾಮಾಣಿಕವಾಗಿ ನಂಬಿದ್ದ ಎನಿಸಿದ್ದರಿಂದ ನಾನು ಚಕಿತನಾದೆ. ಆತ ಅಪೇಕ್ಷಿಸಿದ್ದಂಥ ಸಾಮಾಜಿಕ ಏರುಪೇರುಗಳನ್ನು ಕುರಿತು ಪ್ರತಿಭಟಿಸುವ, ಬಂಡಾಯ ಮನೋಧರ್ಮದ ಕವನಗಳನ್ನು ಅಡಿಗರು ಕೆಲವು ದಶಕಗಳ ಮುಂಚೆಯೇ ಬರೆದದ್ದು ಅವನಿಗೆ ಗೊತ್ತಿಲ್ಲದಿದ್ದೀತು. 'ಸುಲಿಗೆಯೆಂಬ ಯಾಗ', 'ಇದು ಮೊದಲು', 'ಸಮಾಜಭೈರವ', 'ನಾವೆಲ್ಲರು ಒಂದೆ ಜಾತಿ'ಯಂಥ ಆವೇಶಪೂರ್ಣ ಸಾಮಾಜಿಕ ಕವನಗಳನ್ನು ಅಂದಿನ ಯಾವ ಪ್ರಗತಿಶೀಲ ಕವಿಯಾಗಲೀ ಇಂದಿನ ಯಾವ ಬಂಡಾಯ ಕವಿಯಾಗಲೀ ಬರೆದಿಲ್ಲ. ಆ ಲೇಬಲ್ಲುಗಳಿಗೆ ಹಣೆಯೊಡ್ಡದೆ ತಮ್ಮ ಪ್ರಾಮಾಣಿಕ ಸಂವೇದನೆಗಳ ಬಲ ಹಿಡಿದೇ ಅಡಿಗರು ಅವುಗಳನ್ನು ಬರೆದರು... ಅಡಿಗರ ಕಾವ್ಯ ತನ್ನ ಕಾಲದತುರ್ತು ಸಮಸ್ಯೆಗಳಿಗೆ ಪರಿಹಾರ ಹುಡುಕ ಹೊರಟ ತತ್ಕಾಲೀನ ಕಾವ್ಯವಲ್ಲ. ಸರ್ವಕಾಲೀನವಾದ ಆಶಯದ ಪ್ರಕಾಶನಕ್ಕೆ ತನ್ನ ಕಾಲದ ಸಾಮಗ್ರಿಗಳನ್ನು ತಪ್ಪದೆ ಬಳಸುವ ಸಮಕಾಲೀನ ಗುಣದಕಾವ್ಯ."[7] ಈ ಮಾತುಗಳಲ್ಲಿ ಸಾಕಷ್ಟು ಸತ್ಯತೆಇದೆ. 'ಬಲ್ಲಿದರನ್ನೊತ್ತಿ ತುಳಿದು ಬಡವಗೆ ಕೈಕೊಟ್ಟರು', 'ಬಡತನದ ಭೂತಕಾಗಿ?', 'ಒಳತೋಟಿ', 'ನಾವು ನರರು', 'ಸ್ವಾತಂತ್ರ್ಯಗೀತ', 'ಕಲ್ಕತೆಯಲಿ ಕಾಳಿ', 'ರಾಜ್ಯ ಬಂದರೇನು?', 'ಇಂಡಿಯನ್ ರಿಪಬ್ಲಿಕ್', 'ಇಂದು ನಮ್ಮೀ ಪಾಡು–1,2,3', 'ಮನೆಯಿಲ್ಲದವರು', 'ಮೂಲಕ ಮಹಾಶಯರು', 'ಹಳೆಯ ದೇವರುಗಳೆಲ್ಲ ಸತ್ತು', 'ಆದರ್ಶವಾದ', 'ಪಲಾಯನ ಸೂಕ್ತ', 'ಭೃತ್ಯಸ್ಯ ಭೃತ್ಯ', 'ಮನುಷ್ಯ–ರಾಕ್ಷಸ–ದೇವ'– ಈ ಕವನಗಳಲ್ಲಿ ಸಾಮಾಜಿಕಾಂಶ ತುಂಬಿದೆ. ಆದರೆಅಡಿಗರ ಮೊದಲ ಕಾವ್ಯಗಳಿಗೆ ಹೋಲಿಸಿದಾಗ ಅವರ ಅನಂತರದ ಕಾವ್ಯದಲ್ಲಿ ಈ ಸಾಮಾಜಿಕತೆ ಕಡಿಮೆಯಾಗಿದೆ ಎಂಬುದನ್ನು ಒಪ್ಪಲೇಬೇಕಾಗುತ್ತದೆ.

ಕೊನೆ ಟಿಪ್ಪಣಿಗಳು

1. ಸುಮತೀಂದ್ರ ನಾಡಿಗ, ಅಡಿಗರ ಕಾವ್ಯ, 1975, ಪು. 5
2. ಸುಮತೀಂದ್ರ ನಾಡಿಗ, ಸಾಮಾಜಿಕ ಪ್ರಜ್ಞೆ : ಆಧುನಿಕ ಕಾವ್ಯದಲ್ಲಿ, ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ (ಸಂ.ಜಿ.ಎಸ್. ಶಿವರುದ್ರಪ್ಪ) 1977, ಪು.73
3. ಸುಮತೀಂದ್ರ ನಾಡಿಗ, ಅಡಿಗರಕಾವ್ಯ, 1975, ಪು. 13
4. ಕೀರ್ತಿನಾಥ ಕುರ್ತಕೋಟಿ, ನವ್ಯಕಾವ್ಯ ಪ್ರಯೋಗ, 1996, ಪು. 47
5. ಲಕ್ಷ್ಮೀನಾರಾಯಣ ಭಟ್ಟ, ಚಿಂತಾಮಣಿಯಲ್ಲಿ ಕಂಡ ಮುಖ – ಮುನ್ನುಡಿ, ಗೋಪಾಲಕೃಷ್ಣ ಅಡಿಗ ಸಮಗ್ರಕಾವ್ಯ, 2000, ಪು. 605
6. ಪಿ. ಶ್ರೀನಿವಾಸ ರಾವ್, ಸಮಗ್ರ ಕಾವ್ಯ–ಮುನ್ನುಡಿ, ಗೋಪಾಲಕೃಷ್ಣ ಅಡಿಗರ ಸಮಗ್ರ ಕಾವ್ಯ, 2000, ಪು.626
7. ಲಕ್ಷ್ಮೀನಾರಾಯಣ ಭಟ್ಟ, ಚಿಂತಾಮಣಿಯಲ್ಲಿ ಕಂಡ ಮುಖ – ಮುನ್ನುಡಿ, ಗೋಪಾಲಕೃಷ್ಣ ಅಡಿಗರ ಸಮಗ್ರಕಾವ್ಯ, 2000, ಪು. 603–604

ಪರಾಮರ್ಶನ ಗ್ರಂಥಗಳು

1. ಗೋಪಾಲಕೃಷ್ಣ ಅಡಿಗ ಎಂ., ಸಮಗ್ರ ಕಾವ್ಯ, ಸಪ್ನಬುಕ್ ಹೌಸ್, ಬೆಂಗಳೂರು, 2000
2. ನರಹಳ್ಳಿ ಬಾಲಸುಬ್ರಹ್ಮಣ್ಯ, ಇಹದ ಪರಿಮಳದ ಹಾದಿ, ಅಂಕಿತ ಪುಸ್ತಕ, ಬೆಂಗಳೂರು, 2000

3. ನಟರಾಜ್ ಹುಳಿಯಾರ್, ಚಿಂತಾಮಣಿ ಕೊಡ್ಲೆಕೆರೆ(ಸಂ), ಮಾನವಕುಲದ ಏಕತೆ, ಸಂ–4, ರಾಮಮನೋಹರ ಲೋಹಿಯಾ ಬರಹಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 2000
4. ನಾಗರಾಜ್ ಡಿ.ಆರ್. ಶಕ್ತಿ ಶಾರದೆಯ ಮೇಳ ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), 2002
5. ನಾಗರಾಜಯ್ಯ ಹಂಪ. (ಸಂ), ಶ್ರೀ ಉತ್ಸವ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1986
6. ನಾಯಕ ಹಾ.ಮಾ. (ಸಂ.), ಡಾ. ಸಿ.ಪಿ.ಕೆ., ವೆಂಕಟಾಚಲ ಶಾಸ್ತ್ರಿ ಸ್ವಸ್ತಿ (ತ.ಸು.ಶಾಮರಾಯರ ಅಭಿನಂದನ ಗ್ರಂಥ) ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, 1983
7. ಪ್ರಭುಶಂಕರ ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ. ಮೂರ್ತಿ, ಮೈಸೂರು, 2000
8. ರಾಘವೇಂದ್ರರಾವ್ ಎಚ್.ಎಸ್., ಹಾಡೆ ಹಾದಿಯ ತೋರಿತು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, 1995
9. ಶಂಕರ ಮೊಕಾಶಿ ಪುಣೇಕರ ಬೇಂದ್ರೆ, ಕಾವ್ಯಮೀಮಾಂಸೆ ಸಾಹಿತ್ಯ ಭಂಡಾರ, ಬೆಂಗಳೂರು, 1989
10. ಶಿವರುದ್ರಪ್ಪ ಜಿ.ಎಸ್., ಸೌಂದರ್ಯ ಸಮೀಕ್ಷೆ ಕಾಮಧೇನು, ಬೆಂಗಳೂರು, 1999
11. ಶಿವರುದ್ರಪ್ಪ ಜಿ.ಎಸ್.(ಸಂ), ಚಂದನ (ಕೆ.ಎಸ್.ನ. ಅಭಿನಂದನ ಗ್ರಂಥ), ಕೆ.ಎಸ್.ನ. ಅಭಿನಂದನ ಸಮಿತಿ, ಬೆಂಗಳೂರು, 1972
12. ಶಿವರುದ್ರಪ್ಪ ಜಿ.ಎಸ್.(ಸಂ), ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, 1977
13. ಶೇಷಗಿರಿರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, 1999

❖❖❖

ಶಿಲೆಯ ಒಡಲನು ಬಿಗಿದು
ಅಪ್ಪಿಕೊಂಡಿದೆ ಬೇರು
ಜಡದ ಒಳಗೊಂದು
ಹೊಸ ಜೀವ ಸಂಚಾರ

ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಉನ್ನತ ಶಿಕ್ಷಣ

ಡಾ. ಸಂತೋಷಕುಮಾರ್ ಪಿ.ಕೆ.

ಸಂಯೋಜಕರು, ಬಿ.ಎ. (Hons.), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಶಾಲೆ
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

ಶ್ರೀ ಅಭಿಷೇಕ್ ಹೆಚ್. ಈ

ಅಧ್ಯಾಪಕರು– ಸಾರ್ವಜನಿಕ ಆಡಳಿತ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಶಾಲೆ
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

ಶಿಕ್ಷಣ ಈಗ ನಮ್ಮೆಲ್ಲರ ಮೂಲಭೂತ ಹಕ್ಕಾಗಿದೆ. ನಮ್ಮ ಗುರಿಗಳನ್ನು ಸಾಧಿಸಲು ಮತ್ತು ನ್ಯಾಯಯುತ ಸಮಾಜವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡಲು, ನಮಗೆ ಶಿಕ್ಷಣದ ಅಗತ್ಯವಿದೆ.ಅದೇ ರೀತಿ ಶಿಕ್ಷಣವು ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಜಾಗತಿಕವಾಗಿ ಜ್ಞಾನದ ವಿಷಯದಲ್ಲಿ ನಾವು ಪ್ರಮುಖ ಬದಲಾವಣೆಯನ್ನು ಎದುರಿಸುತ್ತಿರುವ ಕಾರಣ, ಭಾರತ ಸರ್ಕಾರವು ಜುಲೈ 29, 2020 ರಂದು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆತಂದಿತು. ಶೈಕ್ಷಣಿಕ, ಬೌದ್ಧಿಕ ಮತ್ತು ಸಾರ್ವಜನಿಕ ವಲಯಲ್ಲಿ ಶಿಕ್ಷಣ ನೀತಿಯ ಪೂರ್ವಾಪರಗಳ ಕುರಿತು ವ್ಯಾಪಕ ಚರ್ಚೆಯೂ ಆಯಿತು. ಭಾರತದಲ್ಲಿ ಜಾರಿಗೆ ಬಂದಿರುವ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿ ಇದಾಗಿದೆ. ಪ್ರಥಮ ಬಾರಿಗೆ ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದಂತಹ ಸಂದರ್ಭದಲ್ಲಿ ಕೊಠಾರಿ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಿ 1968ರಲ್ಲಿ ಪ್ರಥಮ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದರು. ಇದರಲ್ಲಿ ಕಲಿಕಾ ಭಾಷೆಯ ಕುರಿತು ಹೆಚ್ಚಿನ ಆಸಕ್ತಿ ವಹಿಸಲಾಗಿತ್ತು ಹಾಗು 14 ವರ್ಷ ವಯೋಮಾನದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿತು. ಇದಾದ ನಂತರ 1986ರಲ್ಲಿ ರಾಜೀವಗಾಂಧಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಎರಡನೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆತರಲಾಯಿತು. ಇದರಲ್ಲಿ ಪ್ರಮುಖವಾಗಿ ಶಿಕ್ಷಣದ ಸಮಾನ ಅವಕಾಶದ ಮತ್ತು ಸಾಮಾಜಿಕ ಸಮಗ್ರತೆಯ ಕಡೆಗೆ ಹೆಚ್ಚು ಒತ್ತನ್ನು ನೀಡಲಾಗಿತ್ತು. ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಎಲ್ಲರಂತೆಯೇ ಶಿಕ್ಷಣವನ್ನು ಪಡೆಯುವುದು ಮಹತ್ತರ ವಿಷಯವಾಗಿತ್ತು. ಎರಡನೇ ಶಿಕ್ಷಣ ನೀತಿಯ ಅನುಷ್ಠಾನದ 36 ವರ್ಷದ ನಂತರ ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 2020ರಲ್ಲಿ ಜಾರಿಗೆತರಲಾಗಿದೆ.

2020ರ ರಾಷ್ಟ್ರೀಯ ಶಿಕ್ಷಣ ನೀತಿಯು ನಿರ್ದಿಷ್ಟವಾಗಿ ಮಹತ್ತರ ಬದಲಾವಣೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿತರುವ ಉದ್ದೇಶವನ್ನು ಹೊಂದಿದೆ. ಶಿಕ್ಷಾ ಪ್ರವೇಶದಿಂದ ಉನ್ನತ ಶಿಕ್ಷಣದವರೆಗೂ ನವೀನ ತಂತ್ರಜ್ಞಾನಗಳನ್ನು ಬಳಸಿಕೊಂಡು

ಕೌಶಲಯುತ ಸಮೂಹವನ್ನು ಕಟ್ಟುವ ಉದ್ದೇಶವನ್ನು ಹೊಂದಲಾಗಿದೆ. ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣದ ಕುರಿತು ಶಿಕ್ಷಣ ನೀತಿ ಹೊಂದಿರುವ ಉದ್ದೇಶಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಅಂಶಗಳೆಂದರೆ, ಬಹುಶಿಸ್ತೀಯ ಅಧ್ಯಯನ, ವಿವಿಧ ಹಂತಗಳಲ್ಲಿ ಪ್ರವೇಶ ಮತ್ತು ನಿರ್ಗಮನ, ಕೌಶಲ್ಯಾಧಾರಿತ ಶಿಕ್ಷಣ, ಹಾಗೂ ಮಾತೃಭಾಷೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಈ ಶಿಕ್ಷಣ ನೀತಿಯು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ರ ವೈಶಿಷ್ಟಗಳು

ಶೈಕ್ಷಣಿಕ ಕ್ರೆಡಿಟ್ ಬ್ಯಾಂಕ್ ಸ್ಥಾಪನೆ

ಹೊಸ ಶಿಕ್ಷಣ ನೀತಿಯಡಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಅವರು ಗಳಿಸಿದ ಕ್ರೆಡಿಟ್‌ಗಳ ಮೂಲಕ ಅಳೆಯಲಾಗುತ್ತದೆ. ವಿವಿಧ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಗಳಿಸಿದ ಕ್ರೆಡಿಟ್‌ಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲು 'ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್' (ಎಬಿಸಿ) ಸ್ಥಾಪನೆಯಾಗಲಿದೆ. ಇದರಲ್ಲಿ ಸಂಗ್ರಹವಾದ ಕ್ರೆಡಿಟ್ ಸ್ಕೋರ್‌ಗಳನ್ನು ಬೇರೊಂದು ವಿಷಯದಲ್ಲಿ ಗಳಿಸಿದ ಸ್ಕೋರ್ ಜತೆ ಸೇರಿಸಲು ಅಥವಾ ಬೇರೊಂದು ವಿಷಯಕ್ಕೆ ವರ್ಗಾವಣೆ ಮಾಡಲು ಸಾಧ್ಯವಿದ್ದು, ಅಂತಿಮ ವರ್ಷದ ಡಿಗ್ರಿಗೆ ಅವುಗಳನ್ನು ಒಟ್ಟಾರೆಯಾಗಿ ಪರಿಗಣಿಸಲಾಗುವುದು.

ಸುಲಭ ಪ್ರವೇಶ – ಬಹುಹಂತದ ನಿರ್ಗಮನಕ್ಕೆ ಅವಕಾಶ

ನೂತನ ಶಿಕ್ಷಣ ನೀತಿಯಲ್ಲಿ ಪದವಿಪೂರ್ವ ಮತ್ತು ಪದವಿ ಶಿಕ್ಷಣವು ವಿಲೀನವಾಗಲಿದ್ದು, ಶಿಕ್ಷಣವು 3 ಅಥವಾ 4 ವರ್ಷಗಳ ಅವಧಿಯದ್ದಾಗಿರುತ್ತದೆ. ಇಲ್ಲಿ ವಿದ್ಯಾರ್ಥಿಗಳು ಪೂರ್ಣ ಕೋರ್ಸ್ ಮುಗಿಸದೆ ಮಧ್ಯದಲ್ಲಿ ಕೋರ್ಸ್‌ನಿಂದ ನಿರ್ಗಮಿಸಬಹುದು. ಆದರೆ ಇದನ್ನು ಕೋರ್ಸ್ ಅಪೂರ್ಣ ಎಂದು ಪರಿಗಣಿಸುವುದಿಲ್ಲ. 1 ವರ್ಷ ಪೂರೈಸಿದ ಬಳಿಕ ವೃತ್ತಿಪರ ಶಿಕ್ಷಣ ಸೇರಿದಂತೆ ಅವರು ಆಯ್ಕೆ ಮಾಡಿಕೊಂಡಿದ್ದ ವಿಷಯದಲ್ಲಿ ಪ್ರಮಾಣ ಪತ್ರ ನೀಡಲಾಗುತ್ತದೆ. ವಿದ್ಯಾರ್ಥಿ 2 ವರ್ಷ ಪೂರೈಸಿದರೆ ಡಿಪ್ಲೊಮಾ ಪ್ರಮಾಣ ಪತ್ರ ದೊರೆಯಲಿದೆ. 3 ವರ್ಷ ಪೂರೈಸಿದರೆ ಪದವಿ ಪ್ರಮಾಣ ಪತ್ರ ದೊರೆಯಲಿದೆ. ವಿದ್ಯಾರ್ಥಿಯು ಐಚ್ಛಿಕವಾಗಿ 4 ವರ್ಷದ ಡಿಗ್ರಿಯನ್ನೂ ಆಯ್ದುಕೊಳ್ಳಬಹುದು.

ವಿವಿಧ ವಿಷಯಗಳ ಶಿಕ್ಷಣಕ್ಕೆ ಆದ್ಯತೆ

ಪ್ರಸ್ತುತ ಒಂದೇ ವಿಷಯದಲ್ಲಿ ಶಿಕ್ಷಣ ನೀಡುತ್ತಿರುವ ಶೈಕ್ಷಣಿಕ ಸಂಸ್ಥೆಗಳು (ಉದಾ: ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ತಾಂತ್ರಿಕ ವಿವಿಗಳು) ಇನ್ನು ಮುಂದೆ ಇರುವುದಿಲ್ಲ. ಇವು ಸಹ ಬಹುವಿಷಯಗಳ ಶಿಕ್ಷಣ ಸಂಸ್ಥೆಗಳಾಗಿ ಮಾರ್ಪಡಾಗಲಿವೆ. ಎಲ್ಲಾ ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಗಳು 2030ರ ವೇಳೆಗೆ ಬಹು ವಿಷಯಗಳ ಶೈಕ್ಷಣಿಕ ಸಂಸ್ಥೆಗಳಾಗಿ ಬದಲಾಗಬೇಕೆಂಬ ಗುರಿಯನ್ನು ನೀಡಲಾಗಿದೆ.

ಎಂ.ಫಿಲ್. ರದ್ದತಿ

ಸ್ನಾತಕಪೂರ್ವ ಶಿಕ್ಷಣ 3 ಅಥವಾ ನಾಲ್ಕು ವರ್ಷಗಳು ಇರಲಿದ್ದು, 1 ಅಥವಾ 2 ವರ್ಷಗಳ ಸ್ನಾತಕೋತ್ತರ ಪದವಿ ಇರಲಿದೆ.ಏಕೀಕೃತ 5 ವರ್ಷದ ಬ್ಯಾಚಲರ್/ ಮಾಸ್ಟರ್ ಡಿಗ್ರಿ ಆಯ್ಕೆಯೂ ಲಭ್ಯವಾಗಲಿದೆ.

ಜಿಲ್ಲೆಗೊಂದು ಬಹುಶಿಸ್ತೀಯ ಕಾಲೇಜು

2030ರ ವೇಳೆಗೆ ದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ದೊಡ್ಡ ಮಟ್ಟದ ಬಹು–ವಿಷಯಗಳ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. 2040ರ ವೇಳೆಗೆ ದೇಶದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಬಹು–ವಿಷಯಗಳ ಶಿಕ್ಷಣ ಸಂಸ್ಥೆಗಳಾಗಿ ಮಾರ್ಪಡಿಸಿ, ಪ್ರತಿಯೊಂದು ವಿಷಯದಲ್ಲೂ ಕನಿಷ್ಠ 3000 ವಿದ್ಯಾರ್ಥಿಗಳನ್ನು ಹೊಂದಿರುವಂತೆ ಮಾಡುವ ಗುರಿ ಇರಿಸಿಕೊಳ್ಳಲಾಗಿದೆ.

ಒಂದೇ ಕೇಂದ್ರೀಯ ನಿಯಂತ್ರಕ ವ್ಯವಸ್ಥೆ

ಎಲ್ಲಾ ಉನ್ನತ ಶೈಕ್ಷಣಿಕ ಸಂಸ್ಥೆಗಳನ್ನು ನಿಯಂತ್ರಿಸಲು ಯುಜಿಸಿ ಮಾದರಿಯಲ್ಲಿ' ಭಾರತೀಯ ಉನ್ನತ ಶಿಕ್ಷಣ ಮಂಡಳಿ'(ಎಚ್ಇಸಿಐ) ಸ್ಥಾಪನೆಯಾಗಲಿದೆ. ಶಿಕ್ಷಕರ ತರಬೇತಿ ಸೇರಿದಂತೆ ಎಲ್ಲಾ ರೀತಿಯ ಶಿಕ್ಷಣಕ್ಕೆ ಇದು ಏಕ ಗವಾಕ್ಷಿ ನಿಯಂತ್ರಣ ಪ್ರಾಧಿಕಾರವಾಗಿರುತ್ತದೆ.

ಕಲಾ–ವಾಣಿಜ್ಯ–ವಿಜ್ಞಾನ ಎಂಬ ತಡೆ ಇಲ್ಲ

ಹೊಸ ಶಿಕ್ಷಣ ನೀತಿಯು, ಮಾತೃ ಭಾಷೆಯಲ್ಲಿ ಶಿಕ್ಷಣ ನೀಡುವುದಕ್ಕೆ ಒತ್ತು ನೀಡುವುದಲ್ಲದೆ, ಯಾವುದೇ ವಿದ್ಯಾರ್ಥಿ ತನ್ನ ಶೈಕ್ಷಣಿಕ ಹಿನ್ನೆಲೆಯನ್ನು ಲೆಕ್ಕಿಸದೆ ಯಾವುದೇ ವಿಷಯವನ್ನು ಓದಲು ಅವಕಾಶ ನೀಡುತ್ತದೆ. ಅಂದರೆ ಎಂಜಿನಿಯರಿಂಗ್ ವಿದ್ಯಾರ್ಥಿಯು ಇತಿಹಾಸ ಓದಬಹುದು. ಕಲಾ ವಿಭಾಗದ ವಿದ್ಯಾರ್ಥಿಯು ಭೌತಶಾಸ್ತ್ರ ಅಥವಾ ಗಣಿತವನ್ನು ಒಂದು ವಿಷಯವಾಗಿ ಆಯ್ದುಕೊಳ್ಳಬಹುದು.

ಸಾಮಾನ್ಯ ಪ್ರವೇಶ ಪರೀಕ್ಷೆ

ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್ಟಿಎ) ಏಕರೀತಿಯ ಸಾಮಾನ್ಯ ಪರೀಕ್ಷೆಯನ್ನು ನಡೆಸಲಿದೆ.ಆದರೆ ಆಯಾ ವಿಷಯಗಳಿಗೆ ತಕ್ಕಂತೆ ವಿಭಿನ್ನ ಪ್ರಶ್ನೆ ಪತ್ರಿಕೆಗಳನ್ನು ಒದಗಿಸಲಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಕೂಲಗಳು:

– ಭಾರತ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅಡಿಯಲ್ಲಿ ಎಲ್ಲರಿಗೂ ಶಾಲಾ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಇದರಿಂದ ಸರಿಸುಮಾರು 2 ಕೋಟಿ ಶಾಲಾ ವಿದ್ಯಾರ್ಥಿಗಳು ಈ ಹೊಸ ವಿಧಾನದ ಮೂಲಕ ಮತ್ತೆ ಶಾಲೆಗಳಿಗೆ ಸೇರುವ ಸಾಧ್ಯತೆ ಇದೆ.

– ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ 10+2 ಶಿಕ್ಷಣ ವ್ಯವಸ್ಥೆ ಇರುವುದಿಲ್ಲ.

ಇದನ್ನು 5+3+3+4 ರಂತೆ ವಿಂಗಡನೆ ಮಾಡಲಾಗಿದೆ. ಈ ರಚನೆಯು ವಿದ್ಯಾರ್ಥಿಗಳ ರಚನಾತ್ಮಕ ವರ್ಷಗಳ ಕಲಿಕೆಯ ಮೇಲೆ ಕೇಂದ್ರೀಕೃತವಾಗಿದೆ. ಇದರರ್ಥ ಶಾಲೆಯ ಮೊದಲ ಐದು ವರ್ಷಗಳು ಅಡಿಪಾಯ ಹಂತ, 3 ರಿಂದ 5ನೇ ತರಗತಿಯವರೆಗಿನ ಮೂರು ವರ್ಷಗಳನ್ನು ಪೂರ್ವಸಿದ್ಧತಾ ಹಂತವಾಗಿ ವಿಂಗಡಿಸಲಾಗಿದೆ. ನಂತರ ಮೂರು ವರ್ಷಗಳು ಮಧ್ಯಮ ಹಂತವಾಗಿ ವಿಂಗಡಿಸಲಾಗಿದೆ. ನಂತರದ ನಾಲ್ಕು ವರ್ಷವನ್ನು ದ್ವಿತೀಯ ಹಂತವನ್ನಾಗಿ ವಿಂಗಡಿಸಲಾಗಿದೆ. ಶಾಲೆಗಳು ಶಾಲೆಗಳು ಕಲೆ, ವಾಣಿಜ್ಯ, ವಿಜ್ಞಾನದ ಹೊಳೆಗಳ ಯಾವುದೇ ಕಟ್ಟುನಿಟ್ಟಿನ ರಚನೆಯನ್ನು ಹೊಂದಿರುವುದಿಲ್ಲ, ವಿದ್ಯಾರ್ಥಿಗಳು ತಾವು ಬಯಸುವ ಯಾವುದೇ ಕೋರ್ಸ್‌ಗಳನ್ನು ತೆಗೆದುಕೊಳ್ಳಬಹುದು.

- 8 ವರ್ಷದೊಳಗಿನ ಮಕ್ಕಳಿಗೆ ಬಾಲ್ಯದ ಆರೈಕೆ ಮತ್ತು ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಮತ್ತು ಶಿಕ್ಷಣ ಚೌಕಟ್ಟನ್ನು NCERT ವಿನ್ಯಾಸಗೊಳಿಸಿದೆ ಮತ್ತು ಅಭಿವೃದ್ಧಿಪಡಿಸುತ್ತಿದೆ.
- ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ ಶಿಕ್ಷಣ ಸಚಿವಾಲಯವು ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರದ ಮೇಲೆ ರಾಷ್ಟ್ರೀಯ ಮಿಷನ್ ಅನ್ನು ಸ್ಥಾಪಿಸಲಿದೆ. ಮೂರನೆಯ ತರಗತಿಯವರೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ಸಂಖ್ಯಾಶಾಸ್ತ್ರ ಮತ್ತು ಸಾಕ್ಷರತೆಯ ಅಡಿಪಾಯವನ್ನು ಸಾಧಿಸಲು ಯಶಸ್ವಿ ಅನುಷ್ಠಾನದ ಜವಾಬ್ದಾರಿ ಭಾರತದ ರಾಜ್ಯಗಳ ಮೇಲೆ ಬೀಳುತ್ತದೆ. ಈ ಅನುಷ್ಠಾನವನ್ನು 2025ರ ವೇಳೆಗೆ ಜಾರಿಗೆ ತರಲು ನಿರ್ಧರಿಸಲಾಗಿದೆ.
- ಎನ್‌ಇಪಿ 2020ರ ಒಂದು ಪ್ರಮುಖಾಂಶವೆಂದರೆ ಭಾರತದಲ್ಲಿ ರಾಷ್ಟ್ರೀಯ ಪುಸ್ತಕ ಪ್ರಚಾರ ನೀತಿ ರಚನೆ.
- ಸೂಕ್ತ ಅಧಿಕಾರಿಗಳು 3, 5 ಮತ್ತು 8ನೇ ತರಗತಿಗಳಿಗೆ ಶಾಲಾ ಪರೀಕ್ಷೆಗಳನ್ನು ನಡೆಸುತ್ತಾರೆ. 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳು ಮುಂದುವರಿಯುತ್ತವೆ ಆದರೆ ಓಇಕ 2020 ಸಮಗ್ರ ಅಭಿವೃದ್ಧಿಯೊಂದಿಗೆ ರಚನೆಯನ್ನು ಮರು ವಿನ್ಯಾಸ ಗೊಳಿಸುವ ಗುರಿಯನ್ನು ಹೊಂದಿದೆ.
- ರಾಷ್ಟ್ರೀಯ ಮೌಲ್ಯಮಾಪನ ಕೇಂದ್ರ–ಪರಾಖ್(ಕಾರ್ಯಕ್ಷಮತೆಯ ಮೌಲ್ಯಮಾಪನ, ವಿಮರ್ಶೆ ಮತ್ತು ಸಮಗ್ರ ಅಭಿವೃದ್ಧಿಗಾಗಿ ಜ್ಞಾನದ ವಿಶ್ಲೇಷಣೆ) ಸರ್ಕಾರವು ಸ್ಥಾಪಿಸಬೇಕು.
- ವಿಶೇಷ ಬೆಳಗಿನ ಬೋರ್ಡಿಂಗ್ ಶಾಲೆ 'ಬಾಲ ಭವನಗಳು' ಭಾರತದ ಪ್ರತಿ ರಾಜ್ಯ/ ಜಿಲ್ಲೆಯಲ್ಲಿ ಸ್ಥಾಪನೆಯಾಗಲಿದೆ. ಈ ವಸತಿ ಶಾಲೆಯನ್ನು ಆಟ, ವೃತ್ತಿ, ಕಲೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಭಾಗವಹಿಸಲು ಬಳಸಲಾಗುತ್ತದೆ.
- ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ, ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್ ಸ್ಥಾಪಿಸಲಾಗುವುದು. ವಿದ್ಯಾರ್ಥಿಗಳು ಗಳಿಸಿದ ಕ್ರೆಡಿಟ್‌ಗಳನ್ನು ಸಂಗ್ರಹಿಸಬಹುದು ಮತ್ತು ಅಂತಿಮ ಪದವಿ ಪೂರ್ಣಗೊಂಡಾಗ, ಅವುಗಳನ್ನು ಎಣಿಸಬಹುದು.
- ರಾಷ್ಟ್ರೀಯ ಶಿಕ್ಷಣ ನೀತಿ 2020ರ ಪ್ರಕಾರ, ಐಐಟಿ ಮತ್ತು ಐಐಎಂಗಳಿಗೆ ಸಮನಾದ ಬಹುಶಿಕ್ಷಣ ಶಿಕ್ಷಣ ಮತ್ತು ಸಂಶೋಧನಾ ವಿಶ್ವವಿದ್ಯಾಲಯಗಳನ್ನು ದೇಶದಲ್ಲಿ ಸ್ಥಾಪಿಸಲಾಗುವುದು. ಮಲ್ಟಿಡಿಸಿಪ್ಲಿನರಿ ಅಕಾಡೆಮಿಕ್ ಅನ್ನು

ಪರಿಚಯಿಸಲು ಇವುಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ.

- ಸಾರ್ವಜನಿಕ ಮತ್ತು ಖಾಸಗಿ ಶೈಕ್ಷಣಿಕ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಲು ಮಾನ್ಯತೆ ಮತ್ತು ನಿಯಂತ್ರಣ ನಿಯಮಗಳ ಒಂದೇ ಪಟ್ಟಿಯನ್ನು ಬಳಸಲಾಗುತ್ತದೆ.
- ಹಂತ ಹಂತವಾಗಿ ಕಾಲೇಜು ಸಂಯೋಜನೆ ಮತ್ತು ಸ್ವಾಯತ್ತತೆಯನ್ನು ಕಾಲೇಜುಗಳಿಗೆ ನೀಡಲಾಗುತ್ತದೆ.
- 2030ರ ವೇಳೆಗೆ, ಬೋಧನಾ ವೃತ್ತಿಗೆ ಸೇರಲು ಕನಿಷ್ಠ ನಾಲ್ಕು ವರ್ಷದ ಬಿ.ಎಡ್ ಪದವಿ ಹೊಂದಿರಬೇಕು. 15. ಭವಿಷ್ಯದ ಸಾಂಕ್ರಾಮಿಕ ಸನ್ನಿವೇಶಗಳಿಗೆ ವಿದ್ಯಾರ್ಥಿಗಳನ್ನು ತಯಾರಿಸಲು, ಆನ್‌ಲೈನ್ ಅಕಾಡೆಮಿಕ್ ಅನ್ನು ದೊಡ್ಡ ಪ್ರಮಾಣದಲ್ಲಿ ಪ್ರಚಾರ ಮಾಡಲಾಗುತ್ತದೆ.
- ಭಾರತದಲ್ಲಿ ಕ್ಯಾಂಪಸ್ ಸ್ಥಾಪಿಸಲು 100 ವಿದೇಶಿ ಕಾಲೇಜುಗಳಿಗೆ ಅನುಮತಿ.
- ಸಂಶೋಧನೆಗೆ ಆದ್ಯತೆ ನೀಡಲು ಉನ್ನತ ಶಿಕ್ಷಣ ಸಂಸ್ಥೆಗಳ ಮರು ವರ್ಗೀಕರಣ.
- 2035ರ ವೇಳೆಗೆ 50% ಸರಾಸರಿ ದಾಖಲಾತಿ ಅನುಪಾತ.
- ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲೂ ಕಲೆ, ಸಂಗೀತ, ನೃತ್ಯ, ಸಾಹಿತ್ಯ ಸೇರಿದಂತೆ ಬಹು ವಿಷಯಗಳ ಬೋಧನೆ.

ಉನ್ನತ ಶಿಕ್ಷಣ

ಉನ್ನತ ಶಿಕ್ಷಣ ಎಂಬುದು ಪದವಿ ಕೋರ್ಸುಗಳನ್ನು ಮುಗಿಸಿದ ತರುವಾಯ ವಿಶ್ವವಿದ್ಯಾಲಯಗಳಲ್ಲಿರುವ ಸ್ನಾತಕೋತ್ತರ ಪದವಿಗಳು ಮಾತ್ರ ಎನ್ನುವ ನಂಬಿಕೆ ಈವರೆಗೂ ಅಸ್ತಿತ್ವದಲ್ಲಿತ್ತು. ಪಿಯುಸಿ ವರೆಗಿನ ಶಿಕ್ಷಣ ಮಾಧ್ಯಮಿಕ ಹಂತದ ಶಿಕ್ಷಣ ಎಂದು ಪರಿಗಣಿಸಲ್ಪಟ್ಟಿದ್ದರೆ, ಸ್ನಾತಕೋತ್ತರ ಪದವಿಗಳು ಉನ್ನತ ಶಿಕ್ಷಣ ಎಂದು ಪರಿಗಣಿಸಲ್ಪಟ್ಟಿದ್ದವು. ಆದರೆ ಇವುಗಳ ನಡುವೆ ಇದ್ದಂತಹ ಪದವಿ ಶಿಕ್ಷಣ ಅತ್ತವೂ ಇಲ್ಲ ಇತ್ತವೂ ಇಲ್ಲ ಎನ್ನುವ ಸ್ಥಿತಿಯಲ್ಲಿದ್ದವು. ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತದ ಶಿಕ್ಷಣವನ್ನು ಬಿಟ್ಟರೆ ಪದವಿ ಕೋರ್ಸುಗಳನ್ನು ಮಾಡುವ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಹೋಲಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಕಲಿಯುತ್ತಾರೆ. ಆದರೆ ಆ ಹಂತದ ಶಿಕ್ಷಣವೇ ನಗಣ್ಯವಾಗಿತ್ತು ಎಂದರೆ ಉತ್ಪ್ರೇಕ್ಷೆಯಾಗಲಾರದು. ಯಾವ ಹಂತದಲ್ಲಿ ಕೌಶಲ್ಯಗಳನ್ನು ಕಲಿತು ಉದ್ಯೋಗಗಳು ಅರಸಿ ಬರಬೇಕಿತ್ತೋ ಅಂತಹ ಕಾರ್ಯ ಸಾಧ್ಯವಾಗದಿದ್ದುದು ನಮ್ಮ ವ್ಯವಸ್ಥೆ ಅದನ್ನು ನಿರ್ಲಕ್ಷಿಸಿರುವುದಕ್ಕೆ ನಿದರ್ಶನವಾಗಿದೆ. ಆದರೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅಂತಹ ಸಮಸ್ಯೆಯನ್ನು ಸ್ಪಷ್ಟವಾಗಿ ಗುರುತಿಸಿ, ಪದವಿಯನ್ನು ಮತ್ತು ಉನ್ನತ ಶಿಕ್ಷಣವನ್ನು ಸಂಯೋಜನೆ ಮಾಡಿ ನಾಲ್ಕು ವರ್ಷದ ಗೌರವ ಪದವಿ ಎನ್ನುವ ಯೋಜನೆಯನ್ನು ತಂದಿರುವುದು ಉತ್ತಮವಾದ ಬೆಳವಣಿಗೆ. ಜೀವನದ ದಿಕ್ಕು ಬದಲಾಯಿಸುವ ಹಂತವನ್ನೇ ಮುಖ್ಯವಾಗಿ ಪರಿಗಣಿಸಿ ಅಲ್ಲಿರುವ ವಿದ್ಯಾರ್ಥಿಗಳು ಕೌಶಲ್ಯಪೂರ್ಣರಾಗಿ ಹೊರಹೊಮ್ಮಿಸುವ ಪ್ರಯತ್ನ ಮಾಡಬೇಕಿರುವುದು ಇಂದಿನ ವಾಸ್ತವ.

ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಅರ್ಥಮಾಡಿಕೊಳ್ಳಲು ನಾವು ಇನ್ನೆರಡು ಸಂಗತಿಗಳನ್ನು ಪ್ರಧಾನವಾಗಿ ಗಮನಿಸಬೇಕಾಗುತ್ತದೆ. ಮೊದಲನೆಯದು ಭಾರತಕ್ಕೆ ಬ್ರಿಟೀಷರು ಬರುವ ಮುನ್ನ ಇದ್ದಂತಹ ಶಿಕ್ಷಣ ನೀತಿ ಹಾಗೂ ಎರಡನೆಯದು

19ನೇ ಶತಮಾನದಲ್ಲಿ ಪ್ರಾರಂಭವಾದ ಹಂಬೋಲ್ಟನ್ ಉನ್ನತ ಶಿಕ್ಷಣ ಮಾದರಿ.

ಪ್ರಾಚೀನ ಭಾರತೀಯ ಶೈಕ್ಷಣಿಕ ಎಂದರೆ ಬಹುತೇಕರು ತಿರಸ್ಕಾರ ಭಾವದಿಂದ ನೋಡುತ್ತಾರೆ. ಏಕೆಂದರೆ ಕಳೆದ 200 ವರ್ಷಗಳಿಂದ ಪಡೆದ ಬ್ರಿಟೀಷರ ಶಿಕ್ಷಣವು ಭಾರತೀಯ ಜೀವನ ಶೈಲಿಯನ್ನು ಮರೆಮಾಚುವ ಮತ್ತು ತಿರಸ್ಕಾರ ಭಾವದಿಂದ ನೋಡುವ ಮನೋಭಾವವನ್ನು ಅಪ್ರಜ್ಞಾಪೂರ್ವಕವಾಗಿ ನಮ್ಮಲ್ಲಿ ಬಿತ್ತಿದೆ. ಆದ್ದರಿಂದ ಪಾಶ್ಚಾತ್ಯರ ದೃಷ್ಟಿಕೋನದಿಂದಾಚೆಗೆ ನಮ್ಮನ್ನು ನಾವು ಅರ್ಥಮಾಡಿಕೊಳ್ಳುವ ಪ್ರಕ್ರಿಯೆ ಇಂದಿನ ತುರ್ತಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು ಮತ್ತದೆ ಹಳೆಯ ಸಂಪ್ರದಾಯವನ್ನು ಮರುಸ್ಥಾಪಿಸುವ ಉದ್ದೇಶವನ್ನು ಹೊಂದಿದೆ ಎಂದು ನಾವು ಅಪಾರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ, ಅದರ ಬದಲಿಗೆ ಅಂದಿನ ಶಿಕ್ಷಣದಲ್ಲಿದ್ದ ಮೌಲ್ಯಗಳನ್ನು, ಪರಿಣಿತಿಗಳನ್ನು ಹಾಗೂ ಜೀವನ ಕೌಶಲ್ಯವನ್ನು ಬೆಳಕಿಗೆ ತರುವ ಒಂದು ಪ್ರಯತ್ನವಾಗಿದೆ. ವೇದ, ವಿಜ್ಞಾನ ಗಣಿತಗಳನ್ನು ಹಾಗೂ ಕೆಲವು ಪ್ರಾಯೋಗಿಕ ವಿದ್ಯೆಗಳನ್ನು ಕಲಿಸುವ ಪದ್ಧತಿ ನಮ್ಮಲ್ಲಿತ್ತು. ಇಂದು ಬಹುಶಿಸ್ತೀಯ ಅಧ್ಯಯನದ ಕುರಿತು ಕೇಳಿ ಬರುತ್ತಿರುವ ಕೂಗು ನಮ್ಮಲ್ಲಿ ಪ್ರಾಯೋಗಿಕವಾಗಿಯೇ ಬಹು ಹಿಂದೆಯೇ ಅಸ್ತಿತ್ವದಲ್ಲಿತ್ತು. ಜೀವನಕ್ಕೆ ಅಗತ್ಯವಿರುವ ಕೌಶಲಗಳನ್ನು ಕಲಿಸುವುದೇ ಅಂದಿನ ಶಿಕ್ಷಣದ ಪ್ರಧಾನ ಆಶಯವಾಗಿತ್ತು. ಶಾಸ್ತ್ರಗಳ ಮೂಲಕ ಕೌಶಲವನ್ನು, ಕಾವ್ಯಗಳ ಮೂಲಕ ಕಲ್ಪನಾ ಶಕ್ತಿಯನ್ನು, ಇತಿಹಾಸ ಮತ್ತು ತರ್ಕಗಳ ಮೂಲಕ ಬುದ್ಧಿಶಕ್ತಿಯನ್ನು ಹಾಗೂ ಮಿಮಾಂಸೆಗಳ ಮೂಲಕ ನಿರೂಪಣೆ ಅಥವಾ ಭಾಷ್ಯಗಳನ್ನು ಕಲಿಸುವ, ಮತ್ತು ವರ್ತದ ಮೂಲಕ ಕೃಷಿ, ವ್ಯಾಪಾರ, ಪಶುಸಂಗೋಪನೆಯಂತಹ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು. ಇದರ ಮೂಲಕ ಜೀವನಕ್ಕೆ ಅಗತ್ಯವಿರುವ ಸರ್ವವಿದ್ಯೆಗಳನ್ನು ವಿವಿಧ ಹಂತಗಳಲ್ಲಿ ಕಲಿಸುವ ಮೂಲಕ ಶಿಕ್ಷಣವು ಜೀವನ ವಿಧಾನವನ್ನು ರೂಪಿಸುವ ಕಾರ್ಯವನ್ನು ಮಾಡುತ್ತಿತ್ತು. ನಳಂದ, ತಕ್ಷಶಿಲೆಯಂತಹ ವಿಶ್ವವಿದ್ಯಾಲಯಗಳಿಗೆ ವಿದೇಶಿ ಯಾತ್ರಿಕರು ಭೇಟಿ ನೀಡುವ ಮೂಲಕ ಅಲ್ಲಿದ್ದಂತಹ ಪದ್ಧತಿಯ ಮಹತ್ವವನ್ನು ತಿಳಿಸಿರುವುದು ನಮ್ಮ ಪೂರ್ವಿಕರು ಶಿಕ್ಷಣ ಪದ್ಧತಿಯನ್ನು ಬೆಳೆಸಿದ್ದಂತಹ ಪರಿ ಆಶ್ಚರ್ಯಚಕಿತರನ್ನಾಗಿ ಮಾಡಿಸುತ್ತದೆ.ಆದರೆ ಇಂತಹ ವೈಧಾನಿಕತೆ ಮೆಕಾಲೆಯ ಶಿಕ್ಷಣ ಬಂದ ತರುವಾಯ ಮೂಲೆಗುಂಪಾಯಿತು ಎನ್ನುವುದು ಸತ್ಯ.

ಭಾರತವು ಇಂತಹ ಶಿಕ್ಷಣ ಪದ್ಧತಿಯನ್ನು ರೂಢಿಸಿಕೊಂಡ ಹಲವಾರು ಶತಮಾನದ ನಂತರ ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಜ್ಞಾನೋದಯವಾಯಿತು. ಅದರಲ್ಲಿಯೂ ವಿಶೇಷವಾಗಿ 19ನೇ ಶತಮಾನದ ಆದಿಯಲ್ಲಿ ಉನ್ನತ ಶಿಕ್ಷಣದ ಕುರಿತು ಹಲವಾರು ಚಿಂತನೆಗಳು ಜರ್ಮನಿಯಲ್ಲಿ ಉದಯಿಸಿದವು. ಅದರಲ್ಲಿ ಪ್ರಮುಖವಾಗಿ ಹಂಬೋಲ್ಟನ್ ಮಾದರಿಯನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲು ಪ್ರಾರಂಭವಾಯಿತು. ಈ ಮಾದರಿಯ ಪ್ರಕಾರ ಶಿಕ್ಷಣವು ಸಂಶೋಧನೆ ಮತ್ತು ಅಧ್ಯಯನದ ಸಮ್ಮಿಳನವಾಗಿ, ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿರಬೇಕು ಎಂದು ಪ್ರತಿಪಾದಿಸಿತು. ಈ ಮಾದರಿಯನ್ನು ವಿಲಿಯಮ್ ವೊನ್ ಹಂಬೋಲ್ಟ್ ಎನ್ನುವ ಪ್ರಶಿಯಾದ ದಾರ್ಶನಿಕರು ಪರಿಚಯಿಸಿದರು. ಬರ್ಲಿನ್‌ನಲ್ಲಿ ಇಂತಹ ಚಿಂತನೆಯನ್ನು ಇಟ್ಟುಕೊಂಡು ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಈ ವಿಶ್ವವಿದ್ಯಾಲಯಲ್ಲಿ

ವಿದ್ಯಾರ್ಥಿಗಳು ತಮ್ಮ ಇಚ್ಛೆಯ ವಿಷಯಗಳನ್ನು ಬಹುಶಿಸ್ತೀಯವಾಗಿ ಅಧ್ಯಯನ ಮಾಡುವ ಅವಕಾಶವಿತ್ತು. ಒಟ್ಟಿನಲ್ಲಿ ಸ್ವಾಯತ್ತ ವ್ಯಕ್ತಿತ್ವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಿ ಮುಂದೆ ವಿಶ್ವನಾಗರೀಕರನ್ನಾಗಿ ಮಾಡುವ ಉದ್ದೇಶ ಈ ಮಾದರಿಯಲ್ಲಿತ್ತು. ಇಲ್ಲಿ ನಾವು ಗಮನಿಸಬೇಕಾದ ಸಂಗತಿ ಎಂದರೆ, ಭಾರತದಲ್ಲಿ ಪುರಾತನ ಕಾಲದಲ್ಲೇ ಇದ್ದಂತಹ ಶಿಕ್ಷಣ ಮಾದರಿಯು ಯುರೋಪಿನಲ್ಲಿ 19ನೇ ಶತಮಾನದವರೆಗೂ ಇರಲಿಲ್ಲ ಎಂಬುದು ವಾಸ್ತವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಮೇಲಿನ ಎರಡೂ ನಿದರ್ಶನಗಳನ್ನು ನೋಡಿದ ನಂತರ ಹೊಸ ಶಿಕ್ಷಣ ನೀತಿಯನ್ನು ಒರೆಗೆ ಹಚ್ಚುವುದು ಹೆಚ್ಚು ಸೂಕ್ತ ಎಂದೆನಿಸುತ್ತದೆ. ಕಳೆದ 200 ವರ್ಷಗಳಿಂದ ಬೆಳೆದು ಬಂದಂತಹ ಮೆಕಾಲೆ ಶಿಕ್ಷಣ ಪದ್ಧತಿಯಲ್ಲಿ ಕಾಲಕ್ರಮೇಣ ಬಹುಶಿಸ್ತೀಯ ಅಧ್ಯಯನವು ಕಣ್ಮರೆಯಾಗತೊಡಗಿತು. ಅಧ್ಯಯನದ ವಿಷಯಗಳನ್ನು ಹಲವಾರು ವಿಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಯಿತು. ಅವಿಭಕ್ತ ಕುಟುಂಬಗಳು ಒಡೆದು ಚೂರಾಗಿ ವಿಭಕ್ತ ಕುಟುಂಬಗಳಾದಂತೆ ವಿಷಯಗಳು ಸಣ್ಣ ಸಣ್ಣ ಚೂರುಗಳಾದವು. ಇದಕ್ಕೆ ಆಯಾ ವಿಷಯಗಳಲ್ಲಾದ ಸಂಶೋಧನೆಗಳು ಕಾರಣವಾಗಿದ್ದರೂ, ಕಾಲಾನಂತರದಲ್ಲಿ ವಿಷಯಗಳು ಕಟ್ಟುನಿಟ್ಟಾದ ಗೋಡೆಗಳನ್ನು ತಮ್ಮ ಸುತ್ತ ಹಾಕಿಕೊಂಡವು. ಇದಕ್ಕೆ ತಕ್ಕಂತೆ ಉನ್ನತ ಶಿಕ್ಷಣದ ಸಂಸ್ಥೆಗಳು ನೀತಿ ನಿಯಮಗಳನ್ನು ರೂಪಿಸಿ 75 ವರ್ಷಗಳಿಂದ ವಿಶ್ವವಿದ್ಯಾಲಯಗಳು ಅಚ್ಚುಕಟ್ಟಾಗಿ ಅವುಗಳನ್ನು ಪಾಲಿಸಿಕೊಂಡು ಬಂದವು. ಆದರೆ ಇದರ ಮೂಲಕ ವಿದ್ಯಾರ್ಥಿಗಳು ಹೆಚ್ಚೆಚ್ಚು ಕೂಪ ಮಂಡೂಕಗಳಾಗುತ್ತಾ ಬಂದರು. ಈ ಹಿಂದೆ ಬಿಡುಗಡೆಯಾದ **"ಫಸ್ಟ್ ರ್ಯಾಂಕ್ ರಾಜು"** ಎಂಬ ಚಲನಚಿತ್ರ ಇಂತಹ ವ್ಯಂಗ್ಯ ಪರಿಸ್ಥಿತಿಯನ್ನು ಸೊಗಸಾಗಿ ಚಿತ್ರಿಸಿದೆ. ವಿದ್ಯಾರ್ಥಿಗಳನ್ನು ಪುಸ್ತಕದ ಹುಳಗಳನ್ನಾಗಿ ಮಾಡಿ ತಾವು ಬದುಕುತ್ತಿರುವ ಸಮಾಜದ ಕುರಿತು ಅಜ್ಞಾನಿಗಳನ್ನಾಗಿ ಬದಲಾಯಿಸಿತು. ವ್ಯಕ್ತಿಯು ಬದುಕನ್ನು ನಡೆಸಲು ಜ್ಞಾನ, ವಿಜ್ಞಾನದ ಜೊತೆಗೆ ಲೋಕಜ್ಞಾನವು ಮುಖ್ಯ ಎನ್ನುವ ಸಂಗತಿಯನ್ನು ಈ ವ್ಯವಸ್ಥೆಯು ಪ್ರಾಯಶಃ ಮರೆತಂತೆ ಕಾಣುತ್ತದೆ.

ಇಂತಹ ಕೂಪದಿಂದ ವಿದ್ಯಾರ್ಥಿಗಳನ್ನು ಹೊರತಂದು ಕೌಶಲ್ಯಯುಕ್ತ ಮತ್ತು ಸಾಮಾಜಿಕ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಇದರ ನೀತಿ ನಿಯಮಗಳು ಅಸ್ಪಷ್ಟ ಸ್ವರೂಪದಲ್ಲಿದ್ದರೂ ಆಶಯ ಮಾತ್ರ ಗಟ್ಟಿಯಾಗಿದೆ. ಭವಿಷ್ಯದ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆ ಹಾಗೂ ಅವರ ಜೀವನಕ್ಕೆ ಅಗತ್ಯವಿರುವ ಕೌಶಲಗಳನ್ನು ಶಿಕ್ಷಣದಿಂದ ಪಡೆಯುವುದೇ ಈ ನೀತಿಯ ಮುಖ್ಯ ಗುರಿಯಾಗಿದೆ. ಇಂತಹ ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ವಿಶ್ವವಿದ್ಯಾಲಯಗಳ ಕರ್ತವ್ಯವಾಗಿದೆ. ಹಾಗೂ ಹಲವಾರು ವಿಶ್ವವಿದ್ಯಾಲಯಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ.

ನಾಲ್ಕು ವರ್ಷದ ಪದವಿ ಕೋರ್ಸಿನಲ್ಲಿ ವಿವಿಧ ಹಂತದ ಪ್ರವೇಶ ಮತ್ತು ನಿರ್ಗಮನದ ಅವಕಾಶಗಳಿವೆ. ಪದವಿಗೆ ಸೇರ್ಪಡೆಯಾಗಿ ಮೊದಲ ವರ್ಷ ಪೂರೈಸಿದರೆ ಸರ್ಟಿಫಿಕೆಟ್ ಕೋರ್ಸ್‌ನ್ನು ಪಡೆಯಬಹುದು, ಎರಡನೇ ವರ್ಷ ಪೂರೈಸಿದರೆ ಡಿಪ್ಲೊಮಾ ಕೊರ್ಸ್‌ನ್ನು ಪಡೆಯಬಹುದು, ಮೂರು ವರ್ಷ ಪೂರೈಸಿದರೆ ಅದನ್ನು ಪದವಿ ಎಂದು ಪರಿಗಣಿಸಲಾಗುತ್ತದೆ. ಹಾಗೂ ನಾಲ್ಕನೇ ವರ್ಷವನ್ನೂ ಪೂರೈಸಿದರೆ ಅದನ್ನು ಗೌರವ ಪದವಿ (ಹಾನರ್ಸ್) ಎಂದು ಪರಿಗಣಿಸಲಾಗುತ್ತದೆ. ನಾಲ್ಕು ವರ್ಷ

ಗೌರವ ಪದವಿಯನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಯು ಕೇವಲ ಒಂದು ವರ್ಷ ಸ್ನಾತಕೋತ್ತರ ಪದವಿಯನ್ನು ಪಡೆದರೆ ಸಾಕಾಗುತ್ತದೆ.ಅಂದರೆ ಗೌರವ ಪದವಿ ಪಡೆದ ನಂತರ ಸ್ನಾತಕೋತ್ತರ ಪದವಿ ಕೇವಲ ಒಂದು ವರ್ಷ ಮಾತ್ರವಿರುತ್ತದೆ.

ಇದರೊಂದಿಗೆ ಶೈಕ್ಷಣಿಕ ಕ್ರೆಡಿಟ್ ಬ್ಯಾಂಕ್‌ನ್ನು ಯುಜಿಸಿಯು ಪರಿಚಯಿಸುತ್ತಿದ್ದು, ವಿದ್ಯಾರ್ಥಿಗಳು ಎಲ್ಲೇ ವಿದ್ಯಾಭ್ಯಾಸ ಮಾಡಿದರೂ ಆನ್‌ಲೈನ್‌ನಲ್ಲಿ ಅವರ ವಿದ್ಯಾಭ್ಯಾಸದ ಕ್ರೆಡಿಟ್ ಸೇರುತ್ತಾ ಹೋಗುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳ ಅಧ್ಯಯನ ಮಧ್ಯೆದಲ್ಲಿ ಬಿಟ್ಟಂತೆ ಆಗುವುದಿಲ್ಲ. ಅವರು ಎಷ್ಟು ಕ್ರೆಡಿಟ್ ಪಡೆದಿರುತ್ತಾರೆ ಅದರ ಆಧಾರದ ಮೇಲೆ ಅವರು ಸರ್ಟಿಫಿಕೆಟ್, ಡಿಪ್ಲೊಮಾ, ಸ್ನಾತಕದಂತಹ ಪದವಿಗಳನ್ನು ಪಡೆದಿದ್ದಾರೆ ಎಂದು ಪರಿಗಣಿಸಲಾಗುತ್ತದೆ. ಇದರ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗಾಗಿ ಅಗತ್ಯವಿರುವ ಪಠ್ಯಕ್ರಮವನ್ನು ಯು.ಜಿ.ಸಿ.ಯ ಮಾರ್ಗಸೂಚಿಯ ಅನುಸಾರ ಅಭಿವೃದ್ಧಿಪಡಿಸಲಾಗಿದೆ. ಒಟ್ಟಿನಲ್ಲಿ ಹೊಸ ಶಿಕ್ಷಣ ನೀತಿಯ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರಾರಂಭವಾಗುತ್ತಿರವ ಪದವಿ ಕೋರ್ಸುಗಳ ಪ್ರಯೋಜನವನ್ನು ವಿದ್ಯಾರ್ಥಿಗಳು ಹೆಚ್ಚಿನದಾಗಿ ಪಡೆಯುವ ಮೂಲಕ ಕೌಶಲಯುಕ್ತ ವ್ಯಕ್ತಿಗಳಾಗಿ ಹೊರಹೊಮ್ಮಬಹುದಾಗಿದೆ.

ಗ್ರಂಥ ಋಣ

1. Bn, S. (2020, July 30). ರಾಷ್ಟ್ರೀಯ ಶಿಕ್ಷಣ ನೀತಿ 2020. ಉನ್ನತ ಶಿಕ್ಷಣದಲ್ಲಿ ಭರ್ಜರಿ ಬದಲಾವಣೆ Vijay Karnataka. https://vijaykarnataka.com/education/board-exams/news/new-national-education-policy-2020-key-highlights-in-higher-education-check-here/articleshow/77252377.cms
2. Mehrotra, D. (2021). NEP 2020- At a Glance for Educators. Notion Press.
3. NEP 2020 AS AN INNOVATIVE TOOL TO BRING REFORMS IN INDIAN EDUCATION SYSTEM. (2020). Strad Research, 7(10). https://doi.org/10.37896/sr7.10/087
4. ರಾಷ್ಟ್ರೀಯ ಶಿಕ್ಷಣ ನೀತಿ 2020. (2020). ಶಿಕ್ಷಣ ಸಚಿವಾಲಯ, ಸರ್ಕಾರ. https://www.education.gov.in/sites/upload_files/mhrd/files/nep/2020/KANNADA.pdf

❖❖❖

ಧರ್ಮಪಾಲರ ಬ್ಯೂಟಿಫುಲ್ ಟ್ರೀ : ವಸಾಹತುಪೂರ್ವ ಭಾರತೀಯ ಶಿಕ್ಷಣ

ಎ. ಷಣ್ಮುಖ
ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

1931ರಲ್ಲಿ ಗಾಂದೀಜಿಯವರು ಲಂಡನ್ನಿನ ಗೋಥಮ್ ಹೌಸ್ನಲ್ಲಿದ್ದ ರಾಯಲ್ ಇನ್ಸ್ಟಿಟ್ಯೂಟ್ ಆಫ್ ಇಂಟರ್ನ್ಯಾಷನಲ್ ಅಫೈರ್ಸ್ನಲ್ಲಿ ಭಾರತದಲ್ಲಿ ಅನಕ್ಷರತೆಗೆ ಕಾರಣಗಳು ಎನ್ನುವ ವಿಷಯದ ಬಗ್ಗೆ ಮಾತನಾಡುತ್ತಾ ಎರಡು ಮುಖ್ಯವಾದ ವಿಚಾರಗಳನ್ನು ಹೇಳುತ್ತಾರೆ:

1. ಇಂದಿನ ಭಾರತವು 50 ಅಥವಾ 100 ವರ್ಷಗಳ ಹಿಂದಿಗಿಂತ ಹೆಚ್ಚು ಅನಕ್ಷರಸ್ಥವಾಗಿದೆ.
2. ಬ್ರಿಟಿಷ್ ಆಡಳಿತಗಾರರು ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಶಿಕ್ಷಣ ಮತ್ತು ಇತರೆ ವಿಷಯಗಳನ್ನು ಪೋಷಿಸುವ ಬದಲಿಗೆ ಅವುಗಳನ್ನು ಮೂಲೋತ್ಪಾಟನೆ ಆರಂಭಿಸಿದರು. ಅವರು ಮಣ್ಣನ್ನು ಅಗೆದು ಅದರ ಬೇರನ್ನು ನೋಡಲಾರಂಭಿಸಿ ಮತ್ತೆ ಆ ಬೇರಿಗೆ ಮಣ್ಣನ್ನು ಮುಚ್ಚದೆ ಹಾಗೆಯೇ ಬಿಟ್ಟರು, ಆ ಸುಂದರ ವೃಕ್ಷ ನಾಶವಾಯಿತು.

ಹಲವು ಶಿಕ್ಷಣ ಮಂಡಳಿಗಳ ಸದಸ್ಯ ಮತ್ತು ಸ್ಕೂಲ್ ಆಫ್ ಓರಿಯಂಟಲ್ ಸ್ಟಡಿಯ ಸಂಸ್ಥಾಪಕನಾಗಿದ್ದ ಫಿಲಿಪ್ ಹರ್ಟಾಗ್ಗೆ ಗಾಂಧಿಜಿಯ ಈ ಮಾತುಗಳು ರುಚಿಸಲಿಲ್ಲ. ತನ್ನ ಹೇಳಿಕೆಗೆ ಗಾಂದೀಜಿ ಸೂಕ್ತ ದಾಖಲೆಗಳನ್ನು ನೀಡಬೇಕೆಂದು ಒತ್ತಾಯಿಸುತ್ತಾನೆ. ಅಲ್ಲಿಂದ ಭಾರತಕ್ಕೆ ಬಂದಮೇಲೆ ಜೈಲು ಸೇರುವುದರಿಂದ ದಾಖಲೆ ನೀಡುವ ಜವಾಬ್ದಾರಿಯನ್ನು ಗಾಂಧಿಜಿ ಕೆ.ಟಿ. ಷಾ ರಿಗೆ ವಹಿಸುತ್ತಾರೆ. ಕೆ.ಟಿ. ಷಾ ಬಾಂಬೆ ಕೌನ್ಸಿಲ್ನ ಬ್ರಿಟಿಷ್ ಅಧಿಕಾರಿ ಪ್ರೆಂಡ್ರೋಗೋಷ್ಟನ ದಾಖಲೆಯನ್ನು ಗಾಂಧೀಜಿಯವರ ಹೇಳಿಕೆಗೆ ಸಮರ್ಥನೆಯಾಗಿ ನೀಡಿ ಹೋರ್ಟಾಗ್ನಿಗೆ ಪತ್ರ ಬರೆಯುತ್ತಾರೆ. ಆದರೆ ಹೋರ್ಟಾಗ್ ಆ ದಾಖಲೆಯನ್ನು ಒಪ್ಪಲು ಸಿದ್ದವಿರುವುದಿಲ್ಲ.

ಈ ವಾಗ್ವಾದಗಳಿಂದ ಪ್ರೇರಿತರಾದ ಗಾಂಧೀವಾದಿಯಾಗಿದ್ದ ಧರಮ್ಪಾಲ್ ಗಾಂಧೀಜಿಯವರು ಉಲ್ಲೇಖಿಸಿದ ಆ ಸುಂದರ ವೃಕ್ಷವೆನ್ನುವ ವಸಾಹತುಪೂರ್ವ ಶಿಕ್ಷಣದ ಸ್ಥಿತಿಯನ್ನು ಬ್ರಿಟಿಷ್ ಅಧಿಕಾರಿಗಳ ವರದಿಗಳು ಮತ್ತು ದಾಖಲೆಗಳಿಂದ ಸಂಗ್ರಹಿಸಿದ ಮಾಹಿತಿ ಆದರಿಸಿ ಕೃತಿಯನ್ನು ರಚಿಸಿ 1983ರಲ್ಲಿ ಪ್ರಕಟಿಸಿತ್ತಾರೆ. ಆ ಕೃತಿಗೆ ಗಾಂಧೀಜಿಯವರು ಉಲ್ಲೇಖಿಸಿದ 'ಬ್ಯುಟಿಫುಲ್ ಟ್ರೀ' ಎನ್ನುವ ಹೆಸರನ್ನೇ ಇಟ್ಟಿದ್ದಾರೆ.

ಬ್ರಿಟನ್ನಿನ ಶಿಕ್ಷಣದ ಸ್ಥಿತಿ

ಎ.ಇ. ಡಾಬ್ಸ್(A.E. Dobbs)ನ 'ಎಜುಕೇಶನ್ ಅಂಡ್ ಸೋಷಿಯಲ್ ಮೋವ್ಮೆಂಟ್ 1700–1852' ಎನ್ನುವ ಕೃತಿ 1919ರಲ್ಲಿ ಪ್ರಕಟವಾಗುತ್ತದೆ. ಈ ಕೃತಿಯಲ್ಲಿ

1852ರಲ್ಲಿ ಆಕ್ಸ್‌ಫರ್ಡ್ ಕಮಿಟಿ ರಿಪೋರ್ಟ್‌ನಲ್ಲಿ ಅಧಿಕೃತವಾಗಿ ದಾಖಲಾಗಿರುವ ಅಂಕಿಅಂಶಗಳನ್ನು ಉಲ್ಲೇಖಿಸಿ 1800 ಕ್ಕಿಂತ ಹಿಂದೆ ಇದ್ದ ಇಂಗ್ಲೇಂಡಿನ ಶಿಕ್ಷಣದ ಸ್ಥಿತಿಯನ್ನು ವಿವರಿಸುತ್ತಾರೆ.

ಪ್ರಾಥಮಿಕ ಶಿಕ್ಷಣ

18ನೇ ಶತಮಾನದ ಕೊನೆಯ ಹೊತ್ತಿಗೆ ಇಂಗ್ಲೇಂಡಿನಲ್ಲಿ 500 ಗ್ರಾಮರ್ ಶಾಲೆಗಳಿದ್ದವು. ಈ ಗ್ರಾಮರ್ ಶಾಲೆಗಳಲ್ಲಿ ಥಿಯಾಲಜಿ ಆಫ್ ಲಾ ಮತ್ತು ಮೆಡಿಸನ್ ಅನ್ನು ಕಲಿಸುತ್ತಿದ್ದರು. ಭೂಮಿ ಇಲ್ಲವೇ 20 ಶೆಲ್ಲಿಂಗ್ ವಾರ್ಷಿಕ ಆದಾಯವಿಲ್ಲದವರಿಗೆ ಈ ಶಾಲೆಗಳಿಗೆ ಪ್ರವೇಶವಿರಲಿಲ್ಲ. ಭೂಮಿ ಮತ್ತು ಆದಾಯವಿಲ್ಲದವರನ್ನು ಅವರ ತಂದೆ–ತಾಯಿಗಳು ಕೆಲಸ ಮಾಡುವ ಎಸ್ಟೇಟ್ಗಳಿಗೇ ಕೆಲಸಕ್ಕೆ ಕಳಿಸಬೇಕಿತ್ತು. 16ನೇ ಶತಮಾನದವರೆಗೂ ಚರ್ಚಲ್ಲಿ ಇಂಗ್ಲೀಷ್ ಬೈಬಲ್ನ ಪಠಣದ ನಿಷೇಧವಿತ್ತು. ಕೇವಲ ಶ್ರೀಮಂತರ ಮನೆಗಳಲ್ಲಿ ಮಾತ್ರ ಬೈಬಲ್ಲನ್ನು ಪಠಿಸಲು ಅವಕಾಶವಿತ್ತು. ಮಕ್ಕಳು ಅವರ ಪೋಷಕರ ವೃತ್ತಿಯನ್ನೇ ಅನುಸರಿಸಬೇಕಿತ್ತು.

17ನೇ ಶತಮಾನದ ಕೊನೆಗೆ ರಿಲಿಜನ್ನಿನ ಶಿಕ್ಷಣ ನೀಡಿ ಸಂಡೇ ವರ್ಶಿಪ್ಗೆ ಸಿದ್ದರಾಗಲು ಲೇಬರ್ ಮಕ್ಕಳಿಗೆ ಚಾರಿಟಿ ಸ್ಕೂಲ್ಗಳನ್ನು ಆರಂಭಿಸಲಾಯಿತು. 1780ರ ನಂತರ ಇದು ಸಾಮಾನ್ಯರೆಲ್ಲರಿಗೂ ಶಿಕ್ಷಣ (ಪಾಪುಲರ್ ಎಜುಕೇಶನ್) ನೀಡಬೇಕೆಂಬ ಸಂಡೇ ಸ್ಕೂಲ್ ಮೂವ್ಮೆಂಟ್ಗೆ ಕಾರಣವಾಗುತ್ತದೆ. ಆಗಲೂ ಈ ಶಿಕ್ಷಣವನ್ನು ಮಿಷನರಿ ಶಾಲೆಗಳಿಗೆ ಸೀಮಿತವಾಗಿಯೇ ಕೇಳಲಾಗುತ್ತಿರುತ್ತದೆ. 'ಪ್ರತಿ ಮಗುವೂ ಬೈಬಲ್ ಓದಬೇಕು' ಎನ್ನುವ ಆಶಯವನ್ನು ಹೊಂದಿದ್ದ ಪ್ರೊಟೆಸ್ಟಂಟ್ ವಿಚಾರಧಾರೆಯ ಭಾಗವಾಗಿ ನಡೆದ ಚಳವಳಿ ಇದು. ಈ ಒತ್ತಾಯವು ಮುಂದೆ ಡೇ ಸ್ಕೂಲ್ನ ಅಗತ್ಯತೆಯನ್ನು ಮುಂದಿಡುತ್ತದೆ.

1834ರಲ್ಲಿ ಉತ್ತಮ ರಾಷ್ಟ್ರೀಯ ಶಾಲೆಗಳು ಬಂದಮೇಲೂ ಸಹ ಶಾಲೆಗಳು ರಿಲಿಜನ್ನಿನ ಪುಸ್ತಕಗಳ ಅಂದರೆ ಬೈಬಲ್ಲಿನ ಓದು ಮತ್ತು ಬರವಣಿಗೆ ಸ್ವಲ್ಪಮಟ್ಟಿಗೆ ಗಣಿತದ ಲೆಕ್ಕಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಕಂಟ್ರಿ (ಹಳ್ಳಿ) ಸ್ಕೂಲ್ಗಳಲ್ಲಿ ಬರವಣಿಗೆಯೂ ಕೂಡ ನಿಷೇಧವಾಗಿತ್ತು. 1802ರಲ್ಲಿ ಪೀಲ್ಸ್ ಆಕ್ಟ್ ಜಾರಿಯಾಗಿ ಭಾನುವಾರದ ವರ್ಶಿಪ್ಗೆ ಹಾಜರಾಗಲು ಮಕ್ಕಳನ್ನು ಸಿದ್ದಪಡಿಸುವ ಗುರಿಯೊಂದಿಗೆ ಆರಂಭವಾದ ಸಂಡೇ ಸ್ಕೂಲ್ಗಳು ತಾವು ವರ್ಶಿಪ್ ಮಾಡುತ್ತಿದ್ದ ಚರ್ಚ್ಗಳಲ್ಲಿ ಪ್ರತಿ ಭಾನುವಾರ ಕಲಿಕೆ 1 ರಿಂದ 2 ಗಂಟೆಗೆ ಸೀಮಿತವಾಗಿದ್ದವು. ಇದರ ಪ್ರಾಯೋಗಿಕ ಪರಿಣಾಮ ಅಷ್ಟೇನೂ ಆಗದೆ ಹೆಚ್ಚು ಜನಪ್ರಿಯತೆಯನ್ನೇನೂ ಗಳಿಸಲಿಲ್ಲವಾದ್ದರಿಂದ ಡೇ ಸ್ಕೂಲ್ ಮೂವ್ಮೆಂಟ್ ಪ್ರಾರಂಭವಾಗುತ್ತದೆ. ಆಗಲೇ ಜೋಸೆಫ್ ಲಾನ್ ಕಸ್ಟರ್ ಮತ್ತು ಆಂಡ್ರ್ಯೂ ಬೆಲ್ ಭಾರತೀಯ ಬೋಧನಾ ವಿಧಾನವನ್ನು ಅನುಸರಿಸಿ ಅಲ್ಲಿ ಜನಪ್ರಿಯರಾಗುತ್ತಾರೆ.

ಶಾಲೆಗಳಿಗೆ ಬರುತ್ತಿದ್ದ ವಿದ್ಯಾರ್ಥಿಗಳ ಪ್ರಮಾಣ: 1792ರಲ್ಲಿ 40,000; 1818ರಲ್ಲಿ 6,74,883; 1851ರಲ್ಲಿ 21,44,377; ಶಾಲೆಗಳ ಸಂಖ್ಯೆ: 1801ರಲ್ಲಿ 3,363; 1851ರಲ್ಲಿ 46,114. ಒಂದು ಮಗುವಿನ ಸರಾಸರಿ ಹಾಜರಾತಿ 1835ರಲ್ಲಿ 1 ವರ್ಷ; 1852ರಲ್ಲಿ 2 ವರ್ಷ; 1757ರಲ್ಲಿ ಶ್ರೆವ್ಬರಿಯಂತ ಖ್ಯಾತ ಶಾಲೆಯಲ್ಲೂ ಸಹ 3 ರಿಂದ 4 ವಿದ್ಯಾರ್ಥಿಗಳಿಗಿಂತ ಹೆಚ್ಚಿರಲಿಲ್ಲ. ಸ್ವಲ್ಪ ಕಾಲಾನಂತರ ಅದು ವಾರ್ಷಿಕ 20ಕ್ಕೆ ಮುಟ್ಟುತ್ತದೆ. ಈಟನ್ ನಂತಹ ಶಾಲೆಗಳಲ್ಲಿ ಇಂಗ್ಲೀಷ್ ಮತ್ತು ಲ್ಯಾಟೀನ್ ಭಾಷೆಗಳಲ್ಲಿ ಬರವಣಿಗೆ

ಅಂಕಗಣಿತ, ಪ್ರಾಚೀನ ಭೂಗೋಳ, ಆಲ್ಜೀಬ್ರಾಗಳನ್ನು ಕಲಿಯುತ್ತಿದ್ದರು. ಆದರೂ 1851ರವರೆಗೂ ಗಣಿತವು ದೈನಂದಿನ ಶಾಲಾ ಕಲಿಕೆಯ ಕೆಲಸದ ಭಾಗವಾಗಿರಲಿಲ್ಲ. ಗಣಿತವನ್ನು ಬೋಧಿಸುವವರು ಶಿಕ್ಷಕರೆಂದು ಸಹ ಪರಿಗಣಿತರಾಗಿರಲಿಲ್ಲ.

ಉನ್ನತ ಶಿಕ್ಷಣ

1800ರವರೆಗೂ ಪ್ರಾಥಮಿಕ ಶಿಕ್ಷಣ ಸಾಮಾನ್ಯ ಜನರಿಗೆ ಸಾಮಾನ್ಯವಲ್ಲದ ಅಥವಾ ನಿಲುಕದ ವಸ್ತುವಾಗಿದ್ದರೂ ಸಹ, ಪ್ರಾಯಶಃ ಭಾರತದ ಪ್ರಾಚೀನ ವಿಶ್ವವಿದ್ಯಾಲಯಗಳಾದ ನಳಂದಾ ಮತ್ತು ತಕ್ಷಶಿಲಾ ಹಾಗೆಯೇ 18ನೇ ಶತಮಾನದ ಕೊನೆಯಭಾಗದವರೆಗೂ ಜನಪ್ರಿಯವಾಗಿದ್ದ ನವದ್ವೀಪ ದಷ್ಟೇ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮತ್ತು ಎಡಿನ್ಬರ್ಗ್ ವಿಶ್ವವಿದ್ಯಾಲಯಗಳು ಇಂಗ್ಲೆಂಡಿಗೆ ಮಹತ್ವದ್ದಾಗಿದ್ದವು. ಈ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿ ಹೊರಬಂದ ವಿದ್ಯಾರ್ಥಿಗಳೇ 1773ರ ನಂತರ ಪ್ರವಾಸಿಗರಾಗಿ, ವಿದ್ವಾಂಸರಾಗಿ, ನ್ಯಾಯಾಧೀಶರುಗಳಾಗಿ ಭಾರತಕ್ಕೆ ಬಂದರು.

1800ರವರೆಗೂ ಈ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿಷಯಗಳನ್ನು ಗಮನಿಸುವುದು ಅದೇ ಕಾಲದ ಭಾರತದ ಶಿಕ್ಷಣ ಸ್ಥಿತಿಯೊಂದಿಗೆ ಹೋಲಿಸಲು ಬಹುಮುಖ್ಯ. ಉದಾ: ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವನ್ನೇ ತೆಗೆದು ಕೊಂಡರೆ: 1546ರಲ್ಲಿ ಡಿವಿನಿಟಿ, ಸಿವಿಲ್ಲಾ, ಮೆಡಿಸಿನ್, ಹೆಬ್ರೂ ಮತ್ತು ಗ್ರೀಕ್ ವಿಷಯಗಳ 5 ಪ್ರೋಫೆಸರ್‌ಶಿಪ್ ಮಾತ್ರವಿತ್ತು. 1619ರಲ್ಲಿ ಜಾಮಿಟ್ರಿ ಮತ್ತು ಅಸ್ಟ್ರೋನಮಿ ಸೇರಿತು; ಅದಾದನಂತರ 1621ರಲ್ಲಿ ನ್ಯಾಚುರಲ್ ಫಿಲಾಸಫಿ ಮತ್ತು ಮಾರಲ್ ಫಿಲಾಸಫಿ; ನಂತರ ವರ್ಷಗಳಲ್ಲಿ ಏನ್ಷಿಯಂಟ್ ಹಿಸ್ಟರಿ(1622); ಗ್ರಾಮರ್, ಅನಾಟಮಿ, ಮೆಟಾಫಿಸಿಕ್ಸ್ (1624); ಮ್ಯೂಸಿಕ್(1626) ಅರೇಬಿಕ್(1636) ಬಾಟನಿ(1669); ಪೊಯಟ್ರಿ(1708); ಮಾಡ್ರನ್ ಹಿಸ್ಟರಿ ಮತ್ತು ಮಾಡ್ರನ್ ಲಾಂಗ್ವೇಜಸ್(1724); ಕಾಮನ್ ಲಾ(1758); ಕೆಮಿಸ್ಟ್ರಿ(1803) ಇತ್ಯಾದಿ ವಿಷಯಗಳ ಪ್ರೊಫೆಸರ್‌ಶಿಪ್‌ಗಳು ಆರಂಭವಾದವು.

19ನೇ ಶತಮಾನದ ಆರಂಭದಲ್ಲಿ ಆಕ್ಸ್‌ಫರ್ಡ್‌ನಲ್ಲಿ 5 ಹಾಲ್ಗಳು ಮತ್ತು 19 ಕಾಲೇಜುಗಳು ಇದ್ದವು. ಅವುಗಳಲ್ಲಿ 500 ಫೆಲೋಗಳಿದ್ದರು, ಅವರಲ್ಲಿಯೇ ಕೆಲವರು ಕಾಲೇಜುಗಳಲ್ಲಿ ಬೋಧಿಸುತ್ತಿದ್ದರು. ಇವರ ಜೊತೆ 1800ರಲ್ಲಿ 19 ಪ್ರೋಫೆಸರ್‌ಗಳಿದ್ದರೆ 1854ರಲ್ಲಿ 25 ಜನ ಪ್ರೋಫೆಸರ್‌ಗಳಿದ್ದರು. 19ನೇ ಶತಮಾನದ ಆರಭದಲ್ಲಿ 760 ಇದ್ದ ವಿದ್ಯಾರ್ಥಿಗಳ ಸಂಖ್ಯೆ 1820–24ರಲ್ಲಿ 1,300ಕ್ಕೆ ಹೆಚ್ಚಾಯಿತು. 19ನೇ ಶತಮಾನದ ಆರಂಭದಲ್ಲಿ ಕಲಿಸುತ್ತಿದ್ದ ಪ್ರಮುಖ ವಿಷಯಗಳು ಥಿಯಾಲಜಿ ಮತ್ತು ಕ್ಲಾಸಿಕ್ಸ್ (ಗ್ರೀಕ್ ಮತ್ತು ಲ್ಯಾಟೀನ್). ಇವುಗಳ ಜೊತೆಗೆ ಮಾರಲ್ ಫಿಲಾಸಫಿ, ರೆಟ್ಹೋರಿಕ್, ಲಾಜಿಕ್, ಎಲಿಮೆಂಟ್ಸ್ ಆಫ್ ಮೆತಮೆಟಿಕಲ್ ಸೈನ್ಸಸ್ ಮತ್ತು ಫಿಸಿಕ್ಸ್ ಕಲಿಸಲಾಗುತ್ತಿತ್ತು. ಆಕ್ಸ್‌ಫರ್ಡ್‌ನ ಕಾಲೇಜುಗಳಿಗೆ ಬಹುಮುಖ್ಯ ಹಣಕಾಸು ಸಂಪನ್ಮೂಲಗಳು ಎಂಡೋಮೆಂಟ್‌ಗಳಿಂದ, ಭೂಮಿಯಿಂದ ಬಂದ ಆದಾಯ ಮತ್ತು ವಿಧ್ಯಾರ್ಥಿಗಳಿಂದ ಶುಲ್ಕದ ರೂಪದಲ್ಲಿ ಬರುತ್ತಿತ್ತು. 1850ರ ಸುಮಾರಿಗೆ ಊಟ, ಬಟ್ಟೆ ಮತ್ತಿತರ ಎಲ್ಲಾ ಖರ್ಚುವೆಚ್ಚಗಳನ್ನು ಸೇರಿಸಿದರೆ ಪ್ರತಿ ವಿದ್ಯಾರ್ಥಿ ವಿಶ್ವವಿದ್ಯಾಲಯದಲ್ಲಿ ಒಂದು ಕೋರ್ಸ್ ಮುಗಿಸಲು ನಾಲ್ಕು ವರ್ಷಕ್ಕೆ ಆ ಕಾಲಕ್ಕೆ 600 ರಿಂದ 800 ಪೌಂಡ್‌ವರೆಗೂ ಪಾವತಿಸಬೇಕಿತ್ತು.

ಭಾರತದಲ್ಲಿ ಶಿಕ್ಷಣದ ಸ್ಥಿತಿ

1813ರಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ 'ಭಾರತೀಯರಲ್ಲಿ ರಿಲಿಜಸ್ ಮತ್ತು ಮಾರಲ್ ಪ್ರಗತಿಯ ಉತ್ತೇಜನ'ಕ್ಕೆ ನೀತಿ ನಿರೂಪಿಸುವ ಕುರಿತು ಚರ್ಚೆ ನಡೆಯುತ್ತದೆ. ಯಾವುದೇ ಹೊಸನೀತಿಯನ್ನು ರೂಪಿಸುವ ಮೊದಲು ಈಗ ಅಸ್ತಿತ್ವದಲ್ಲಿರುವ ಸ್ಥಿತಿಗತಿಯ ಬಗ್ಗೆ ಉತ್ತಮ ತಿಳಿವಳಿಕೆ ಅಗತ್ಯವಿರುವುದರಿಂದ ಭಾರತೀಯ ದೇಶೀ ಶಿಕ್ಷಣದ ಬಗ್ಗೆ ವಿವರವಾದ ಮಾಹಿತಿಯನ್ನು ಪಡೆಯಬೇಕೆಂಬ ತೀರ್ಮಾನವಾಗುತ್ತದೆ. ಇಂದು ಲಭ್ಯವಿರುವ ಪ್ರಕಟಿತ ಮತ್ತು ಅಪ್ರಕಟಿತ ಸರ್ಕಾರಿ ದಾಖಲೆಗಳು ಮತ್ತು ಮಾಹಿತಿ, ಮದ್ರಾಸ್ ಪ್ರಾಂತ್ಯದಲ್ಲಿ 1820ರ ದಶಕದಿಂದ 1830ರ ದಶಕದವರೆಗೆ ದೇಶೀ ಶಿಕ್ಷಣದ ಕುರಿತು ಥಾಮಸ್ ಮನ್ರೋ ನಡೆಸಿದ ನಡೆದ ಅಧಿಕೃತ ಸರ್ವೇ, ಬಂಗಾಲ್ ಮತ್ತು ಬಿಹಾರ್ ನಲ್ಲಿ ಡಬ್ಲ್ಯೂ ಆಡಂ 1835ರಿಂದ 1838ರ ನಡುವೆ ಸಲ್ಲಿಸಿದ ಮೂರು ವರದಿಗಳಿಗೆ ಸೇರಿದ್ದು. ಹಾಗೆಯೇ 1882ರಲ್ಲಿ ಜಿ ಡಬ್ಲ್ಯು ಲೀಟ್ನರ್ ಪಂಜಾಬ್ ಪ್ರಾಂತ್ಯದಲ್ಲಿ 1850ಕ್ಕಿಂತ ಹಿಂದೆ ಇದ್ದಂಥ ಶೈಕ್ಷಣಿಕ ಸ್ಥಿತಿಯನ್ನು 1882ರ ಸ್ಥಿತಿಗೆ ಹೋಲಿಸಿ ಒಂದು ಅನಧಿಕೃತ ಸರ್ವೇ ಮಾಡಿರುವ ದಾಖಲೆಗಳೂ ಸಹ ಲಭ್ಯ ಇವೆ.

ಮದ್ರಾಸ್ ಪ್ರಾಂತ್ಯದಲ್ಲಿ ಶಿಕ್ಷಣದ ಸ್ಥಿತಿ

ಪ್ರಾಥಮಿಕ ಶಿಕ್ಷಣ

ಮಾಹಿತಿಯ ಕುರಿತ ಅವಲೋಕನ: ಶಿಕ್ಷಣ ಒದಗಿಸುತ್ತಿದ್ದ ಪ್ರದೇಶಗಳೆಲ್ಲವನ್ನೂ ಇಂದಿನ ಸ್ಕೂಲ್ ಎನ್ನುವ ಸಂಸ್ಥೆಯ ರೂಪದಲ್ಲಿ ಪ್ರಸ್ತುತಪಡಿಸುವುದು ತಪ್ಪು. ಇದು ಅವುಗಳ ತಪ್ಪು ಅಥವಾ ವಾಸ್ತವವಲ್ಲದ ಗ್ರಹಿಕೆಗಳನ್ನು ಬೆಳಸಬಹುದು. ದೇಶೀ ಶಿಕ್ಷಣವನ್ನು ಪಾಠಶಾಲ, ಮದರಸ, ಮತ್ತು ಗುರುಕುಲ ಎಂಬ ಸಾಂಪ್ರದಾಯಿಕ ಸಂಸ್ಥೆಗಳಲ್ಲಿ ನೀಡಲಾಗುತ್ತಿತ್ತು. ಅವುಗಳು ಸಮುದಾಯಗಳನ್ನೂ ಒಳಗೊಂಡಂತೆ ಸಮುದಾಯಗಳ ಒಳಗೇ ನಡೆಸಲಾಗತ್ತಿತ್ತು. ಅಶಿಕ್ಷಿತ ಕೃಷಿಕರೂ ಅದರ ಪೋಷಕರಾಗಿದ್ದರು. ಶಿಕ್ಷಾ, ಶೀಲಾ ಮತ್ತು ಸಮಾದಿ ಎಂದು ಕೆಲವಡೆ ಕರೆಯಲಾಗುತ್ತಿತ್ತು. ಅವುಗಳೆಲ್ಲವನ್ನೂ ಇಂದಿನ 'ಸ್ಕೂಲ್' ಎನ್ನುವ ನಾಮಾಂಕಿತದಲ್ಲಿ ಗುರುತಿಸುವುದು ದುರ್ಬಲ ಭಾಷಾಂತರವಾಗುತ್ತದೆ.

ವಿಲಿಯಂ ಆಡಂನ ವರದಿಯ ಪ್ರಕಾರ 1830ರ ದಶಕದಲ್ಲಿ ಬೆಂಗಾಲ ಮತ್ತು ಬಿಹಾರ ಪ್ರಾಂತ್ಯದಲ್ಲಿ 1,00,000 ಶಾಲೆಗಳಿದ್ದವು. ಥಾಮಸ್ ಮನ್ರೋ ಪ್ರಕಾರ ಮದ್ರಾಸ್ ಪ್ರಾಂತ್ಯದಲ್ಲಿ ಪ್ರತಿಯೊಂದು ಹಳ್ಳಿಯೂ ಒಂದು ಶಾಲೆ ಇತ್ತು. ಜಿ.ಎಲ್. ಹಿರಿಯ ಅಧಿಕಾರಿ ಪ್ರೆಂಡರ್ಗಸ್ಟ್ (GL Pendergast) ಪ್ರಕಾರ ಬಾಂಬೆ ಪ್ರಾಂತ್ಯದಲ್ಲಿ 1820ರ ದಶಕದಲ್ಲಿ ಚಿಕ್ಕದಿರಲಿ ದೊಡ್ಡದಿರಲಿ ಶಾಲೆಗಳಲ್ಲಿದ ಹಳ್ಳಿಗಳೇ ಇರಲಿಲ್ಲ, ಹಳ್ಳಿ ಚಿಕ್ಕದಿದ್ದರೆ ಒಂದು, ದೊಡ್ಡದಾಗಿದ್ದರೆ ಒಂದಕ್ಕಿಂತ ಹೆಚ್ಚು ಶಾಲೆಗಳಿದ್ದವು. ಜಿ ಡಬ್ಲ್ಯು ಲೀಟ್ನರ್ ನ ಪ್ರಕಾರ 1850ಕ್ಕಿಂತ ಹಿಂದೆ ಪಂಜಾಬ್ ಪ್ರಾಂತ್ಯದಲ್ಲೂ ಹೀಗೆಯೇ ಇತ್ತು.

ಈ ಸಕಾರಾತ್ಮಕ ವಿವರಣೆಗಳನ್ನು ನೀಡಿದ ಮೇಲೆ ಅವರ ಅಭಿಪ್ರಾಯಗಳು ನಂಬಲರ್ಹವಲ್ಲ ಎನ್ನುವಂತೆ ಗುಮಾನಿಯಿಂದ ನೋಡುವ ಪ್ರವೃತ್ತಿ ಬ್ರಿಟನ್ನಿನಲ್ಲಿ ಬೆಳೆಯುತ್ತದೆ. 1860ರ ದಶಕದ ನಂತರ ಈ ವಾಸ್ತವಿಕ ಅಂಕಿಅಂಶಗಳನ್ನೂ ಅಲ್ಲಗಳೆಯುವ ಧೋರಣೆ ಬೆಳೆಯಿತು. ಆ ಮೂಲಕ ಬ್ರಿಟಿಷರು ಬಂದು ಇಲ್ಲಿಯ ಶೈಕ್ಷಣಿಕ

ಹಾಗೂ ಇತರೇ ವ್ಯವಸ್ಥೆಗಳನ್ನು ಶಿಥಿಲಗೊಳಿಸಿದರು ಎನ್ನುವ ರೀತಿಯ ವಿಚಾರಗಳನ್ನು ತಿರಸ್ಕರಿಸುವ ಮತ್ತು ಬ್ರಿಟಿಷ್ ಆಳ್ವಿಕೆಯು ಭಾರತೀಯರಿಗೆ ವರವಾಗಿ ಬಂದಿತು ಎನ್ನುವ ರೀತಿಯ ವಿಚಾರಗಳಿಗೆ ಹೆಚ್ಚು ಉತ್ತೇಜನ ನೀಡುವ ಧೋರಣೆ ನಿಧಾನಕ್ಕೆ ಬೆಳೆಯುತ್ತದೆ.

ಈ ವರದಿಗಳ ಪ್ರಕಾರ 1800ರ ವರೆಗೂ ಭಾರತದಲ್ಲಿ ಇಂಗ್ಲೇಂಡಿಗಿಂತ ಉತ್ತಮವಾದ ಶಿಕ್ಷಣ, ಬೋಧನಾ ಕ್ರಮ, ಪಠ್ಯವಸ್ತುಗಳಿದ್ದವು, ಮತ್ತು ಅವೇ ಹಲವು ಶತಮಾನಗಳಿಂದ ಇಲ್ಲಿ ಅಸ್ತಿತ್ವದಲ್ಲಿದ್ದವು. ಮದ್ರಾಸ್, ಬಿಹಾರ–ಬಂಗಾಲ ಪ್ರಾಂತ್ಯಗಳಲ್ಲಿ ಶೂದ್ರ ಮತ್ತು ಅದಕ್ಕೂ ಕೆಳವರ್ಗದವರು ಸಾವಿರಾರು ಶಾಲೆಗಳಲ್ಲಿದ್ದರು. ಬ್ರಿಟಿಷ್ ಪೂರ್ವ ಭಾರತೀಯ ದೇಶೀ ಆಳ್ವಿಕೆಯ ಹಣಕಾಸು ನೀತಿಯು ಸಂಪನ್ಮೂಲ ಮತ್ತು ಆದಾಯದ ಉತ್ತಮ ಭಾಗವನ್ನು ಶಿಕ್ಷಣಕ್ಕೆ ವಿನಿಯೋಗವಾಗುವಂತಿತ್ತು. ಅಂದರೆ ಬ್ರಿಟಿಷ್ ಪೂರ್ವ ಸಾಮಾಜಿಕ, ರಾಜಕೀಯ ಮತ್ತು ಆಡಳಿತಾತ್ಮಕ ರಚನೆಗಳು ದೇಶೀ ಶಿಕ್ಷಣದ ಪೋಷಕವಾಗಿತ್ತು. ಬ್ರಿಟಿಷ್ ರೆವೆನ್ಯೂ ಆಡಳಿತವು ಈ ವ್ಯವಸ್ಥೆಯನ್ನು ಒಡೆದು ಇಲ್ಲಿದ್ದ ಶಿಕ್ಷಣ ವ್ಯವಸ್ಥೆಯನ್ನು ಅವಸಾನಕ್ಕೆ ತಳ್ಳಿತು.

ಮಲಬಾರ್ ಕಲೆಕ್ಟರ್ನ ವರದಿಯಂತೆ ಅಲ್ಲಿ 1594 ಸ್ಕಾಲರ್ಗಳಿದ್ದರು, ಅವರಿಗೆ ಖಾಸಗೀ ಬೋಧಕರಿದ್ದರು, ಅವರು ಥಿಯಾಲಜಿ, ಲಾ, ಖಗೋಳ, ಮೆಟಾಫಿಸಿಕ್ಸ್, ನೀತಿ, ಮತ್ತು ವೈದ್ಯಕೀಯ ವಿಜ್ಞಾನವನ್ನು ಕಲಿಸುತ್ತಿದ್ದರು. ಮದ್ರಾಸ್ ಕಲೆಕ್ಟರ್ನ ವರದಿ (1826)ಯಂತೆ 26,963 ಶಾಲಾ ಮಟ್ಟದ ವಿದ್ಯಾರ್ಥಿಗಳಿದ್ದು ಅವರು ತಮ್ಮ ಮನೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಸಾಂಸ್ಥಿಕ ಶಾಲೆಗಳಲ್ಲಿ ಹೆಣ್ಣುಮಕ್ಕಳು ಕಡಿಮೆ ಇದ್ದರೂ ಮನೆಗಳಲ್ಲಿ ಕಲಿಯುತ್ತಿದ್ದ ಹೆಣ್ಣುಮಕ್ಕಳು 1/4 ರಿಂದ 1/3ರ ಪ್ರಮಾಣದವರೆಗೂ ಇದ್ದರೆಂದು ಥಾಮಸ್ ಮನ್ರೋ ಅಭಿಪ್ರಾಯ ಪಡುತ್ತಾನೆ.

ಕಲಿಕೆಯ ಭಾಷೆ: ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ 19ನೇ ಶತಮಾನದ ವರೆಗೂ ಶಿಕ್ಷಣದ ಭಾಷೆ ಒರಿಯಾ, ತೆಲುಗು, ಕನ್ನಡ, ಮಲಯಾಳ ಮತ್ತು ತಮಿಳು ಆಗಿತ್ತು. ಆಯಾ ಪ್ರದೇಶಗಳ ಭಾಷೆಯೇ ಶಿಕ್ಷಣದ ಮಾಧ್ಯವೂ ಆಗಿತ್ತು.

ವಿದ್ಯಾರ್ಥಿಗಳ ಜಾತಿಗಳ ಹಿನ್ನಲೆ: 1822–25ರ ದತ್ತಾಂಶದ ಪ್ರಕಾರ ಮದ್ರಾಸ್ ಪ್ರಾಂತ್ಯದಲ್ಲಿ 95%ರಷ್ಟು ಹಿಂದೂಗಳೆ ಇದ್ದರು. ಅವರಲ್ಲಿ ದ್ವಿಜ (ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ) ಜಾತಿಗಳ ವಿದ್ಯಾರ್ಥಿಗಳ ಪ್ರಮಾಣವನ್ನು ನೋಡಿದರೆ ಈಗಿನ ತಿಳುವಳಿಕೆಗೇ ವಿರುದ್ಧವಾದ ಅಂಕಿ–ಅಂಶಗಳು ದೊರೆಯುತ್ತವೆ. ತಮಿಳು ಮಾತನಾಡುವ ಪ್ರದೇಶಗಳಲ್ಲಿ ದ್ವಿಜ ವಿದ್ಯಾರ್ಥಿಗಳ ಪ್ರಮಾಣ 13% (ದಕ್ಷಿಣ ಆರ್ಕಾಟ್) ರಿಂದ 23% (ಚೆಂಗಲ್ ಪೇಟ್) ವರೆಗೆ ಮಾತ್ರ ಇತ್ತು. ಮುಸ್ಲೀಂ ವಿದ್ಯಾರ್ಥಿಗಳ ಪ್ರಮಾಣ 3% (ದಕ್ಷಿಣ ಆರ್ಕಾಟ್) ರಿಂದ 10% (ಚೆಂಗಲ್ ಪೇಟ್) ವರೆಗೆ ಇತ್ತು. ಅದೇ ಶೂದ್ರ ಮತ್ತು ಇಂದು ಪರಿಶಿಷ್ಟರೆಂದು ಗುರುತಿಸುವ ಇತರ ಜಾತಿಗಳ ಪ್ರಮಾಣ 70% (ಸೇಲಂ) ರಿಂದ ಹಿಡಿದು 84% (ದಕ್ಷಣ ಆರ್ಕಾಟ್) ವರೆಗೂ ಇತ್ತು. ಕನ್ನಡ ಮಾತನಾಡುವ ಬಳ್ಳಾರಿ ಜಿಲ್ಲೆಯಲ್ಲಿ ದ್ವಿಜರ ಪ್ರಮಾಣ 33% ರಷ್ಟಿದ್ದರೆ ಶೂದ್ರ ಮತ್ತು ಇತರೆ ಜಾತಿಗಳು 63% ರಷ್ಟಿತ್ತು. ಒರಿಯಾ ಮಾತನಾಡುವ ಗಂಜಾಮ್ ಪ್ರಾಂತ್ಯದಲ್ಲಿ ದ್ವಿಜ ವಿದ್ಯಾರ್ಥಿಗಳ ಪ್ರಮಾಣ 35.5% ಇದ್ದರೆ ಶೂದ್ರ ಮತ್ತು ಇತರರ ಪ್ರಮಾಣ 63.6. ತೆಲುಗು ಮಾತನಾಡುವ ಜಿಲ್ಲೆಗಳಲ್ಲಿ ಮಾತ್ರ ಉಳಿದೆಡೆಗಿಂತ ಶಾಲೆಗೆ ಹೋಗುವ ದ್ವಿಜ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿತ್ತು. ಅದು 24% (ಕಡಪ) ರಿಂದ 46% (ವಿಶಾಖಪಟ್ಟಣ)

ರ ವರೆಗಿತ್ತು. ಶೂದ್ರ ಮತ್ತು ಇತರ ಜಾತಿಗಳ ವಿದ್ಯಾರ್ಥಿಗಳ ಪ್ರಮಾಣ 35% (ಗುಂಟೂರು) 41% (ಕಡಪ ಮತ್ತು ವಿಶಾಖ ಪಟ್ಟಣ) ವರೆಗಿತ್ತು.

ಪ್ರವೇಶಾತಿ ವಯಸ್ಸು: ಬ್ರಾಹ್ಮಣ ವಿದ್ಯಾರ್ಥಿಗಳು 5 ರಿಂದ 6ನೇ ವಯಸ್ಸಿಗೆ ಶಾಲೆಗೆ ಸೇರಿಸುತ್ತಿದ್ದರೆ, ಇತರರು 6–8ನೇ ವಯಸ್ಸಿಗೆ ಸೇರಿಸುತ್ತಿದ್ದರು. ಕೆಲವೊಮ್ಮೆ 3 ರಿಂದ 6ನೇ ವಯಸ್ಸಿನಿಂದ ಹಿಡಿದು 15ನೇ ವಯಸ್ಸಿಗೂ ಶಾಲೆಗೆ ಸೇರಿಸುವ ಪ್ರತೀತಿ ಇತ್ತು. ಸಾಮಾನ್ಯವಾಗಿದ್ದ ನಂಬಿಕೆ ಎಂದರೆ 5ನೇ ವರ್ಷ, 5ನೇ ತಿಂಗಳ 5ನೇ ದಿನ ಶಿಕ್ಷಣ ಆರಂಭಿಸಲು ಪ್ರಶಸ್ತವೆಂದು ತಿಳಿಯಲಾಗಿತ್ತು.

ಕಲಿಕೆಯ ಅವಧಿ: ಸಾಮಾನ್ಯವಾಗಿ ಬೆಳಿಗ್ಗೆ 6 ಗಂಟೆಗೆ ಆರಂಭಿಸಿ ನಂತರ ಒಂದು ಅಥವಾ ಎರಡು (ಬೆಳಿಗ್ಗೆ ಮತ್ತು ಮಧ್ಯಾಹ್ನದ) ಊಟದ ಸಣ್ಣ ವಿರಾಮಗಳ ನಂತರ ಸೂರ್ಯಾಸ್ತದ ಅವಧಿಯವರೆಗೆ ಕಲಿಕೆ ನಡೆಯುತಿತ್ತು. ಕೆಲವೊಮ್ಮೆ ಸೂರ್ಯಾಸ್ತದ ನಂತರವೂ ನಡೆಯುತಿತ್ತು. ಅಂದರೆ ಹೆಚ್ಚುಕಡಿಮೆ ದಿನದ ಪೂರ್ಣಾವಧಿಯವರೆಗೂ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು.

ಶಾಲಾ ಪಠ್ಯಗಳು: ಬಳ್ಳಾರಿಯ ಕಲೆಕ್ಟರನ ವರದಿಯ ಪ್ರಕಾರ ಕನ್ನಡದಲ್ಲಿ ಕಲಿಯುತ್ತಿದ್ದ ಪಠ್ಯಗಳೆಂದರೆ, ರಾಮಾಯಣ, ಮಹಾಭಾರತ, ಭಾಗವತ. ಸಾಮಾನ್ಯ ಇವು ಪಠ್ಯವಾಗಿತ್ತು. ಇವುಗಳ ಜೊತೆಗೆ ಬಸವಪುರಾಣ, ಗಿರಿಜಾಕಲ್ಯಾಣ, ಚನ್ನಬಸವ ಪುರಾಣ, ವಿಶ್ವಕರ್ಮಪುರಾಣ, ರಾಘವಾಂಕ ಕಾವ್ಯ ಮುಂತಾದವುಗಳನ್ನು ಕಲಿಸಲಾಗುತ್ತಿತ್ತು. ಹಾಗೆಯೇ ಅಮರಕೋಶ, ಶಬ್ದಮಂಜರಿ, ಶಬ್ದಮಣಿ ಧರ್ಪಣ ಮುಂತಾದ ಶಬ್ದಕೋಶಗಳೂ ಸಹ ಕಲಿಕೆಯಲ್ಲಿ ಬಳಕೆಯಲ್ಲಿತ್ತು. ಇದೇ ಬಗೆಯಲ್ಲಿ ಆಯಾ ಪ್ರದೇಶಗಳ ಭಾಷೆಗಳಲ್ಲಿ ಲಭ್ಯವಿದ್ದ ಪಾರಂಪರಿಕ ಪಠ್ಯಗಳನ್ನು ಶಿಕ್ಷಣಕ್ಕೆ ಬಳಸಲಾಗಿತ್ತು.

ಉನ್ನತ ಶಿಕ್ಷಣದ ಸ್ಥಿತಿ

ಹಲವು ಕಲೆಕ್ಟರ್‌ಗಳು ತಮ್ಮ ಜಿಲ್ಲೆಗಳಲ್ಲಿ 'ಕಾಲೇಜು'ಗಳು ಎಂದು ಕರೆಯಬಹುದಾದ 1094 ಉನ್ನತ ಕಲಿಕಾ ಸಂಸ್ಥೆ/ ಸ್ಥಳಗಳಿರುವ ಬಗ್ಗೆ ವರದಿ ಮಾಡುತ್ತಾರೆ. ಬಹುಮುಖ್ಯವಾಗಿ ರಾಜಮಂಡ್ರಿಯಲ್ಲಿ 279 ಕಲಿಕಾ ಸ್ಥಳಗಳಿದ್ದು ಅವುಗಳಲ್ಲಿ 1454 ವಿದ್ಯಾರ್ಥಿಗಳಿದ್ದರೆ, ಕೊಯಮತ್ತೂರಲ್ಲಿ 173 ಕೇಂದ್ರಗಳಲ್ಲಿ 724 ವಿದ್ಯಾರ್ಥಿಗಳು, ಗುಂಟೂರಲ್ಲಿ 171 ಕೇಂದ್ರಗಳಲ್ಲಿ 939 ವಿದ್ಯಾರ್ಥಿಗಳು, ತಂಜಾವೂರಿನಲ್ಲಿ 109 ಕೇಂದ್ರಗಳಲ್ಲಿ 769 ವಿದ್ಯಾರ್ಥಿಗಳು, ನೆಲ್ಲೂರಲ್ಲಿ 197 ಕೇಂದ್ರಗಳು, ಬಳ್ಳಾರಿಯಲ್ಲಿ 23 ಕೇಂದ್ರಗಳು, ಹೀಗೆ ಹಲವು ಕಲಿಕಾ ಸ್ಥಳಗಳ ವರದಿಯನ್ನು ಕಲೆಕ್ಟರುಗಳು ನೀಡಿದ್ದರು. ಇವುಗಳಲ್ಲದೆ ಹಲವು ಅಗ್ರಹಾರ ಮತ್ತು ಮನೆಗಳೂ ಸಹ ಉನ್ನತ ವಿದ್ಯಾ ಕಲಿಕಾ ಕೇಂದ್ರಗಳಾಗಿ ಇದ್ದವು. ಈ ವಿದ್ಯಾಕೇಂದ್ರಗಳಲ್ಲಿ ವೇದ, ಶಾಸ್ತ್ರ, ಲಾ, ಖಗೋಳ, ಜ್ಯೋತಿಷ, ಗಣಿತ, ನಾಡಿಶಾಸ್ತ್ರ ಇತ್ಯಾದಿಗಳನ್ನು ಕಲಿಸಲಾಗುತ್ತಿತ್ತು.

ವೃತ್ತಿಪರ ತಜ್ಞತೆಯ (ಪ್ರೊಫೆಷನಲ್ ಸ್ಪೆಷಲೈಸೇಷನ್) ಕಲಿಕೆಯ ಕೆಲವು ವಿಷಯಗಳಾದ ಥಿಯಾಲಜಿ, ಮೆಟಾಫಿಸಿಕ್ಸ್, ಎಥಿಕ್ಸ್, ಲಾ ನಂತವು ಬಹುತೇಕ ಬ್ರಾಹ್ಮಣರಿಗೆ ಸೀಮಿತವಾಗಿದ್ದರೆ, ಅಸ್ಟ್ರೋನಮಿ ಮತ್ತು ಮೆಡಿಕಲ್ ಸೈನ್ಸ್ ಎಲ್ಲಾ ಜಾತಿಗಳ ಹಿನ್ನಲೆಯವರು ಕಲಿಯುತ್ತಿದ್ದರು. ಇದು ಮಲಬಾರಿನಲ್ಲಿ ವರದಿಯಾದ ದತ್ತಾಂಶದಲ್ಲಿ ವೇದ್ಯವಾಗುತ್ತದೆ. ಅಲ್ಲಿ ಅಸ್ಟ್ರೋನಮಿ(ಜ್ಯೋತಿಷ್ಯ)ಯನ್ನು ಕಲಿಯುತಿದ್ದ

808 ವಿದ್ಯಾರ್ಥಿಗಳಲ್ಲಿ 78 ಜನ ಮಾತ್ರ ಬ್ರಾಹ್ಮಣರು, ಮತ್ತು ವೈದ್ಯಕೀಯವನ್ನು ಕಲಿಯುತಿದ್ದ 191 ವಿದ್ಯಾರ್ಥಿಗಳಲ್ಲಿ 31 ಜನ ಮಾತ್ರ ಬ್ರಾಹ್ಮಣರಿದ್ದರು. ಮದ್ರಾಸ್ ಪ್ರೆಸೆಡಿನ್ಸಿಯಲ್ಲಿನ ಸರ್ವೇ ಪ್ರಕಾರ ಹಲವು ಜಾತಿಯವರು ಮೆಡಿಸನ್ ಮತ್ತು ಸರ್ಜರಿ ವೃತ್ತಿ ಮಾಡುತ್ತಿದ್ದರು. ಅವರುಗಳಲ್ಲಿ ಕ್ಷೌರಿಕರು ಸರ್ಜರಿಯಲ್ಲಿ ಅತ್ಯುತ್ತಮರಾಗಿದ್ದರು ಎಂದು ಬ್ರಿಟೀಷ್ ವೈದ್ಯರೇ ಹೇಳಿರುವುದಾಗಿ ವರದಿ ಹೇಳುತ್ತದೆ.

ಮದ್ರಾಸ್ ಕಲೆಕ್ಟರ್‌ನ ವರದಿಯ ಪ್ರಕಾರ ಖಗೋಳಶಾಸ್ತ್ರ ಮತ್ತು ಜ್ಯೋತಿಷ್ಯವನ್ನು ಬ್ರಾಹ್ಮಣರಲ್ಲಿನ ಬಡವರ್ಗದವರು ಕಲಿಯುತಿದ್ದರು. ಅವರ ಪೋಷಕರ (ಆರ್ಥಿಕ) ಪರಿಸ್ಥಿತಿಗನುಣವಾಗಿ ಅವರಿಗೆ ಗೌರವಧನ ನೀಡಲಾಗುತ್ತಿತ್ತು. ಮಧುರೆ ಕಲೆಕ್ಟರ್ನ ವರದಿಯ ಪ್ರಕಾರ ಅಗ್ರಹಾರಗಳಲ್ಲಿ ಪುರಾತನ ಕಾಲದಿಂದಲೂ ವೇದ, ಶಾಸ್ತ್ರ, ಪುರಾಣಗಳನ್ನು ಪಾರಂಪರಿಕವಾಗಿ ಅಧ್ಯಯನ ಮಾಡಿದವರು ತಮ್ಮ ಮನೆಗಳಲ್ಲೇ ಅವನ್ನು ತಮ್ಮ ಮತ್ತು ಇತರ ಮಕ್ಕಳಿಗೆ ಕಲಿಸುತಿದ್ದರು.

10 ರಿಂದ 100 ಮೈಲುಗಳ ದೂರದಿಂದಲೂ ವಿದ್ಯಾರ್ಥಿಗಳು ಕಲಿಕೆಗೆ ಬರುತ್ತಿದ್ದರು. ಅವರಿಗೆ ಛತ್ರಗಳಲ್ಲಿ ಮತ್ತು ಪ್ರತಿ ಬ್ರಾಹ್ಮಣರ ಮನೆಗಳಲ್ಲಿ ಊಟ ನೀಡುತ್ತಿದ್ದರು. ಗುಂಟೂರು ಕಲೆಕ್ಟನರ್‌ನಂತ ಬ್ರಿಟಿಷ್ ಅಧಿಕಾರಿಯೂ ಈ ಬಗ್ಗೆ ಪ್ರಶಂಸೆ ಮಾಡುತ್ತಾನೆ. ಅಲ್ಲಿನ ಶಿಕ್ಷಕರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಉಚಿತವಾಗಿ ಬೋಧನೆ ಮಾಡುತ್ತಾ ಕೃಷಿಭೂಮಿಯಲ್ಲಿ ವ್ಯವಸಾಯ ಮಾಡಿ ಬದುಕುತಿದ್ದರು. ಹೀಗೆ ಉಚಿತವಾಗಿ ಕಲಿಸುವವರಿಗೆ ಸ್ಥಳೀಯ ಸರ್ಕಾರವೂ ಧನ, ದವಸ, ಧಾನ್ಯಗಳನ್ನು ಭೂಮಿಯನ್ನು ನೀಡಲಾಗುತ್ತಿತ್ತು. ಇದರಿಂದಾಗಿ ಶ್ರೀಮಂತರ ಮಕ್ಕಳ ಶಿಕ್ಷಣದ ಖರ್ಚು ಪೋಷಕರೇ ಭರಿಸಿದರೆ ಬಡವರಿಗೆ ಅದು ಉಚಿತವಾಗಿತ್ತು. ಇಲ್ಲಿ ಕಲಿತವರು ಹೆಚ್ಚಿನ ಅಧ್ಯಯನಕ್ಕೆ ಬನಾರಸ್ ನವದ್ವೀಪಂ ಮುಂತಾದೆಡೆ ಹೋಗಿ ಹಲವು ವರ್ಷ ಅಲ್ಲೇ ಇದ್ದು ಪಂಡಿತರಿಂದ ಕಲಿತು ಬರುತ್ತಿದ್ದರು. ವೇದ, ಶಾಸ್ತ್ರ, ಪುರಾಣ, ಗಣಿತ, ಜ್ಯೋತಿಷ, ಮಹಾಕಾವ್ಯಗಳು, ಸಾಹಿತ್ಯ ಗ್ರಂಥಗಳು ಇಲ್ಲಿಯ ಉನ್ನತ ಶಿಕ್ಷಣದ ಸಾಮಾನ್ಯ ಕಲಿಕಾ ಪಠ್ಯಗಳಾಗಿದ್ದವು.

ಖಾಸಗೀ ಶಿಕ್ಷಣ

ಹಲವು ಕಲೆಕ್ಟರ್ಗಳ, ಅದರಲ್ಲೂ ಮುಖ್ಯವಾಗಿ ಕೆನರಾ ಕಲೆಕ್ಟರನ ವರದಿಯ ಪ್ರಕಾರ ಇಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಮನೆಯಲ್ಲೇ ಹೆಚ್ಚಿನ ಕಲಿಕೆ ಮಾಡುತಿದ್ದರು. ಪ್ರತಿ ಹಳ್ಳಿಯಲ್ಲೂ ಈ ಕಲಿಕೆ ನಡೆಯುತಿತ್ತು. ಮಲಬಾರ್ ಪ್ರಾಂತ್ಯದಲ್ಲೂ ಹೆಚ್ಚಿನದಾಗಿ ಮನೆಯಲ್ಲೇ ಶಿಕ್ಷಣ ನೀಡಲಾಗುತ್ತಿತ್ತು. ಪ್ರತಿ ಹಳ್ಳಿಯಲ್ಲೂ ವೈದ್ಯರಿರುತ್ತಿದ್ದರು, ಅವರ ವೈದ್ಯಕೀಯ ಶಿಕ್ಷಣವನ್ನೂ ಮನೆಯಲ್ಲೇ ನೀಡುತ್ತಿದ್ದರು. ಮಲಬಾರ್ನಲ್ಲಿ 194 ಜನ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದರು ಮತ್ತು ಇದೇ ಬಗೆಯ ವೈದ್ಯಕೀಯ ಶಿಕ್ಷಣವೇ ಬಹುತೇಕ ಎಲ್ಲಾ ಜಿಲ್ಲೆಗಳಲ್ಲೂ ಇರಬಹುದು ಎನ್ನುವ ಉಲ್ಲೇಖವನ್ನು ಸಹ ವರದಿಯಲ್ಲಿ ಮಾಡಲಾಗಿದೆ.

ಥಿಯಾಲಜಿ, ಲಾ, ಆಸ್ಟ್ರಾನಮಿ, ಮೆಟಾಫಿಸಿಕ್ಸ್, ಎಥಿಕ್ಸ್, ಕಾವ್ಯ ಮತ್ತು ಸಾಹಿತ್ಯ, ಮೆಡಿಕಲ್ ಸೈನ್ಸ್, ಸಂಗೀತ, ನಾಟ್ಯ ಇತ್ಯಾದಿ ಇನ್ನಿತರ ಯಾವ್ಯಾವುದನ್ನು ಆ ಕಾಲದಲ್ಲಿ ಸಾಂಸ್ಥಿಕವಾಗಿ ಕಲಿಸಲಾಗುತ್ತಿತ್ತೋ ಅವೆಲ್ಲವನ್ನೂ ವಿದ್ಯಾ ಕೇಂದ್ರಗಳಲ್ಲಿ ಸಾಂಸ್ಥಿಕವಾಗಿ ಕಲಿಯುವವರಿಗಿಂತ ಎಷ್ಟೋಪಾಲು ಹೆಚ್ಚು ಖಾಸಗಿಯಾಗಿ ಮನೆಯಲ್ಲಿ

ಕಲಿಯುತಿದ್ದರು. ಮದ್ರಾಸಿನ ವರದಿಯಂತೆ ವಿದ್ಯಾಕೇಂದ್ರಗಳಲ್ಲಿ ಕಲಿಯುವವರಿಗಿಂತ ಖಾಸಗಿಯಾಗಿ ಮನೆಯಲ್ಲಿ ಕಲಿಯುವವರ ಸಂಖ್ಯೆ ಐದು (4.73) ಪಟ್ಟು ಹೆಚ್ಚಿತ್ತು ಎನ್ನುವ ದತ್ತಾಂಶ ಉಲ್ಲೇಖವಾಗಿದೆ. ಇವರುಗಳಲ್ಲಿ ಅರ್ಧದಷ್ಟು ಜನರು ಬ್ರಾಹ್ಮಣ ಮತ್ತು ವೈಶ್ಯ ವಿದ್ಯಾರ್ಥಿಗಳಿದ್ದರೆ ಉಳಿದರ್ದ ಶೂದ್ರ (28,7%) ಮತ್ತು ಇತರ ಜಾತಿ(13%) ಗಳವರಿದ್ದರು. ಥಾಮಸ್ ಮನ್ರೋನ ಲೆಕ್ಕದ ಪ್ರಕಾರ ಮದ್ರಾಸ್ ಸಿಟಿಯಲ್ಲಿ ಖಾಸಗಿಯಾಗಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ 26,903. ಮದ್ರಾಸ್ ಸಿಟಿಯಲ್ಲಿ ಖಾಸಗಿಯಾಗಿ ಮನೆಯಲ್ಲಿ ಕಲಿಯುತ್ತಿದ್ದವರಿಗಿಂತ 4 ರಿಂದ 5 ಪಟ್ಟು ಹೆಚ್ಚು ವಿದ್ಯಾರ್ಥಿಳು ಮಧುರೈ, ತಂಜಾವೂರು, ತಿರುಚಿನಾಪಳ್ಳಿಯಂತಹ ಪ್ರದೇಶಗಳಲ್ಲಿ ಕಲಿಯುತ್ತಿದ್ದರು.

ಹೆಣ್ಣುಮಕ್ಕಳ ಶಿಕ್ಷಣ

ಮದ್ರಾಸ್ ಪ್ರಾಂತ್ಯದ ವಿಶಾಖಪಟ್ಟಣ ಜಯಪುರ ಮತ್ತು ಮಲಬಾರ್ ಪ್ರದೇಶಗಳನ್ನು ಹೊರತುಪಡಿಸಿ ವಿದ್ಯಾಕೇಂದ್ರಗಳಲ್ಲಿ ಕಲಿಯುತ್ತಿದ್ದ ಹೆಣ್ಣು ಮಕ್ಕಳ ಪ್ರಮಾಣ ಕಡಿಮೆ ಇತ್ತು. ಈ ಭಾಗಗಳಲ್ಲಿ ಸಂಗೀತ ಮತ್ತು ನಾಟ್ಯವನ್ನು ಕಲಿಯುವ (ದೇವದಾಸಿ)ವರನ್ನು ಹೊರತು ಪಡಿಸಿ ಹೆಚ್ಚಿನ ಹೆಣ್ಣುಮಕ್ಕಳು ವಿದ್ಯಾಕೇಂದ್ರಗಳಿಗೆ ಹೋಗದೆ ಮನೆಯಲ್ಲೇ ಕಲಿಯುತ್ತಿದ್ದರು. ವಿಶಾಖಪಟ್ಟಣದ ಜಯಪುರದ ಒಟ್ಟು ಬ್ರಾಹ್ಮಣ ವಿದ್ಯಾರ್ಥಿಗಳಲ್ಲಿ 37% ಬ್ರಾಹ್ಮಣ ಹೆಣ್ಣುಮಕ್ಕಳಿದ್ದರೆ, ಶೂದ್ರರಲ್ಲಿ 26.7% ಮತ್ತು ಇತರೆ ಜಾತಿಗಳವರಲ್ಲಿ 30% ಹೆಣ್ಣುಮಕ್ಕಳಿದ್ದರು. ಇಲ್ಲಿ ಒಟ್ಟು ವಿದ್ಯಾರ್ಥಿಗಳಲ್ಲಿ ಹೆಣ್ಣು ಮಕ್ಕಳ ಪ್ರಮಾಣ 29.7% ರಷ್ಟಿತ್ತು. ಮಲಬಾರ್ ಪ್ರಾಂತ್ಯದಲ್ಲಿ ಒಟ್ಟು ಮುಸ್ಲೀಂ ವಿದ್ಯಾರ್ಥಿಗಳಲ್ಲಿ 35.1% ಹೆಣ್ಣುಮಕ್ಕಳಿದ್ದರು, ವೈಶ್ಯರಲ್ಲಿ 15.5%, ಶೂದ್ರರಲ್ಲಿ 19.1%, ಮತ್ತು ಇತರೆ ಜಾತಿಗಳಲ್ಲಿ 12.4% ಹೆಣ್ಣು ಮಕ್ಕಳಿದ್ದರು. ಇಲ್ಲಿ ಒಟ್ಟು ವಿದ್ಯಾರ್ಥಿಗಳಲ್ಲಿ ಹೆಣ್ಣುಮಕ್ಕಳ ಪ್ರಮಾಣ 18.3% ರಷ್ಟಿತ್ತು.

ಬೆಂಗಾಲ್ ಮತ್ತು ಬಿಹಾರ್ದಲ್ಲಿ ಶಿಕ್ಷಣದ ಸ್ಥಿತಿಯ ಕುರಿತು ವಿಲಿಯಂ ಆಡಂನ ವರದಿ:

1835 ರಿಂದ 1838ರ ನಡುವೆ ವಿಲಯಂ ಆಡಂ ಮೂರು ವರದಿಗಳನ್ನು (ಜುಲೈ 1, 1835; ಡಿಸೆಂಬರ್ 23, 1835 ಮತ್ತು ಏಪ್ರಿಲ್ 28, 1838) ಸಲ್ಲಿಸುತ್ತಾರೆ. ಆಡಂನ ಪ್ರಕಾರ ಬಂಗಾಳ ಮತ್ತು ಬಿಹಾರ ಪ್ರೆಸಿಡೆನ್ಸಿಯಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಕನಿಷ್ಠ ಒಂದಾದರೂ ಶಾಲೆಗಳಿದ್ದವು. 1,50,748 ಹಳ್ಳಿಗಳಿದ್ದು ಅವುಗಳಲ್ಲಿ 1,00,000 ಹಳ್ಳಿಗಳಲ್ಲಿ (1830ರ ದಶಕವಾದ) ಈಗಲೂ ಸ್ಕೂಲ್ಗಳಿವೆ ಎನ್ನುತ್ತಾನೆ. ಈ ಭಾಗದಲ್ಲಿ ಪ್ರತಿ ಜಿಲ್ಲೆಗೆ ಕನಿಷ್ಠ 100 ಉನ್ನತ ಶಿಕ್ಷಣ ಕಲಿಕಾ ಕೇಂದ್ರಗಳಿದ್ದವೆಂದೂ ಅದರ ಪ್ರಕಾರ 18 ಜಿಲ್ಲೆಗಳಲ್ಲಿ ಸುಮಾರು 1800 ಉನ್ನತ ಶಿಕ್ಷಣ ಕೇಂದ್ರಗಳಿದ್ದವೆಂದೂ, ಆ ಉನ್ನತ ಶಿಕ್ಷಣ ಕೇಂದ್ರಗಳಲ್ಲಿ 10,800 ವಿದ್ಯಾರ್ಥಿಗಳಿದ್ದರು ಎಂದು ಅಂದಾಜಿಸುತ್ತಾನೆ. ಗೌರವಾನ್ವಿತ ಮನೆಗಳಲ್ಲಿದ್ದ ಪ್ರಾಥಮಿಕ ಶಾಲೆಗಳಲ್ಲಿ 3 ರಿಂದ 5 ಕೊಠಡಿಗಳಿರುತ್ತಿದ್ದವು, ವಸತಿ (ರೆಸಿಡೆನ್ಸಿ) ಶಾಲೆಗಳಲ್ಲಿ 9 ರಿಂದ 11 ಕೊಠಡಿಗಳಿರುತ್ತಿದ್ದವು. ವಸತಿ ಶಾಲೆಗಳಲ್ಲಿ ಊಟ–ವಸತಿ ಉಚಿತವಾಗಿತ್ತು. ಪ್ರಾಥಮಿಕ ಶಿಕ್ಷಣ 8 ರಿಂದ 14 ನೇ ವಯಸ್ಸಿನವರೆಗೆ ನಡೆಯುತ್ತಿತ್ತು. ಉನ್ನತ ಶಿಕ್ಷಣ 11 ರಿಂದ 27ನೇ ವಯಸ್ಸಿನವರೆಗೂ ನಡೆಯುತ್ತಿತ್ತು. ಶಾಲೆಗಳಲ್ಲಿ ವಿದ್ಯಾರ್ಥಿಗಳು ಸುಮಾರು 16 ವರ್ಷಗಳ ಶಿಕ್ಷಣ ಪಡೆಯುತ್ತಿದ್ದರು. ಥಾಣಾ

ಜಿಲ್ಲೆಯ ಒಟ್ಟು 485 ಹಳ್ಳಿಗಳಲ್ಲಿ 123 ಲೊಕಲ್ ಮೆಡಿಕಲ್ ಪ್ರಾಕ್ಟೀಷನರ್ಸ್ ಇದ್ದರು, 205 ವಿಲ್ಲೇಜ್ ಡಾಕ್ಟರ್ಸ್ ಇದ್ದರು, 21 ಸಿಡುಬು ತಜ್ಞರು (ಹೆಚ್ಚಿನವರು ಬ್ರಾಹ್ಮಣರು) 297 ಪ್ರಸೂತಿ ತಜ್ಞೆಯರು, 722 ಹಾವಾಡಿಗರಿದ್ದು ಅವರೂ ಔಷಧಿ ನೀಡುತ್ತಿದ್ದರು ಮಾತ್ರವಲ್ಲ ತಮ್ಮ ವಿಧ್ಯೆಯನ್ನು ಅವರು ವಿದ್ಯಾರ್ಥಿಗಳಿಗೂ ಕಲಿಸುತ್ತಿದ್ದರು.

ಶಾಲಾ ಶಿಕ್ಷಣವನ್ನು ಒಟ್ಟು ನಾಲ್ಕು ಹಂತಗಳಲ್ಲಿ ನೀಡಲಾಗುತ್ತಿತ್ತು

1. ಮೊದಲ 10 ದಿನ ಮರಳಿನ ಮೇಲೆ ಅಕ್ಷರ ಮತ್ತು ಅಂಕಿಗಳ ಅಭ್ಯಾಸ ನಡೆಯುತ್ತಿತ್ತು.
2. ನಂತರ ಎರಡರಿಂದ ಎರಡೂವರೆ ವರ್ಷ ಓದು, ತಾಳೆ ಎಲೆ ಮತ್ತು ಮರದ ಹಲಗೆಯ ಮೇಲೆ ಬರಹ ಕಲಿಸಿ ಮಗ್ಗಿ ಬಾಯಿಪಾಠ ಮಾಡಿಸಲಾಗುತ್ತಿತ್ತು.
3. ಮೂರನೇ ಹಂತದಲ್ಲಿ ಎರಡರಿಂದ ಮೂರು ವರ್ಷ ತಾಳೆ ಎಲೆ, ಬಾಳೆ ಎಲೆ, ಓಲೆಗರಿ ಇತ್ಯಾದಿಗಳ ಮೇಲೆ ಬರವಣಿಗೆಯ ಅಭ್ಯಾಸ ಜೊತೆಗೆ ಗಣಿತ ಪಾಠವಿರುತ್ತಿತ್ತು.
4. ನಾಲ್ಕನೇ ಹಂತದಲ್ಲಿ ಎರಡು ವರ್ಷ ಕಾಗದದ ಮೇಲೆ ಬರವಣಿಗೆ, ರಾಮಾಯಣ ಮಾನಸ ಮಂಗಲ ಓದುವ ಸಾಮರ್ಥ್ಯ ಪಡೆಯಬೇಕಿತ್ತು ಹಾಗೂ ಪತ್ರ, ಭಿನ್ನವತ್ತಳೆ ಇತ್ಯಾದಿಗಳ ಬರವಣಿಗೆಯನ್ನೂ ಕಲಿಸಲಾಗುತ್ತಿತ್ತು.

ಪ್ರಾಥಮಿಕ ಶಿಕ್ಷಣದಲ್ಲಿ ಹೆಚ್ಚಿನ ಶಿಕ್ಷಕರು ಖಾಯಸ್ಥ, ಬ್ರಾಹ್ಮಣ, ಸಡ್ಗೋಪ್ ಮತ್ತು ಅಗುರಿ ಜಾತಿಗಳವರಾಗಿರುತ್ತಿದ್ದರು. 30 ಇತರ ಜಾತಿಗಳಿಂದಲೂ ಬಹಳಷ್ಟು ಶಿಕ್ಷಕರಿದ್ದರು, ಚಾಂಡಾಲ ಜಾತಿಯಿಂದಲೂ 6 ಶಿಕ್ಷಕರಿದ್ದರು.

ಒಟ್ಟು ವಿದ್ಯಾರ್ಥಿಗಳಲ್ಲಿ ಬ್ರಾಹ್ಮಣ ಮತ್ತು ಖಾಯಸ್ಥ ಜಾತಿಗಳವರು 40%ಗಿಂತ ಹೆಚ್ಚಿರಲಿಲ್ಲ. ಬಿಹಾರದ ಎರಡು ಜಿಲ್ಲೆಗಳಲ್ಲಿ ಅವರು 15%ರಿಂದ 16%ರಷ್ಟು ಮಾತ್ರವೇ ಇದ್ದರು. ಆಶ್ಚರ್ಯವೆನಿಸುವ ರೀತಿಯಲ್ಲಿ ಬರ್ದ್ವಾನ್ ಜಿಲ್ಲೆಯಲ್ಲಿ ಅತ್ಯಂತ ಕೆಳಜಾತಿಗಳಾದ ದೋಮ್ ಜಾತಿಯ 61 ಮತ್ತು ಚಾಂಡಲಾ ಜಾತಿಯ 61 ವಿದ್ಯಾರ್ಥಿಗಳಿದ್ದರು. ಅದು ವೈದ್ಯ ಜಾತಿಯ ವಿದ್ಯಾರ್ಥಿಗಳ ಸಂಖ್ಯೆಗೆ(125) ಸಮವೆನಿಸುವಷ್ಟಿತ್ತು. ಆಡಂ ಉಲ್ಲೇಖಿಸುವಂತೆ ಬರ್ದ್ವಾನ್ ಜಿಲ್ಲೆಯಲ್ಲಿ ಇದ್ದ 13 ಮಿಷನರಿ ಶಾಲೆಗಳಲ್ಲಿ ದೋಮ್ ಮತ್ತು ಚಾಂಡಾಲ ವಿದ್ಯಾರ್ಥಿಗಳ ಸಂಖ್ಯೆ ಕೇವಲ 4 ಮಾತ್ರ. 16 ಕೆಳಜಾತಿಗಳ 86 ವಿದ್ಯಾರ್ಥಿಗಳು ಮಾತ್ರ ಈ ಮಿಷನರಿ ಶಾಲೆಗಳಲ್ಲಿದ್ದರು. ಆ ಜಿಲ್ಲೆಯ ಅದೇ ಕೆಳಜಾತಿಗಳ 674 ವಿದ್ಯಾರ್ಥಿಗಳು ಸ್ಥಳೀಯ ದೇಶೀ ಶಾಲೆಗಳಲ್ಲಿದ್ದರು.

ಆಡಂನ ಪ್ರಕಾರ ತಾನು ಸರ್ವೇ ಮಾಡಿದ ಜಿಲ್ಲೆಗಳಲ್ಲಿ 14 ಕ್ರಿಶ್ಚಿಯನ್ ಶಾಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಶಾಲೆಗಳಲ್ಲೂ ಕೆಲವು ವಿದ್ಯಾರ್ಥಿಗಳಿಗೆ ವಾಣಿಜ್ಯ ಲೆಕ್ಕ ಅಥವಾ ಕೃಷಿ ಲೆಕ್ಕಗಳನ್ನು, ಹಾಗೂ ಬಹುತೇಕ ವಿದ್ಯಾರ್ಥಿಗಳಿಗೆ ಇವೆರಡನ್ನೂ ಕಲಿಸಲಾಗುತ್ತಿತ್ತು. ಕ್ರಿಶ್ಚಿಯನ್ ಶಾಲೆಗಳಲ್ಲಿ ಮಾತ್ರ ಕ್ರಿಶ್ಚಿಯನ್ ರಿಲಿಜನ್ನಿನ ಬೋಧನೆಗೆ ಸೀಮಿತವಾಗಿತ್ತು.

ಸಂಸ್ಕೃತ ಶಿಕ್ಷಣ

ಬಂಗಾಲ ಮತ್ತು ಬಿಹಾರ ಪ್ರೆಸೆಡೆನ್ಸಿಯ ಎಲ್ಲಾ 353 ಜಿಲ್ಲೆಗಳಲ್ಲೂ ಸಂಸ್ಕೃತ ಶಿಕ್ಷಣವಿತ್ತು. ಇವುಗಳಲ್ಲಿ ಬರ್ದ್ವಾನ ಜಿಲ್ಲೆಯಲ್ಲಿ ಅತಿ ಹೆಚ್ಚು 190 ಸಂಸ್ಕೃತ ಶಾಲೆಗಳಿದ್ದು 1358 ವಿದ್ಯಾರ್ಥಿಗಳಿದ್ದರೆ, ದಕ್ಷಿಣ ಬಿಹಾರ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ 27 ಶಾಲೆಗಳಿದ್ದು

437 ವಿದ್ಯಾರ್ಥಿಗಳಿದ್ದರು. ಸಂಸ್ಕೃತ ಶಿಕ್ಷಕರಲ್ಲಿ ಬಹುತೇಕ ಬ್ರಾಹ್ಮಣರಿದ್ದರು(355) 5 ಶಿಕ್ಷಕರು ಮಾತ್ರ ವೈದ್ಯ ಜಾತಿಯವರಾಗಿದ್ದರು. ಸಂಸ್ಕೃತ ಶಿಕ್ಷಣದಲ್ಲಿ ಕಲಿಸುತ್ತಿದ್ದ ವಿಷಯ ಹೆಚ್ಚಾಗಿ ವ್ಯಾಕರಣ(1424 ವಿದ್ಯಾರ್ಥಿಗಳು) ತರ್ಕ(378 ವಿದ್ಯಾರ್ಥಿಗಳು) ಲಾ(336 ವಿದ್ಯಾರ್ಥಿಗಳು) ಮತ್ತು ಸಾಹಿತ್ಯ(120 ವಿದ್ಯಾರ್ಥಿಗಳು). ಇತರೆ ವಿಷಯಗಳೆಂದರೆ ಮೈಥಾಲಜಿ(82) ಜೋತಿಷ್ಯಾ(78) ಲೆಕ್ಸಿಕಾಲಜಿ(48) ರೆಟ್ಹೊರಿಕ್(19) ಮೆಡಿಸಿನ್ (18) ವೇದಾಂತ(13) ತಂತ್ರ(4) ಮಿಮಾಂಸ(2) ಸಾಂಖ್ಯ(1). ಕಲಿಕೆಯ ವಯಸ್ಸು ಮತ್ತು ಅವಧಿ: ವ್ಯಾಕರಣ ಕಲಿಕೆ 9 ರಿಂದ 12 ವರ್ಷದೊಳಗೆ ಆರಂಭವಾಗುತ್ತಿತ್ತು. ಲಾ ಮೈಥಾಲಜಿ, ತಂತ್ರ, ಇತ್ಯಾದಿಗಳು 20ನೇ ವಯಸ್ಸಿನ ನಂತರ ಕಲಿಸಲಾಗುತ್ತಿತ್ತು. ಸಾಮಾನ್ಯವಾಗಿ ಕಲಿಕೆಯ ಅವಧಿ 7 ರಿಂದ 25 ವರ್ಷಗಳವರೆಗೆ ಇರುತ್ತಿತ್ತು.

ಪರ್ಶಿಯನ್ ಮತ್ತು ಅರೇಬಿಕ್ ಕಲಿಕೆ

ಆಡಂನ ಪ್ರಕಾರ ಪರ್ಶಿಯನ್ ಶಾಲಾಮಟ್ಟದ ಕಲಿಕೆ ಎಂದು ಪರಿಗಣಿತವಾಗಿದ್ದು ಅದನ್ನು ಕಲಿಯುತಿದ್ದವರ ಸಂಖ್ಯೆ 3479. ದಕ್ಷಿಣ ಬಿಹಾರದಲ್ಲಿ ಅತಿ ಹೆಚ್ಚು ಅಂದರೆ 1424 ವಿದ್ಯಾರ್ಥಿಗಳಿದ್ದರು. 6.8ನೇ ವಯಸ್ಸಿನಿಂದ 10.3ನೇ ವಯಸ್ಸಿನವರು ಪರ್ಶಿಯನ್ ಶಾಲೆಗೆ ಸೇರುತ್ತಿದ್ದರು, ಅವರ ಅಧ್ಯಯನ 11 ರಿಂದ 15 ವರ್ಷದವರೆಗೂ ನಡೆಯುತಿತ್ತು. ಪರ್ಶಿಯನ್ ಕಲಿಯುತ್ತಿದ್ದವರಲ್ಲಿ ಅರ್ಧದಷ್ಟು ಹಿಂದೂಗಳೇ, ಅವರಲ್ಲಿ ಹೆಚ್ಚಾಗಿ ಖಾಯಸ್ಥರೇ ಇದ್ದರು. ಅರೇಬಿಕ್ ಅನ್ನು 175 ವಿದ್ಯಾರ್ಥಿಗಳು ಕಲಿಯುತ್ತಿದ್ದರು. ಹೆಚ್ಚಿನವರು ಮುಸ್ಲೀಮರು. ಅಲ್ಲದೆ 4 ಜನ ಖಾಯಸ್ಥರೂ, 2 ಅಗುರಿ, 1 ತೆಲಿ, ಮತ್ತು 2 ಬ್ರಾಹ್ಮಣ ವಿದ್ಯಾರ್ಥಿಗಳೂ ಇದ್ದರು.

ಪಂಜಾಬಿನ ಶಿಕ್ಷಣ ಸ್ಥಿತಿಯ ಬಗ್ಗೆ ಜಿ. ಡಬ್ಲ್ಯೂ ಲೈಟ್ನರ್ ವರದಿ (1882)

ಆಡಂನ ವರದಿ ಸಲ್ಲಿಕೆಯಾದ 45 ವರ್ಷಗಳ ನಂತರ ಡಾ. ಜಿ.ಡಬ್ಲ್ಯೂ. ಲೈಟ್ನರ್ ಪಂಜಾಬ್ ಪ್ರೆಸೆಡೆನ್ಸಿಯಲ್ಲಿನ ದೇಶೀ ಶಿಕ್ಷಣದ ಬಗ್ಗೆ ಒಂದು ಬೃಹತ್ ಸರ್ವೇ ನಡೆಸಿ ವರದಿ ಸಿದ್ಧಪಡಿಸಿದರು. ಆ ಸರ್ವೇಯ ದತ್ತಾಂಶಗಳು ಅಡಂನ ಸರ್ವೆಯಂತೆಯೇ ಇತ್ತು. ಲೈಟ್ನರನ ಲೆಕ್ಕದ ಪ್ರಕಾರ 1849ರಲ್ಲಿ ಪಂಜಾಬ್ ಪ್ರಾಂತ್ಯದಲ್ಲಿ ಕನಿಷ್ಠವೆಂದರೂ 3,30,000 ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುತ್ತಿದ್ದರು. ಅವರು ಬೇರೆ–ಬೇರೆ ತರಗತಿಗಳಲ್ಲಿದ್ದು ಓದು, ಬರಹ ಮತ್ತು ಲೆಕ್ಕಗಳನ್ನು ಕಲಿಯುತಿದ್ದರು. 1882ರ ಹೊತ್ತಿಗೆ ಈ ಶಾಲೆಗಳಲ್ಲಿ ಕಲಿಯುತ್ತಿದ್ದವರ ಸಂಖ್ಯೆ 1,90,000ಕ್ಕೆ ಇಳಿದಿರುವುದಾಗಿ ಲೆಕ್ಕ ನೀಡುತ್ತಾನೆ. 35–40 ವರ್ಷಗಳ ಹಿಂದೆ ಅವರಲ್ಲಿ ಸಾವಿರಾರು ಜನ ವಿದ್ಯಾರ್ಥಿಗಳಿಗೆ ಅರೆಬಿಕ್ ಮತ್ತು ಸಂಸ್ಕೃತ ಕಾಲೇಜುಗಳಲ್ಲಿ ಅತ್ಯುತ್ತಮ ದರ್ಜೆಯ ಪೌರಾತ್ಯ ಸಾಹಿತ್ಯ ಮತ್ತು ಪೌರಾತ್ಯ ಲಾ ವ್ಯವಸ್ಥೆ, ತರ್ಕ, ತತ್ವಶಾಸ್ತ್ರ, ಮತ್ತು ಮೆಡಿಸಿನ್ ಕಲಿಸಲಾಗುತಿತ್ತು. 1882ರ ನಂತರ ಈ ಕಾಲೇಜುಗಳ ಕಾಣೆಯಾದವು ಇಲ್ಲವೇ ಬಹಳ ಕಡಿಮೆ ಆದವು ಎನ್ನುತ್ತಾನೆ ಲೈಟ್ನರ್. ಕರಕುಶಲ ತಂತ್ರಜ್ಞಾನವನ್ನು ಮನೆಗಳಲ್ಲೇ ಕಲಿಸಲಾಗುತ್ತಿತ್ತು. ಕೆರೆ ನಿರ್ಮಾಣ, ಕಟ್ಟಡ ನಿರ್ಮಾಣ, ಮೆಟ್ಲರ್ಜಿ, ನೇಕಾರಿಕೆ, ಬಳೆ, ಕಾಗದ, ಎಣ್ಣೆ, ಸಾಬೂನು, ಸಿಡಿಮದ್ದು, ದೋಣಿ, ಚಪ್ಪಲಿ, ಶೂ, ಚಾಪೆ, ಬಡಗಿ, ಯಂತ್ರ ಇತ್ಯಾದಿಗಳ ಕಲಿಕೆ ಮನೆಯಲ್ಲೇ ನಡೆಯುತಿತ್ತು. ಈ ವಿದ್ಯೆಗಳನ್ನು ಕಲಿತು ಪಂಜಾಬಿನಲ್ಲಿ ಹೇರಳ

ಉತ್ಪಾದನೆಯಾಗುತ್ತಿತ್ತು. ಅವು ವಿದೇಶಗಳಿಗೆ ರಫ್ತಾಗುತ್ತಿತ್ತು. ಅದರಿಂದ ಭಾರತ ಎಷ್ಟು ಶ್ರೀಮಂತವಾಗಿತ್ತು ಎನ್ನುವುದನ್ನು ದತ್ತಾಂಶಗಳೇ ದೃಢಪಡಿಸುತ್ತವೆ ಎನ್ನುತ್ತಾನೆ ಲೈಟ್ನರ್.

ಲೈಟ್ನರನೇ ಉಲ್ಲೇಖಿಸುವಂತೆ ಇಲ್ಲಿಯವರೆಗೂ ಸಮೃದ್ಧವಾಗಿದ್ದ ಭಾರತದ ಅಧಃಪತನ 19ನೇ ಶತಮಾನದಲ್ಲಿ ಆರಂಭವಾಗಿ ನಂತರದ ದಶಕಗಳಲ್ಲಿ ತೀವ್ರಗತಿಯನ್ನು ಪಡೆಯುತ್ತದೆ. 1769–70ರ ಬಂಗಾಳದ ಬರದಿಂದ ಮೂರನೇ ಒಂದರಷ್ಟು ಜನರ ಸಾವು ಈ ದೇಶದ ದುಸ್ಥಿತಿಯ ಆರಂಭದ ಸೂಚನೆ ಎನ್ನುತ್ತಾನೆ. ಪರಿಣಾಮವಾಗಿ ಸಮೃದ್ಧ ಸ್ಥಿತಿಯಲ್ಲಿದ್ದ ಭಾತತದ ಕುಸಿತ, ದುರ್ಗತಿ ಮತ್ತು ವಿನಾಶ ಹೆಚ್ಚಾಗುತ್ತಾ ಹೋಯಿತು. 1900ರ ನಂತರ ಬ್ರಿಟೀಶರ ಆಳ್ವಿಯಲ್ಲಿ ಹಿಂದಿನ ಭಾರತದಲ್ಲಿದ್ದ ಸಾಮಾಜಿಕ, ರಾಜಕೀಯ, ಆರ್ಥಿಕ ಶೈಕ್ಷಣಿಕ ವ್ಯವಸ್ಥೆಗಳನ್ನೂ ಸೇರಿದಂತೆ ಬಹುತೇಕ ಎಲ್ಲವೂ ಸಂಪೂರ್ಣ ವಿನಾಶವಾಯಿತು. ಬಡತನ ಹೆಚ್ಚಾಯಿತು, ಕೀಳರಿಮೆಯೂ ಹೆಚ್ಚಾಯಿತು. ರೂಢಿ ಪದ್ಧತಿ ಸಂಪ್ರದಾಯಗಳನ್ನು ಕೀಳಾಗಿ ಬಿಂಬಿಸಲಾಯಿತು. ಮೂಲಭೂತ ಸೌಕರ್ಯಗಳೆಲ್ಲವನ್ನೂ ನಾಮಾವಶೇಷಗೊಳಿಸಲಾಯಿತು. ಪರಿಣಾಮವಾಗಿ ಬ್ರಿಟೀಷ್ ಆಳ್ವಿಕೆಯಡಿಯಲ್ಲಿ ಭಾರತೀಯರಲ್ಲಿ ಅಜ್ಞಾನ ಮತ್ತು ಅನಕ್ಷರತೆ ಅಗಣಿತ ಪ್ರಮಾಣದಲ್ಲಿ ಹೆಚ್ಚಳವಾಯಿತು. ಕುಶಲ ಕೈಗಾರಿಕೆಗಳು ನೆಲಕಚ್ಚಿ ಬಡತನವೂ ತಾಂಡವವಾಡತೊಡಗಿತು. ಆದರೆ ಬ್ರಿಟಿಷ್ ಶಿಕ್ಷಣ ಪಡೆದ ಚಿಂತಕರು ಮಾರ್ಕ್ಸಿಸ್ಟರು, ಫೇಬಿಯನ್ಸ್, ಲಿಬರಲಿಸ್ಟ್‌ಗಳಾಗಿ ಭಾರತದ ಬಗ್ಗೆ ಮೇಲಿನ ವಾಸ್ತವಾಂಶಗಳಿಗೆ ವಿರುದ್ಧವಾದ ಚಿತ್ರಣಗಳನ್ನು ವಾದಗಳನ್ನು ಪ್ರಚಾರಕ್ಕೆ ತಂದರು.

ಭಾರತೀಯ ಶಿಕ್ಷಣದ ಪಥನ

ಬಾಂಬೆ ಪ್ರೆಸಿಡೆನ್ಸಿ ಕೌನ್ಸಿಲ್‌ನ ಸದಸ್ಯನಾಗಿದ್ದ ಜಿ.ಎಲ್. ಪ್ರೆಂಡೆರ್ಗಸ್ಟ್ ಎನ್ನುವ ಬ್ರಿಟಿಷ್ ಅಧಿಕಾರಿ ಏಪ್ರಿಲ್ 1821ರಲ್ಲಿ ಹೀಗೆ ಹೇಳುತ್ತಾನೆ: "ದೊಡ್ಡದಿರಲಿ ಸಣ್ಣದಿರಲಿ ಶಾಲೆಗಳಿರದ ಹಳ್ಳಿಗಳೇ ಇರಲಿಲ್ಲ. ದೊಡ್ಡ ಹಳ್ಳಿಗಳಲ್ಲಿ ಒಂದಕ್ಕಿಂತ ಹೆಚ್ಚು; ಪ್ರತಿ ಪಟ್ಟಣಗಳಲ್ಲಿ ಹಲವು, ದೊಡ್ಡ ನಗರಗಳಲ್ಲಿ ಪ್ರತಿ ವಿಭಾಗದಲ್ಲೂ ಶಾಲೆಗಳಿದ್ದವು. ಅಲ್ಲಿ ಸ್ಥಳೀಯ ಯುವಸಮೂಹಕ್ಕೆ ಓದು, ಬರಹ, ಲೆಕ್ಕಗಳನ್ನು ಅತ್ಯಂತ ಕಡಿಮೆ ವೆಚ್ಚದ ವ್ಯವಸ್ಥೆಯಲ್ಲಿ ನೀಡಲಾಗುತ್ತಿತ್ತು. ಪೋಷಕರ ಸಾಮರ್ಥ್ಯಕ್ಕನುಗುಣವಾಗಿ ಒಂದೆರಡು ಬೊಗಸೆಯ ಧಾನ್ಯವನ್ನೋ, ತಿಂಗಳಿಗೆ ಒಂದು ರೂಪಾಯಿಯನ್ನೋ ಸ್ಕೂಲ್ ಮಾಸ್ಟರ್ಗೆ ನೀಡಿದರೆ ಸಾಕಿತ್ತು. ಎಷ್ಟು ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಕಲಿಸಲಾಗುತ್ತಿತ್ತೆಂದರೆ ನಿಖರವಾಗಿ ತಮ್ಮ ಲೆಕ್ಕಗಳನ್ನು ಇಡಲು ಬಾರದ ಕೃಷಿಕನಾಗಲೀ ಅಥವಾ ಸಣ್ಣವ್ಯಾಪಾರಿಯಾಗಲೀ ಇರಲ್ಲಿಲ್ಲ."

ಥಾಮಸ್ ಮನ್ರೋನ ಪ್ರಕಾರ 1823ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿದ್ದ 1,28,50,941 ಜನಸಂಖ್ಯೆಗೆ 1,50,000 ಶಾಲೆಗಳಿದ್ದವು. ಈ ಶಾಲೆಗಳಲ್ಲಿ ದ್ವಿಜ ವಿದ್ಯಾರ್ಥಿಗಳಿಗಿಂತ (13% ರಿಂದ 23%) ಶೂದ್ರ ಮತ್ತು ಇತರ ಕೆಳಜಾತಿಗಳ ಪ್ರಮಾಣ(70% ರಿಂದ 84%) ಹೆಚ್ಚೇ ಇತ್ತು. ಈ ಶಾಲೆಗಳು ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ನಡೆಯುತ್ತಿತ್ತು. ಬೆಳಿಗಿನ ಮತ್ತು ಮಧ್ಯಾಹ್ನದ ಊಟಕ್ಕೆ ಮಾತ್ರವೇ ಸಣ್ಣ ವಿರಾಮವಿರುತ್ತಿತ್ತು. ರಾಮಾಯಣ, ಮಹಾಭಾರತ, ಭಾಗವತ, ವಿಭಿನ್ನ ಪುರಾಣಗಳು, ಗಣಿತ, ಅಮರಕೋಶ, ಶಬ್ದಮಣಿ ಧರ್ಪಣ ಇತ್ಯಾದಿಗಳನ್ನು ಕಲಿಸಲಾಗುತ್ತಿತ್ತು. ಅದೇ 1811ರಲ್ಲಿ ಇಂಗ್ಲೆಂಡ್ ನಲ್ಲಿದ್ದ 95,43,610 ಜನಸಂಖ್ಯೆಗೆ 75,000 ಶಾಲೆಗಳಿದ್ದವು. ಅವುಗಳಲ್ಲಿ ಅರ್ಧದಷ್ಟು ಶಾಲೆಗಳು

ವಾರಕ್ಕೆ ಕೇವಲ 2–3 ಗಂಟೆಗಳು ಮಾತ್ರ ಬೋಧಿಸುವ ಸಂಡೇ ಸ್ಕೂಲುಗಳು. ಬಹುತೇಕ ಶಾಲೆಗಳು ಬೈಬಲ್ನ ಕಲಿಕೆಗೇ ಸೀಮಿತವಾಗಿದ್ದವು. ಹೀಗೆ ಇಂಗ್ಲೇಂಡಿಗೆ ಹೋಲಿಸಿದರೆ 1800ರ ಸಂದರ್ಭದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಭಾರತದ ಸಾಂಪ್ರದಾಯಿಕ ಶಿಕ್ಷಣದ ಪಥನವಾಗಿದ್ದು ಹೇಗೆ ಎನ್ನುವುದು ಆಶ್ಚರ್ಯದ ವಿಷಯವೇ ಹೌದು.

ಚಾರ್ಲ್ಸ್ ಮೆಟ್ಕೆಫೆ, ಹೆನ್ರಿಮೇನ್ ಮುಂತಾದವರು ಹಿಂದಿನ ಬ್ರಿಟಿಷ್ ಅಧಿಕಾರಿಗಳು, ಪ್ರವಾಸಿಗರು, ಮಿಷನರಿಗಳು ಮುಂತಾದವರ ಬರಹಗಳ ಆಧಾರವಾಗಿಟ್ಟುಕೊಂಡು ಬರೆದ ಕೃತಿಗಳಲ್ಲಿ "ಬ್ರಿಟಿಷ್ ಪೂರ್ವ ಭಾರತೀಯ ಸ್ಥಳೀಯ ಆಳ್ವಿಕೆಯು ಹಳ್ಳಿಯ ಗಣರಾಜ್ಯ (ವಿಲೇಜ್ ರಿಪಬ್ಲಿಕ್)ದಲ್ಲಿ ಸಂತೋಷದ ಭೂಮಿಯಾಗಿತ್ತು" ಎನ್ನುವ ಚಿತ್ರಣ ನೀಡುತ್ತಾರೆ. ಇವರುಗಳ ಚಿತ್ರಣದ ಪ್ರಕಾರ ಹಳ್ಳಿಗಳೇ ಸ್ವೇಟ್ನ ಎಲ್ಲಾ ಕೆಲಸಗಳನ್ನು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದವು. ಹಳ್ಳಿಗಳ ನಿರ್ವಹಣೆಯ ಅಧಿಕಾರ ಹಳ್ಳಿಗಳದ್ದೇ. ಕಂದಾಯ ನಿರ್ಣಯ, ನಿಯಂತ್ರಣ ವಸೂಲಿ, ಮತ್ತು ಅದರ ವಿನಿಯೋಗದ ಅಧಿಕಾರವೂ ಹಳ್ಳಿಗಳಿಗೇ ಇತ್ತು. ಅಂದರೆ ಕಂದಾಯ ಶೇಖರಣೆ ಮತ್ತು ಅದರ ವಿಲೇವಾರಿ ಹಳ್ಳಿಗಳದ್ದೇ ಸ್ವಾಯತ್ತ ಅಧಿಕಾರ. ವಿಜಯನಗರದ ವರೆಗಿನ ಭಾರತದ ಆಳ್ವಿಕೆ ಕೇಂದ್ರೀಕೃತ ಮಾದರಿಯದಾಗಿರಲಿಲ್ಲ. ಹಳ್ಳಿಗಳಲ್ಲಿ ಸಂಗ್ರಹವಾಗುತ್ತಿದ್ದ ಒಟ್ಟು ಕಂದಾಯ ಬಹುತೇಕ ಹಳ್ಳಿಗಳಲ್ಲೇ ಬಳಕೆಯಾಗುತ್ತಿತ್ತು. ಜಹಂಗೀರನ ಕಾಲಕ್ಕೆ ಒಟ್ಟು ಕಂದಾಯದಲ್ಲಿ ಅದು 5% ಮಾತ್ರ ಮೊಘಲ್ ಸರ್ಕಾರದ ಬೊಕ್ಕಸಕ್ಕೆ ಹೋಗುತ್ತಿತ್ತು. ಔರಂಗಜೇಬನ ಕಾಲಕ್ಕೂ ಅದು 20%ನ್ನು ದಾಟಲಿಲ್ಲ.

ಶಿಕ್ಷಣ, ವೈದ್ಯಕೀಯ ಸೇವೆ, ಸ್ಥಳೀಯ ಪೊಲೀಸ್, ಹಳ್ಳಿಗಳ ನಿರ್ವಹಣೆ, ನೀರಾವರಿ ಎಲ್ಲವೂ ಹಳ್ಳಿಗಳ ಆಳ್ವಿಕೆಯೇ ನೋಡಿಕೊಳ್ಳುತ್ತಿತ್ತು. ಹೀಗಾಗಿ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣವೂ ಹಳ್ಳಿಗಳೇ ನೋಡಿಕೊಳ್ಳುತ್ತಿದ್ದವು. ಹಳ್ಳಿಗಳ ಆಳ್ವಿಕೆಯ ನೆರವಿನ ಜೊತೆಗೆ ಶ್ರೀಮಂತರು, ಪಾಳೆಯಗಾರರು, ರಾಜರುಗಳು ಶಿಕ್ಷಣಕ್ಕೆ ಹೆಚ್ಚುವರಿ ದಾನ ದತ್ತಿ ನೀಡುತ್ತಿದ್ದರು. ಪೋಷಕರೂ ತಮ್ಮ ಸಾಮರ್ಥ್ಯಕ್ಕನುಗಣವಾಗಿ ಶುಲ್ಕಗಳನ್ನು ನೀಡುತ್ತಿದ್ದರಲ್ಲದೆ ಶಿಕ್ಷಕರಿಗೆ ವೈಯುಕ್ತಿಕ ಕೊಡುಗೆಗಳೂ ಲಭಿಸುತ್ತಿತ್ತು. ಶಿಕ್ಷಣ ಕೇಂದ್ರಗಳ ಮತ್ತು ಶಿಕ್ಷಕರ ಗುಣಮಟ್ಟಕ್ಕೆ ಅನುಗುಣವಾಗಿ ದಾನ ದತ್ತಿ ಕೊಡುಗೆಗಳ ರೂಪದಲ್ಲಿ ಸಂಪನ್ಮೂಲದ ನೆರವು ಅವರಿಗೆ ದೊರೆಯುತ್ತಿತ್ತು.

ಬೆಂಗಾಲ್ ಮತ್ತು ಬಿಹಾರ ಪ್ರೆಸಿಡೆನ್ಸಿಯಲ್ಲಿ 1770ರ ದಶಕ ಮತ್ತು 1780ರ ದಶಕದ ದಾಖಲೆಗಳು ಮತ್ತು ದತ್ತಾಂಶದ ಪ್ರಕಾರ ಅಲ್ಲಿ ಆದಾಯವನ್ನು ವಿನಿಯೋಗವನ್ನು ಖಾಲ್ಸಾ ಜಮೀನ್, ಚಕೆರನ್ ಜಮೀನ್ ಮತ್ತು ಬಾಜೀ ಜಮೀನ್ ಎಂದು ವಿಂಗಡಿಲಾಗಿತ್ತು. ಖಾಲ್ಸಾ ಜಮೀನ್ ಆದಾಯವನ್ನು ಆಳ್ವಿಕೆ ಮತ್ತು ಅಧಿಕಾರ ವೆಚ್ಚಕ್ಕೆ ಬಳಸಲಾಗುತ್ತಿತ್ತು. ಚೆಕೆರನ್ ಜಮೀನ್ ಆದಾಯವನ್ನು ಆಡಳಿತ, ಆರ್ಥಿಕ ಮತ್ತು ಲೆಕ್ಕಚಾರಗಳ ಬರವಣಿಗೆ ವೆಚ್ಚಕ್ಕೆ ಬಳಸಲಾಗುತ್ತಿತ್ತು. ಬಾಜೀ ಜಮೀನ್ ಆದಾಯವನ್ನು ಧಾರ್ಮಿಕ ಮತ್ತು ದಾನದತ್ತಿಗಳ ಉದ್ದೇಶಕ್ಕೆ ಬಳಸಲಾಗುತ್ತಿತ್ತು. ಅಂದರೆ ದೇವಾಲಯ, ದರ್ಗಾ, ಛತ್ರ, ಮಠ, ಅಗ್ರಹಾರ, ಪಂಡಿತರು, ಕವಿಗಳು, ಕಲಾವಿದರು, ವೈದ್ಯರು, ಜ್ಯೋತಿಷಿಗಳು, ಜಾತ್ರೆಗಳು ಇತ್ಯಾದಿಗಳಿಗೆ ಬಳಸಲಾಗುತ್ತಿತ್ತು. ಇವೆಲ್ಲವುಗಳ ಜೊತೆಗೆ ಹೆಚ್ಚಿನ ಪಾಲನ್ನು ಶಿಕ್ಷಣದ ವೆಚ್ಚಕ್ಕೆ ಬಾಜೀ ಜಮೀನಿನಿ ಆಧಾಯವನ್ನು ವ್ಯಯಮಾಡಲಾಗುತ್ತಿತ್ತು. ಅಲ್ಲಿಯ ಒಟ್ಟು ಆಧಾಯದಲ್ಲಿ ಅರ್ದದಷ್ಟನ್ನು ಬಾಜೀ ಜಮೀನ್ ನಲ್ಲಿ ವಿತರಣೆ ಮಾಡಲಾಗುತ್ತಿತ್ತು. ಪ್ರತಿ ಜಿಲ್ಲೆಯಲ್ಲಿ

30,000 ರಿಂದ 36,000 ಜನರಿಗೆ ಧನಸಹಾಯ ನೀಡಲಾಗುತಿತ್ತು. ಇದರಿಂದ ಶಿಕ್ಷಣಕ್ಕೆ ಸಮೃದ್ಧವಾದ ಸಂಪನ್ಮೂಲವಿತ್ತು.

ಮದ್ರಾಸ್ ಪ್ರಾಂತ್ಯದಲ್ಲಿ (ರಾಯಲು ಸೀಮಾ ಮತ್ತು ಬಳ್ಳಾರಿಯನ್ನೂ ಸೇರಿ) 11750–1800ರಲ್ಲಿ 35% ಕೃಷಿ ಭೂಮಿ ಕಂದಾಯ ರಹಿತವಾಗಿತ್ತು. ಮನ್ರೋಗೆ ಇದನ್ನು 5%ಗೆ ಇಳಿಸುವ ಗುರಿಯನ್ನು ನೀಡಲಾಗಿತ್ತು. ತಂಜಾವೂರು ಜಿಲ್ಲೆಯೊಂದರಲ್ಲೇ 1813ರಲ್ಲಿ 1013 ದೇವಾಯಗಳಿಗೆ 43,038 ಪಗೋಡ; 318 ಜನರಿಗೆ 5,930 ಪಗೋಡ ನೀಡಲಾಗಿತ್ತಿತ್ತು. ಆ ಕಾಲಕ್ಕೆ ಒಂದು ಪಗೋಡಕ್ಕೆ ಮೂರುವರೆ ರೂ. ಮೌಲ್ಯವಿತ್ತು. ಎಲ್ಲಾ ಮೂಲಗಳ ಒಟ್ಟು ಆದಾಯದಿಂದ ಮೂರನೇ ಒಂದು ಅಥವಾ ನಾಲ್ಕನೇ ಒಂದರಷ್ಟು ಭಾಗವನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ನೀಡಲಾಗುತ್ತಿತ್ತು. ಅದರಲ್ಲಿ ಬಹುಮುಖ್ಯ ಪಾಲು ಶಿಕ್ಷಣಕ್ಕೆ ಹೋಗುತ್ತಿತ್ತು. ಈ ವ್ಯವಸ್ಥೆಯನ್ನು ಬ್ರಿಟಿಷರು ಬುಡಮೇಲು ಮಾಡಿದರು.

1780ರ ದಶಕದ ನಂತರ ಈ ಬಾಙೀ ಜಮೀನ್ಗಳನ್ನು ಖಾಲ್ಸಾ ಜಮೀನ್ಗಳಲ್ಲಿ ಸೇರಿಸತೊಡಗಿದರು. ನಾಲ್ಕನೆ ಒಂದರಿಂದ ಮೂರನೇ ಒಂದರಷ್ಟು ಬಾಙೀ ಜಮೀನನ್ನು 1780ರ ದಶಕದಲ್ಲೇ ಖಾಲ್ಸಾ ಜಮೀನಿಗೆ ಸೇರಿಸಲಾಗಿತ್ತು. ನಂತರ ಅವು ಇನ್ನೂ ಕಡಿತಗೊಳ್ಳುತ್ತಾ ಬಂದು 19ನೇ ಶತಮಾನದ ಆರಂಬದ ವೇಳೆಗೆ ಬಾಙೀ ಜಮೀನಿನ ಕಲ್ಪನೆಯೇ ನಗಣ್ಯವಾಯಿತು. ಮದ್ರಾಸ್ ಪ್ರಾಂತ್ಯದ ಇಡೀ ಮಲಬಾರ್ನ ಭಾಗ ಭೂಕಂದಾಯ ರಹಿತವಾಗಿತ್ತು. ಅಲ್ಲಿ ವಾಣಿಜ್ಯ ಮತ್ತು ನ್ಯಾಯಾಂಗೀಯ ತೆರಿಗೆಗಳು ಮಾತ್ರವಿತ್ತು. ಹೈದರಾಲಿ–ಟಿಪ್ಪು ಮತ್ತು ಯೂರೋಪಿನ ವಸಾಹತು ಸರ್ಕಾರಗಳು ಮಲಬಾರಿನ ಶಾಂತಿಯನ್ನು ಛಿದ್ರಗೊಳಿಸುವ ವರೆಗೂ ಅಲ್ಲಿ ಹೀಗೆಯೇ ಇತ್ತು.

1800ರ ನಂತರ ಬ್ರಿಟಿಷರು ಕಂದಾಯ ಸುಧಾರಣೆಯ ಹೆಸರಿನಲ್ಲಿ ಎಲ್ಲಾ ಆದಾಯಗಳ ನಿರ್ವಹಣೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಕಂದಾಯ ಮತ್ತು ತೆರಿಗೆಗಳ ಪ್ರಮಾಣದ ಹೆಚ್ಚಳ ಮಾಡತೊಡಗಿದರು. ವೆಚ್ಚ ಮೂಲಗಳ ಪರೀಶೀಲನೆ ಮತ್ತು ಪರೀಕ್ಷೆಯ ಹೆಸರಿನಲ್ಲಿ ಎಲ್ಲಾ ಬಗೆಯ ಸಹಾಯಧನಗಳ ನೀಡಿಕೆಯನ್ನು ಕಡಿತಗೊಳಿಸುತ್ತಾ ಹೋದರು. ಇದರ ಜೊತೆಗೆ ಕೆಲವು ಸಂಸ್ಥೆಗಳು ಮತ್ತು ವ್ಯಕ್ತಿಗಳಿಗೆ (ವಿದ್ಯಾಕೇಂದ್ರ ಮತ್ತು ಶಿಕ್ಷಕರಿಗೆ) ಹಿಂದಿನಷ್ಟೇ ಹಣ ನೀಡಿ ಆ ಹಣದ ಅಪಮೌಲ್ಯಗೊಳಿಸಿದರು. ಪರಿಣಾಮವಾಗಿ ಅಷ್ಟು ಹಣದಲ್ಲಿ ಬದುಕುವುದೇ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಹಿಂದಿನಿಂದ ನಡೆದುಬಂದಂತೆ ಶಿಕ್ಷಣ ನೀಡುವುದನ್ನೂ ಸೇರಿದಂತೆ ಯಾವುದೇ ಸೇವೆಗಳನ್ನು ಮುಂದುವರಿಸುವುದು ಅವರಿಗೆ ಅಸಾಧ್ಯವಾಗುತ್ತದೆ. ಮಾತ್ರವಲ್ಲ ಅವರು ಬೇರೆ ಕೆಲಸಗಳನ್ನು ಆಶ್ರಯಿಸುವ ಇಲ್ಲವೇ ಭಿಕ್ಷಾಟನೆಗೆ ಇಳಿಯುವ ಸ್ಥಿತಿಗೆ ತಲುಪುತ್ತಾರೆ.

ಈಗಾಗಲೇ ಬ್ರಿಟಿಷ್ ಉದ್ಯಮ ಮತ್ತು ಕೈಗಾರಿಕೆಗಳಿಂದ ನಷ್ಟಕ್ಕೊಳಗಾಗಿದ್ದ ದೇಶೀ ಕುಶಲ ಕೈಗಾರಿಕೆಗಳು ತಮಗೇ ಕೆಲಸವಿಲ್ಲದೆ ನಷ್ಟದಲ್ಲಿದ್ದರಿಂದ ಇವರಿಗೆ ಕೆಲಸ ನೀಡುವ ಸ್ಥಿತಿಯಲ್ಲಿ ಅವುಗಳಿರಲಿಲ್ಲ. ಪರಿಣಾಮವಾಗಿ ಅದುವರೆಗೂ ಶಿಕ್ಷಣ ನೀಡುತ್ತಿದ್ದ ಕುಶಲಕರ್ಮಿಗಳು, ಪಂಡಿತರು, ಕವಿಗಳು, ಕಲಾವಿದರು, ನಾಟಕಕಾರರು, ಕ್ಷೌರಿಕರು, ವೈದ್ಯರು ಅಕ್ಷರಶಃ ದಾರಿದ್ರ್ಯಕ್ಕೆ ಸಿಲುಕಿ ಬೀದಿಗೆ ಬಿದ್ದು ಭಿಕ್ಷಾಟನೆಗೆ ಇಳಿಯುವ ಸ್ಥಿತಿಗೆ ಬರುತ್ತಾರೆ. ಪವಿತ್ರ ಕ್ಷೇತ್ರಗಳು, ವೈದ್ಯಕೀಯ ಕ್ಷೇತ್ರಗಳು ಮತ್ತು ವಿದ್ಯಾಕೇಂದ್ರಗಳು ಪೋಷಕರಿಲ್ಲದೆ ಪಾಳುಬಿದ್ದವು. ಇದರಿಂದ ಅತಿಹೆಚ್ಚು ಹಾನಿಗೊಂಡವರು ಇಂದು

ಯಾರನ್ನು ಪರಿಶಿಷ್ಟಜಾತಿ ಎಂದು ಗುರುತಿಸಲಾಗುತ್ತಿದೆಯೋ ಅವರು.

ಬ್ರಿಟಿಷರು ನಿಧಾನಕ್ಕೆ 'ಜಿಲ್ಲಾಡಳಿತ' ಪರಿಕಲ್ಪನೆಯನ್ನು ಬೆಳೆಸಿ ಅದರ ರೂಪದಲ್ಲಿ ಸಂಪೂರ್ಣ ಕಂದಾಯ ಆಡಳಿತವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಬಿಗಿಗೊಳಿಸುತ್ತಾ ಸಾಗುತ್ತಾರೆ. ಇಡೀ ಕಂದಾಯ ಆಡಳಿತವನ್ನು ನೇರ ಬ್ರಿಟಿಷ್ ಸರ್ಕಾರದ ನಿಯಂತ್ರಣಕ್ಕೆ ತೆಗೆದುಕೊಂಡು ಸಾಧ್ಯವಾದ ಮೂಲಗಳಿಂದೆಲ್ಲಾ ಬ್ರಿಟಿಷ್ ಸರ್ಕಾರಕ್ಕೆ ಆದಾಯವನ್ನು ಹೆಚ್ಚಿಸುವ ಕೆಲಸಕ್ಕೆ ಕೈಹಾಕಲಾಗುತ್ತದೆ. ಸಾಂಪ್ರದಾಯಿಕವಾಗಿ ಹಿಂದಿನ ನವಾಬರು ಮತ್ತು ರಾಜರ ಆಳ್ವಿಕೆಯಲ್ಲಿ ಜಿಲ್ಲೆಯಲ್ಲಿ ಸಂಗ್ರಹವಾಗುತ್ತಿದ್ದ ಕಂದಾಯ ಮತ್ತು ಇತರ ತೆರಿಗೆಗಳ ಆದಾಯವನ್ನು ಆಯಾ ಜಿಲ್ಲೆಗಳ ಒಳಗೇ ಖರ್ಚು ಮಾಡಲಾಗುತ್ತಿತ್ತು. ಲೆಕ್ಕದ ದೃಷ್ಟಿಯಿಂದ ಅದನ್ನು ಜಿಲ್ಲಾ ವೆಚ್ಚವೆಂದು ತೋರಿಸಲಾಗುತ್ತಿತ್ತು. ಬ್ರಿಟಿಷರು ಈ ಜಿಲ್ಲಾ ವೆಚ್ಚವನ್ನು 90% ಕಡಿತಗೊಳಿಸಿದರು. ಉದಾ: ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ಹಿಂದೆ 2,82,148 ಪಗೋಡದಷ್ಟಿದ್ದ ಜಿಲ್ಲಾ ವೆಚ್ಚವನ್ನು ಬ್ರಿಟಿಷ್ ಸರ್ಕಾರ 19,143 ಪಗೋಡಕ್ಕೆ ಇಳಿಸುತ್ತದೆ.

ಬಳ್ಳಾರಿಯ ಕಲೆಕ್ಟರ್ ಎ.ಡಿ. ಕ್ಯಾಂಪ್ಬೆಲ್‌ನ ಆಗಷ್ಟ್ 17, 1823ರ ವರದಿಯ ಪ್ರಕಾರ "ಯೂರೋಪಿನ ಉತ್ಪಾದಕರ ಪ್ರವೇಶ ಮತ್ತು ದೇಶೀಯ ಬಂಡವಾಳ/ ಸಂಪನ್ಮೂಲವನ್ನು ಸ್ಥಳೀಯ ಆಳ್ವಿಕೆ ಮತ್ತು ಅಧಿಕಾರಸ್ಥರಿಂದ ಯೂರೋಪಿಯನ್ನರಿಗೆ ವರ್ಗಾವಣೆ ಮಾಡಿದ್ದು ಇಲ್ಲಿಯ ಶಿಕ್ಷಣ ಮತ್ತು ಆರ್ಥಿಕ ಸ್ಥಿತಿಯ ಮೇಲೆ ಬಲವಾದ ಹೊಡೆತ ನೀಡಿತು. ಸ್ಥಳೀಯ ಸರ್ಕಾರ ಮತ್ತು ಅಧಿಕಾರಸ್ಥರು ಆ ಸಂಪನ್ಮೂಲವನ್ನು ಸ್ಥಳೀಯವಾಗಿಯೇ ವ್ಯಯ ಮಾಡುತ್ತಿದ್ದರು. ತಮ್ಮ ಸುಪರ್ದಿಗೆ ಬಂದ ಸಂಪನ್ಮೂಲವನ್ನು ಸ್ಥಳೀಯವಾಗಿ ವ್ಯಯ ಮಾಡುವಂತಿಲ್ಲ ಎನ್ನುವ ಕಾನೂನಿನ ನಿಯಂತ್ರಣ ಯೂರೋಪಿಯನ್ನರಿಗೆ ಇದ್ದುದರಿಂದ ಇಚ್ಛೆ ಇದ್ದವರೂ ಕೂಡ ತಾತ್ಕಾಲಿಕವಾಗಿಯೂ ಇಲ್ಲಿ ವ್ಯಯ ಮಾಡುವಂತಿರಲಿಲ್ಲ. ಪ್ರತಿನಿತ್ಯ ಈ ನೆಲದಿಂದ ಸಂಪತ್ತು ಸೋರಿಕೆಯಾಗುತ್ತಾ ದಿನೇದಿನೇ ದಾರಿದ್ರ್ಯ ವ್ಯಾಪಕವಾಗಿ ಹರಡತೊಡಿಗಿದೆ. ಅಧಿಕೃತವಾಗಿ ಶಾಲೆಗಳಿದ್ದ ಹಲವು ಹಳ್ಳಿಗಳಲ್ಲಿ ಈಗ ಒಂದೂ ಶಾಲೆಗಳಿಲ್ಲ. ಆಳುವ ಅಧಿಕಾರದ ನೆರವಿನೊಂದಿಗೆ ವಿಜ್ಞಾನ ತಂತ್ರಜ್ಞಾನ ವೈಧ್ಯಕೀಯ ಶಿಕ್ಷಣವೂ ಸೇರಿದಂತೆ ಇಲ್ಲಿದ್ದ ಎಲ್ಲ ಬಗೆಯ ಶಿಕ್ಷಣದ ಗುಣಮಟ್ಟ ಜಗತ್ತಿನ ಬೇರೆ ಯಾವ ರಾಷ್ಟ್ರದಲ್ಲೂ ಇರಲಿಲ್ಲ. ಆ ನೆರವನ್ನು ಬಹು ಹಿಂದೆಯೇ ಪೂರ್ಣವಾಗಿ ನಿಲ್ಲಿಸಲಾಗಿದೆ. ಈ ಜಿಲ್ಲೆಯಲ್ಲಿ ಅಳಿದುಳಿದ 533 ಸಂಸ್ಥೆಗಳಲ್ಲಿ ಒಂದಕ್ಕೂ ಈಗ ಸರ್ಕಾರದ ನೆರವು ಇಲ್ಲ ಎನ್ನಲು ನನಗೆ ನಾಚಿಕೆಯಾಗುತ್ತಿದೆ. ಈ ಹಿಂದಿನ ಹಿಂದೂ ಆಳ್ವಿಕೆಯಲ್ಲಿ ಈ ವಿದ್ಯಾಕೇಂದ್ರಗಳಿಗೆ ಬೃಹತ್ ಪ್ರಮಾಣದಲ್ಲಿ ಭೂಮಿ, ಸಂಪನ್ಮೂಲ ಮತ್ತು ಧನಸಹಾಯ ಶಿಕ್ಷಣಕ್ಕಾಗಿ ನೀಡಲಾಗಿತ್ತು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಆ ಆದಾಯಗಳನ್ನು ಯಾವ ನಿರ್ಬಂಧವೂ ಇಲ್ಲದೆ ಈ ಶಿಕ್ಷಣ ಕೇಂದ್ರಗಳು ಸ್ವತಂತ್ರವಾಗಿ ವಿನಿಯೋಗಿಸಲು ಅವಕಾಶವಿತ್ತು. ಅವರು ತಮ್ಮ ಧಾರ್ಮಿಕ ಆಚರಣೆಗಳ ಜೊತೆಗೆ ಶಾಲೆಗಳ ನಿರ್ವಹಣೆ ಮತ್ತು ವಿಜ್ಞಾನದ ಬೆಳವಣಿಗೆಯ ಚಿಂತನೆಯನ್ನು ನಡೆಸುವ ಉದ್ದೇಶವೂ ಸಹ ಆ ಧನಸಹಾಯಗಳಲ್ಲಿತ್ತು." ಈ ಎಲ್ಲಾ ಧನಸಹಾಯಗಳನ್ನು ನಿಲ್ಲಿಸಿದ್ದಲ್ಲದೆ ಭೂಕಂದಾಯ ಪಾವತಿಸದವರ ಮೇಲೆ 15% ಆದಾಯ ತೆರಿಗಯನ್ನು ವಿಧಿಸಲಾಗುತ್ತದೆ.

ಇದನ್ನೇ ಗಾಂಧಿಜಿ 1931ರಲ್ಲಿ ಲಂಡನ್ನಿನ ಭಾಷಣವೊಂದರಲ್ಲಿ "ಈ ಸುಂದರ ಶಿಕ್ಷಣ ವ್ಯೆವಸ್ಥೆಯ ವೃಕ್ಷಕ್ಕೆ ನೀರೆರೆಯುವ ಬದಲಿಗೆ ಅದರ ಬೇರು ಕಾಣುವವರೆಗೂ (ಬ್ರಿಟಿಷರು) ಮಣ್ಣನ್ನು ಅಗೆದು ನೋಡಿದರು. ಅಗೆದು ನೋಡಿದ ಮೇಲೆ ಮಣ್ಣನ್ನು

ಮುಚ್ಚಲಿಲ್ಲ, ಹಾಗೆಯೇ ಒಣಗಲು ಬಿಟ್ಟರು. ಹೀಗೆ ಒಂದು ಸುಂದರವಾದ ವೃಕ್ಷ (ಶಿಕ್ಷಣ ವ್ಯವಸ್ಥೆ) ನಾಶವಾಯಿತು. ಹೀಗೆ ಅವಸಾನಗೊಳಿಸಿ ಆ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮೆಕಾಲೆಯಂತವರು ಅದು ಕಳಪೆ ಮತ್ತು ಮೌಢ್ಯವನ್ನು ಪೋಷಿಸುವ ವ್ಯವಸ್ಥೆ ಎಂಬ ಚಿತ್ರಣಗಳನ್ನು ಬೆಳೆಸಿ ಭಾರತೀಯರಲ್ಲೂ ಆ ಶಿಕ್ಷಣದ ಕುರಿತು ತಿರಸ್ಕಾರ ಮೂಡಿಸಲು ಆರಂಭಿಸಿದರು. ಇದೇ ಬಗೆಯ ಚಿತ್ರಣವೇ ಸತ್ಯವೆಂದು ಕಾರ್ಲ್ಮಾರ್ಕ್ಸ್, ಜೇಮ್ಸ್ ಮಿಲ್, ಮುಂತಾದ ವಿದ್ವಾಂಸರೂ ಮುದ್ರೆ ಒತ್ತಿ ಭಾರತೀಯರ ಮಾನಸಿಕ ಜಗತ್ತಿನಿಂದಲೇ ಮರೆಯಾಗಿಸಿದರು.

ಹೀಗೆ ಸಾವಿರಾರು ವರ್ಷಗಳಿಂದ ಅಸ್ತಿತ್ವದಲ್ಲಿದ್ದ ದೇಶಿ ಶಿಕ್ಷಣ ವ್ಯವಸ್ಥೆಯನ್ನು ಬ್ರಿಟಿಷ್ ಸರ್ಕಾರ ವ್ಯವಸ್ಥಿತವಾಗಿ ಉದಾಸೀನ ಮತ್ತು ಬುಡಮೇಲು ಮಾಡಿ, ಬೇರಿಲ್ಲದ ಪರಕೀಯ ಶಿಕ್ಷಣವನ್ನು ತಂದು ಹೇರಿದ್ದು ಭಾರತಕ್ಕೆ ದುಷ್ಪರಿಣಾಮಗಳ ಸರಣಿಯನ್ನೇ ಆರಂಭಿಸಿತು:

1. ಮೊದಲನೆಯದಾಗಿ ಭಾರತೀಯರಲ್ಲಿ ಸಾರ್ವತ್ರಿಕವಾಗಿ ಜೀವಂತವಿದ್ದ ಸಾಕ್ಷರತೆ ಮತ್ತು ಶಿಕ್ಷಣದ ಕುರಿತ ಜ್ಞಾನವನ್ನು ಸಂಪೂರ್ಣ ಅಳಿಸಿಹಾಕಿತು. ಇಂದಿಗೂ ಆಧುನಿಕ ಸಾರ್ವತ್ರಿಕ ಶಿಕ್ಷಣ ಮತ್ತು ಸಾಕ್ಷರತೆ ಅಭಿಯಾನದ ಪ್ರಯತ್ನಗಳು ಆ ಮಟ್ಟದ ಸಫಲತೆಯನ್ನು ಪಡೆಯಲು ಸಾಧ್ಯವಾಗದೆ ಹೆಣಗುತ್ತಿವೆ.
2. ಸಾಂಪ್ರದಾಯಿಕವಾಗಿ ಸಮಾಜದ ಎಲ್ಲಾ ವರ್ಗದ ಜನರು ಅತ್ಯುತ್ತಮ ಮಟ್ಟದ ಶಿಕ್ಷಣವನ್ನು ಪಡೆದು ಮುಕ್ತವಾದ, ಸೂಕ್ತವಾದ ಹಾಗೂ ಗೌರವಯುತವಾದ ರೀತಿಯಲ್ಲಿ ತಮ್ಮ ಹಳ್ಳಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಮಾತ್ರವಲ್ಲದೆ ಅವರು ಇಚ್ಛೆಪಟ್ಟರೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಅವರು ಭಾಗವಹಿಸುವ ಸಾಧ್ಯತೆಯನ್ನು ಹೊಂದಿದ್ದ ಭಾರತೀಯ ಸಾಮಾಜಿಕ ಸಮತೋಲನವನ್ನು ನಿರ್ಮೂಲನೆಗೊಳಿಸಿತು.
3. ಈ ಬಗೆಯ ವಿನಾಶವು ಆರ್ಥಿಕ ವಲಯಕ್ಕೂ ವಿಸ್ತರಣೆಯಾಗಿ ಇಂದು ಯಾರನ್ನು 'ಪರಿಶಿಷ್ಟ ಜಾತಿ'ಗಳೆಂದು ಗುರುತಿಸಲಾಗುತ್ತಿದೆಯೋ ಆ ಜಾತಿಗಳವರಿಗೆ ಮತ್ತು ಅದಕ್ಕಿಂತ ಸ್ವಲ್ಪ ಕಡಿಮೆ ಮಟ್ಟದಲ್ಲಿ 'ಹಿಂದುಳಿದ ವರ್ಗ'ವೆಂದು ಕರೆಯಲ್ಪಡುವ ರೈತಾಪಿ ವರ್ಗಕ್ಕೆ ಸೇರಿದದವರ ಅಂತಸ್ತು, ಸಾಮಾಜಿಕ–ಆರ್ಥಿಕ ಪರಿಸ್ಥಿತಿ ಹಾಗೂ ವೈಯುಕ್ತಿಕ ಘನತೆಯನ್ನು ಕುಗ್ಗಿಸಿ ಅವರನ್ನು ಅಧೋಗತಿಗಿಳಿಸಿತು.
4. ಬಹುಮುಖ್ಯವಾಗಿ ಇಂದಿಗೂ ಬಹಳಷ್ಟು ಶಿಕ್ಷಿತ ಭಾರತೀಯರನ್ನೂ ಸಹ ತಾವು ಬದುಕುತ್ತಿರುವ ಸಮಾಜ, ಆ ಸಮಾಜವನ್ನು ಮುಂದುರಿಸುತ್ತಿರುವ ಸಂಸ್ಕೃತಿ ಮತ್ತು ಅವರ ಸಹಜೀವಿಗಳ ಕುರಿತೇ ಅಜ್ಞಾನಿಗಳನ್ನಾಗಿಟ್ಟಿದೆ. ಎಲ್ಲಕ್ಕೂ ಮಿಗಿಲಾಗಿ, ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಆತ್ಮವಿಶ್ವಾಸವಿಲ್ಲದ, ಸ್ವಾಭಿಮಾನವಿಲ್ಲದ, ಹೆಮ್ಮೆಯಿಲ್ಲದ ದುರಂತಮಯವಾದ ಸ್ಥಿತಿಯಲ್ಲಿ ಭಾರತೀಯರನ್ನಿಟ್ಟಿದೆ ಎನ್ನುತ್ತಾರೆ ಧರಮ್ಪಾಲ್.

ಆಕರ: Dharampal (2021), "The Beautiful Tree: Indiagenous Indian Education in the Eighteenth Century", Dharampal Classic Series 4, Rashtrotthana Sahitya, Bengaluru.

❖❖❖

RNI Reg No. : KARKAN/2012/49351

CHINTHANA BAYALU A Peer Reviewed Journal ISSN:2278-2192
Kannada Quarterly, Volume-11, Issue-2, October-December 2022
Edited, Published, Printed & Owned by
Rashma G. Bhat
Door No. 11-109, Madankapa Post
Bantwal Taluk, Dakshina Kannada - 574219

Printed at
Aakriti Printa
Light House Hill Road, Mangaluru - 575 001

Pages : 64

ಸಾಹಿತ್ಯ ಮಂಥನ : ಮಾಸಿಕ ಇಪ್ಪತ್ತು
(ಅಂತರ್ಜಾಲ ಪತ್ರಿಕೆ)
ಮುಖ್ಯ ಪತ್ರಿಕಾಧಿಪತಿ : ಮಾಸಿಕ ಅಮೃತವರ್ಷ
ಪತ್ರಿಕಾ ಪತ್ರಿಕಾಧಿಪತಿ : ಮಾಸಿಕ ಬಂದಿ ಸಾಹಿತಿ
ಆಡಳಿತ (ಪ್ರಧಾನಿಸಿ) ಮಂಥನ : ಮಾಸಿಕ ಪತ್ರಿಕಾ ಸಾಹಿತಿ
ಮಾಸಿಕಾಧಿಪತಿ ಮಂಥನ : ಮಾಸಿಕ ಪತ್ರಿಕಾ ಸಾಹಿತಿ
ಮಾಸಿಕ ಪತ್ರಿಕೆ : ಮಾಸಿಕ ಪತ್ರಿಕೆ

ಮಾಸಿಕಾಧಿಪತಿ ಪತ್ರಿಕೆಯ ಮಾಸಿಕ "ಪತ್ರಿಕಾ ಮಾಸಿಕ" ಪತ್ರಿಕೆಯ ಪತ್ರಿಕೆಗಳಿಂದ ಪತ್ರಿಕೆಯ ಪತ್ರಿಕೆಯ ಪತ್ರಿಕೆಯ